# ಭಗವನ್ನಾಮಸ್ಮರಣೆಯ ಒಂದು ವೈಶಿಷ್ಟ್ಯ

**ಎಸ್. ಪಿ. ಶ್ರೀನಿವಾಸ ಭಟ್ಟಜಿ**

**ಭಾಗ - ೨**

ನಮ್ಮ ಪೂರ್ವಿಕರು ಅದ್ಭುತ ಕೊಪ್ಪರಿಗೆಗಳನ್ನು ನಮಗೆ ಕೊಟ್ಟಿದ್ದಾರೆ, ಆದರೆ ಅವು ಹಣದ ಕೊಪ್ಪರಿಗೆಗಳೂ, ಬಂಗಾರದ ಕೊಪ್ಪರಿಗೆಗಳನ್ನು ಅಲ್ಲ. ಅವುಸಿಕ್ಕಿದರೂ ರಹಸ್ಯವಾಗಿಟ್ಟುಕೊಂಡರೂ ಸುಖವಿಲ್ಲ ಏಕೆಂದರೆ, ಇದೆಲ್ಲಾ ಸರಕಾರಕ್ಕೆ ಸೇರಿದ್ದು, ಸರಕಾರಕ್ಕೆ ಗೊತ್ತಾದರೆ ಅವರು ಕಿತ್ತುಕೊಂಡು ಹೋಗುತ್ತಾರೆ. ಬಂಧು ಜನಗಳಿಗೆ ಅಲ್ಪಸ್ವಲ್ಪ ಕೊಡಬೇಕಾಗುತ್ತದೆ. ಹೇಗಿದ್ದರೂ ಭಯವೇ, ನಿದ್ದೆಯೂ ಬಾರದು. ಇದನ್ನೇ ಪುರಂದರದಾಸರು ಬಹುಚಂದದಿಂದ ಹಾಡಿದ್ದಾರೆ.

ಹೇಮ ಹೊನ್ನು ಹಣಗಳಿಗೆ ಹೇರಳ ಭಯ ಉಂಟು।
ರಾಮ ನಾಮ ಸ್ಮರಣೆಗಂತೂ ಯಾರ ಭಯವೂ ಇಲ್ಲವಯ್ಯಾ ॥
ನಿಮ್ಮ ಭಾಗ್ಯ ದೊಡ್ಡದೊ ನಮ್ಮ ಭಾಗ್ಯ ದೊಡ್ಡದೋ ।
ಸಮ್ಮತಿಂದ ನಾವೂ ನೀವೂ ಸಾಟಿ ಮಾಡಿ ನೋಡುವ ಬನ್ನಿ ॥

**ಮಹಾವಿಪತ್ತೌ ಸಂಸಾರೇ ಯಃ ಸ್ಮರೇನ್ಮಧುಸೂದನಮ್ ।**
**ವಿಪತ್ತೌ ತಸ್ಯಸಂಪತ್ತಿರ್ಭವೇದಿತ್ಯಾಹಶಂಕರಃ ॥**

ಸಂಸಾರದಲ್ಲಿ ಆಪತ್ತು ವಿಪತ್ತುಗಳು ಬರುವುದು ಸಹಜವೇ. ಆದರೆ ಇಂಥ ಸಂದರ್ಭಗಳಲ್ಲಿ ಯಾರು ಮಧುಸೂದನನನ್ನು ಸ್ಮರಣೆ ಮಾಡುತ್ತಾರೋ ಆ ವಿಪತ್ತೇ ಅವರಿಗೆ ಮುಂದೆ ಸಂಪತ್ತಾಗಿ ಪರಿಣಮಿಸುವುದು. ಧನ ಸಂಪಾದನೆಯೇ ಮಹತ್ಕಾರ್ಯವೆಂದು ಎಣಿಸುವವರಿಗೆ ಆಚಾರ್ಯ ಶಂಕರ ಭಗವತ್ಪಾದರೂ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

**ಅರ್ಥಮನರ್ಥಂ ಭಾವಯನಿತ್ಯಂ ನಾಸ್ತಿತತಃ ಸುಖಲೇಶಃ ಸತ್ಯಮ್ ।**
**ಪುತ್ರಾದಪಿ ಧನ ಭಾಜಾಂಭೀತಿಃ ಸರ್ವತ್ರೈಷಾ ವಿಹಿತಾ ರೀತಿಃ ॥**

ಅರ್ಥ ಅಂದರೆ ಹಣ, ಅದು ಅನರ್ಥವನ್ನುಂಟುಮಾಡುತ್ತದೆ. ಇದರಿಂದ ಸ್ವಲ್ಪವೂ ಸುಖವಿಲ್ಲ. ಏಕೆಂದರೆ ಹಣ ಸೇರಿಸುತ್ತಾ ಬಂದಾಗ, ಹೆಂಡತಿ ಹೇಳುತ್ತಾಳೆ - ನನ್ನ ಹೆಸರಿನಲ್ಲೂ, ಮಕ್ಕಳ ಹೆಸರಿನಲ್ಲೂ ಸ್ವಲ್ಪ ಹಣ ಬೇಂಕಿನಲ್ಲಿ ಹಾಕಿ. ಮಕ್ಕಳಿಗೆ ವಿದ್ಯಾಭ್ಯಾಸ, ಮುಂಜಿ, ಮದುವೆ ಎಲ್ಲಾ ಆಗಬೇಕಾಗಿದೆ. ಹೀಗೆ ತಿಗಣೆಯಂತೆ ಚುಚ್ಚುತ್ತಾ ಇರುತ್ತಾಳೆ. ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಒಳ್ಳೆಯ ಸಂಗಡಿಗರು ಸಿಕ್ಕಿದರೆ ಚಿಂತೆಯಿಲ್ಲ. ಆದರೆ ದುಷ್ಟ ಹವ್ಯಾಸಗಳುಳ್ಳ ಸಂಗಡಿಗರ ಸಹವಾಸ ದೋಷದಿಂದ ಹಣದ ಅವಶ್ಯಕತೆ ಬಂದಾಗ, ತಂದೆಯು ಹಣ ಕೊಡದೇ ಇದ್ದ ಪಕ್ಷದಲ್ಲಿ, ತಂದೆಯಿಂದ ಹೇಗೆ ಹಣ ವಸೂಲು ಮಾಡುವುದು ಎಂದು ಯೋಚನೆ ಮಾಡುತ್ತಾನೆ. ಇದನ್ನೇ ಆಚಾರ್ಯರು 'ಪುತ್ರಾದಪಿ ಧನ ಭಾಜಾಂಭೀತಿಃ' ಎಂದು ಹೇಳಿದ್ದು.

'ಶ್ರೀ ದತ್ತ ಮಂದಿರ', ನ್ಯೂ ಮಗ್‌ದಲ್ಲಾ, ಡುಮಾಸ್ ರೋಡ್, ಸೂರತ್ - 395 007



ಆಚಾರ್ಯರು ಮುಂದುವರೆದು ಹೇಳುತ್ತಾರೆ -

**ಗೇಯಂ ಗೀತಾ ನಾಮ ಸಹಸ್ರಂ ಧ್ಯೇಯಂ ಶೀಪತಿ ರೂಪಮಜಸ್ರಮ್ ।**
**ನೇಯಂ ಸಜ್ಜನ ಸಂಗೇ ಚಿತ್ತಂ ದೇಯಂ ದೀನ ಜನಾಯಚ ವಿತ್ತಮ್ ॥**

ಭಗವದ್ಗೀತೆಯನ್ನು ಪಠಿಸಿರಿ, ವಿಷ್ಣುಸಹಸ್ರನಾಮವನ್ನು ಪಾರಾಯಣ ಮಾಡಿ. ಮನಸ್ಸನ್ನು ಸಜ್ಜನರ ಸಂಗದಲ್ಲೇ ಇರಿಸಿ. ಹಣವನ್ನು ದೀನ ಜನರಿಗಾಗಿ ವ್ಯಯ ಮಾಡಿರಿ.

**ಭಗವದ್ಗೀತಾ ಕಿಂಚಿದಧೀತಾ ಗಂಗಾಜಲ ಲವ ಕಣಿಕಾ ಪೀತಾ ।**
**ಸಕ್ನದಪಿ ಯೇನ ಮುರಾರಿ ಸಮರ್ಚಾ ಕ್ರಿಯತೇ ತೇನ ಯಮೇನ ನ ಚರ್ಚಾ ॥**

ಸ್ವಲ್ಪವಾದರೂ, ಒಂದು ಶ್ಲೋಕವಾದರೂ ನಿತ್ಯವೂ ಭಗವದ್ಗೀತೆ ಓದಿರಿ. ಒಂದು ಬಿಂದುವಾದರೂ ಗಂಗಾಮೃತವನ್ನು ಸೇವಿಸಿರಿ. ದಿನಕ್ಕೆ ಒಂದು ಸಾರಿಯಾದರೂ ಮುರಾರಿಯ (ವಿಷ್ಣುವಿನ) ಪೂಜೆ ಅಥವಾ ಸ್ಮರಣೆಯನ್ನು ಮಾಡಿದ್ದೇ ಆದರೆ ಅಂತ್ಯಕಾಲದಲ್ಲಿ ಯಮನೊಡನೆ (ಯಮಭಟರೊಡನೆ) ಚರ್ಚೆ ಮಾಡುವ ಅವಶ್ಯಕತೆ ಇಲ್ಲ ಎನ್ನುತ್ತಾರೆ ಮಹಾತ್ಮರು.

'ನಾರಾಯಣ' ಎಂಬ ನಾಮದ ಮಹಿಮೆಗೆ ಒಂದು ಉದಾಹರಣೆ - ಮನು ಮಹಾರಾಜನಿಗೆ ಎರಡು ಮಕ್ಕಳು ಪ್ರಿಯವ್ರತ ಮತ್ತು ಉತ್ತಾನಪಾದ. ಉತ್ತಾನಪಾದನಿಗೆ ಇಬ್ಬರು ಹೆಂಡತಿಯರು. ಸುರುಚಿ ಮತ್ತು ಸುನೀತಿ. ಸುರುಚಿಯಲ್ಲಿ ಉತ್ತಮನೂ, ಸುನೀತಿಯಲ್ಲಿ ಧ್ರುವನೆಂಬವನು ಹುಟ್ಟಿದರು. ಒಂದು ದಿನ ರಾಜನು ಸುರುಚಿಯ ಮಗನನ್ನು ತನ್ನ ತೊಡೆಯಲ್ಲಿರಿಸಿಕೊಂಡು ಮುದ್ದಾಡುತ್ತಿದ್ದನು. ಇದನ್ನು ನೋಡಿದ ಸುನೀತಿಯ ಮಗನು ತಂದೆಯ ಮಡಿಲಲ್ಲಿ ಉತ್ತಮನನ್ನು ಕಂಡು, ತನ್ನನ್ನೂ ತಂದೆಯ ತೊಡೆಯಲ್ಲಿ ಕುಳ್ಳಿರಿಸುವಂತೆ ಹತ್ತಿರಕ್ಕೆ ಬರುತ್ತಾನೆ. ಆಗ ಅಲ್ಲೇ ಇದ್ದ ಸುರುಚಿಗೆ ಇದು ರುಚಿಸಲಿಲ್ಲ. ಸುರುಚಿ ಹೇಳುತ್ತಾಳೆ. "ಧ್ರುವ, ನೀನಿಲ್ಲಿಂದ ಹೊರಟುಹೋಗು. ರಾಜನ ತೊಡೆಯಲ್ಲಿ ಕುಳಿತುಕೊಳ್ಳಲು ನಿನಗೆ ಅವಕಾಶವಿಲ್ಲ" ಆಗ ಧ್ರುವ ಹೇಳುತ್ತಾನೆ - "ಯಾಕಮ್ಮಾ! ನಾನು ಅಪ್ಪನಿಗೆ ಮಗನಲ್ಲವೇ?" ಇದನ್ನು ಕೇಳಿದ ಸುರುಚಿ.

"ನಿನ್ನ ತಾಯಿ ರಾಣಿ ಅಲ್ಲ. ರಾಣಿ ನಾನೇ. ನಿನ್ನ ತಾಯಿ ಬರೀ ದಾಸಿ. ನಿನಗೆ ರಾಜನ ತೊಡೆಯ ಮೇಲೆ ಕುಳಿತುಕೊಳ್ಳಬೇಕಾದರೆ ಕಾಡಿಗೆ ಹೋಗಿ ನಾರಾಯಣನನ್ನು ಪ್ರಸನ್ನಮಾಡಿ ನನ್ನ ಹೊಟ್ಟೆಯಲ್ಲಿ ಹುಟ್ಟುವ ಹಾಗೆ ವರ ಬೇಡು" ಧ್ರುವ ಕುಮಾರನು ಅಳುತ್ತಾ ತಾಯಿ ಸುನೀತಿ ಹತ್ತಿರ ಬರುತ್ತಾನೆ. ನಡೆದ ಸಂಗತಿ ಹೇಳಿದರೆ, ತಂದೆ ತಾಯಿಯ ನಿಂದೆ ಮಾಡಿದಂತಾಗುತ್ತದೆ ಎಂದು ಸುಮ್ಮನಾಗಿದ್ದ. ಹತ್ತಿರದಲ್ಲೇ ಇದ್ದ ದಾಸಿಯೊಬ್ಬಳು ಈ ಕಾರಣವನ್ನು ಸುನೀತಿಗೆ ತಿಳಿಸಿದಳು. ಆಗ ಸುನೀತಿಯು ಮಗನಾದ ಧ್ರುವನಿಗೆ ಹೇಳುತ್ತಾಳೆ. "ಧ್ರುವ ಕುಮಾರ! ನಿನ್ನ ಚಿಕ್ಕ ತಾಯಿ ನಿನಗೆ ತಪ್ಪಾಗಿ ಏನೂ ಹೇಳಿಲ್ಲವಲ್ಲ. ನಾರಾಯಣನನ್ನು ಪ್ರಾರ್ಥಿಸಿ ವರ ಬೇಡಲು ಹೇಳಿದ್ದಾಳೆ ಅಲ್ಲವೇ! ನೀನು ಹಾಗೆ ಮಾಡು. ನಿನಗೆ ಖಂಡಿತವಾಗಿಯೂ ನಾರಾಯಣನು ವರ ಕೊಟ್ಟೇ ಕೊಡುತ್ತಾನೆ. ನಿನ್ನನ್ನು ನಾರಾಯಣನೇ ತೊಡೆಯಲ್ಲಿ ಕೂರಿಸುತ್ತಾನೆ. ಹೋಗು ಮಗು, ಹೋಗಿ ನಾರಾಯಣನ ಧ್ಯಾನವನ್ನು ಮಾಡು"ಆಗ ಧ್ರುವನಿಗೆ ಐದು ವರ್ಷ ವಯಸ್ಸು. ಧ್ರುವ ಹೇಳುತ್ತಾನೆ - "ಅಮ್ಮ ನನ್ನ ಈ ಚಿಕ್ಕ ವಯಸ್ಸಿನಲ್ಲಿ ನಾನು

ಒಬ್ಬನೇ ಹೋದರೆ ಕಾಡಿನಲ್ಲಿರುವ ದುಷ್ಟಮೃಗಗಳು ನನ್ನನ್ನು ತಿಂದುಹಾಕಿ ಬಿಟ್ಟರೆ?" "ಧ್ರುವ ಕುಮಾರ! ನೀನು ಒಬ್ಬನೇ ಅಲ್ಲ ನಿನ್ನ ಜತೆಗೆ ನಾರಾಯಣನು ಯಾವಾಗಲೂ ಇದ್ದಾನೆ. ನಾರಾಯಣನ ಹೆಸರನ್ನು ಹೇಳಿಕೊಂಡು ಹೋಗುತ್ತಾ ಇರು. ನಿನಗೆ ಯಾವ ಹೆದರಿಕೆಯೂ ಇಲ್ಲದಂತೆ ನಾರಾಯಣನೇ ನಿನ್ನನ್ನು ಕಾಪಾಡುತ್ತಾನೆ. ನೀನು ಹೊರಡುವ ಮುಂಚೆ ನಿನ್ನ ಚಿಕ್ಕಮ್ಮನಿಂದ (ಸುರುಚಿ) ಆಶೀರ್ವಾದ ಪಡೆದುಕೊಂಡು ಹೋದರೆ, ನಿನಗೆ ನಾರಾಯಣನ ದರ್ಶನವು ಬೇಗನೇ ಆಗುತ್ತದೆ. ಯಾರ ಮೇಲಾದರೂ ಸೇಡಿನಿಂದಲೋ ಕುಭಾವದಿಂದಲೋ ಜಪ, ತಪ ಅನುಷ್ಠಾನ ಮಾಡಿದರೆ ಆ ಆರಾಧನೆಯು ಸಫಲವಾಗುವುದಿಲ್ಲ. ಹೀಗೆಂದು ಧ್ರುವನನ್ನು ಸಮಾಧಾನಪಡಿಸಿ, ನೀನು ನನ್ನ ಮುದ್ದು ಮಗನಲ್ಲವೇ! ಮಗು! ನಿನಗೇನಾದರೂ ಅಪಮಾನವಾಗಿದ್ದರೆ, ಅದು ನಿನ್ನ ಪೂರ್ವಜನ್ಮದ ಯಾವುದೋ ಒಂದು ಕರ್ಮಫಲವಿರಬೇಕು ಎಂದು ನನಗೆ ಅನಿಸುತ್ತದೆ. ಲಾಭ - ನಷ್ಟ; ಸುಖ -ದುಃಖ, ಮಾನ - ಅಪಮಾನ ಇವೆಲ್ಲಾ ಪೂರ್ವಜನ್ಮದ ಕರ್ಮಫಲವಾಗಿರುತ್ತದೆ. ಜ್ಞಾನಿಗಳು ಇಂಥ ಸಂದರ್ಭದಲ್ಲಿ ನಗುನಗುತ್ತಾ ಸಹಿಸಿಕೊಳ್ಳುತ್ತಾರೆ. ಅಜ್ಞಾನಿಗಳಾದರೋ, ಅಳುತ್ತಾ ಅಳುತ್ತಾ ಅನುಭವಿಸುತ್ತಾರೆ. ಆದ್ದರಿಂದ ನಿನ್ನ ಚಿಕ್ಕತಾಯಿ ಸುರುಚಿಯನ್ನು ದೊಡ್ಡವಳು ಎಂದು ಭಾವಿಸಿ ಅವಳಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆದುಕೊಂಡು ಹೊರಡು" ಎನ್ನುತ್ತಾಳೆ ಸುನೀತಿ.

ಯಾವ ಸುರುಚಿಯು ಬಾಲಕನಾದ ಧ್ರುವನನ್ನು ಅವಮಾನಿಸಿದಳೋ ಅದೇ ಸುರುಚಿಗೆ ನಮಸ್ಕಾರ ಮಾಡಿ ಆಶೀರ್ವಾದ ಬೇಡಿಕೊಳ್ಳಲು ಕಳುಹಿಸುತ್ತಾಳೆ ಸುನೀತಿ. ಇಂಥ ಸುನೀತಿಗಳು ಯಾರ ಯಾರ ಮನೆಯಲ್ಲಿ ಅವತರಿಸುತ್ತಾರೋ ಅಂಥ ಮನೆಗಳಲ್ಲಿ ಕಲಿಯು ಪ್ರವೇಶ ಮಾಡಲಾರ. ಐದು ವರ್ಷದ ಧ್ರುವ ಕುಮಾರನು ಮಲತಾಯಿ ಸುರುಚಿಗೆ ವಂದನೆ ಮಾಡಲು ಬಂದಿದ್ದಾನೆ. ಸುರುಚಿಯು ಅಟ್ಟಹಾಸದಲ್ಲಿ ಹಾಸಿಗೆಯಲ್ಲಿ ಕುಳಿತಿದ್ದಾಳೆ. ಧ್ರುವನು ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದಾನೆ. ಮತ್ತು ಹೇಳುತ್ತಾನೆ. "ಅಮ್ಮಾ! ನಾನು ತಪಸ್ಸಿಗಾಗಿ ಕಾಡಿಗೆ ಹೋಗುತ್ತಿದ್ದೇನೆ. ನಿಮ್ಮ ಆಶೀರ್ವಾದ ಪಡೆಯಲು ಬಂದಿದ್ದೇನೆ". ಸುರುಚಿ ವಿಚಾರ ಮಾಡುತ್ತಾಳೆ. ಇವನು ಇಲ್ಲೇ ಇದ್ದರೆ, ಮಗನಾದ ಉತ್ತಮನ ರಾಜ್ಯದಲ್ಲಿ ಇವನಿಗೂ ಭಾಗ ಕೊಡಬೇಕಾಗುತ್ತದೆ. ಆದ್ದರಿಂದ ಸುರುಚಿ ಹೇಳುತ್ತಾಳೆ "ಧ್ರುವ ಕುಮಾರ! ನಿನ್ನ ಅಭಿಪ್ರಾಯ ತುಂಬಾ ಚೆನ್ನಾಗಿದೆ. ನಿನಗೆ ಬೇಗನೆ ನಾರಾಯಣನ ದರ್ಶನವಾಗಲಿ! ನನ್ನ ಆಶೀರ್ವಾದ ನಿನಗೆ ಯಾವಾಗಲೂ ಇದೆ" ಇಬ್ಬರೂ ತಾಯಂದಿರ ಆಶೀರ್ವಾದ ಪಡೆದು ಐದು ವರ್ಷದ ಧ್ರುವ ಕುಮಾರನು ನಾರಾಯಣನ ದರ್ಶನ ಮಾಡಲು ವನ ಪ್ರವೇಶ ಮಾಡುತ್ತಿದ್ದಾನೆ. ಮನಸ್ಸಿನಲ್ಲೇ


*With Best Compliments from :*



*"Bedsheet People"*

"In Textile Field Since 1910"

**RAJASHREE TEXTILE TRADERS**

Vasudev Enclave, Maidan 4th Cross Road, Mangalore - 575 001.

Phone : 2426624, 2421216, 5266624.




ವಿಚಾರ ಮಾಡುತ್ತಾನೆ - ಕಾಡಿನಲ್ಲಿ ಹುಲಿ, ಕರಡಿ ಮುಂತಾದ ಕ್ರೂರ ಪ್ರಾಣಿಗಳು ನನ್ನನ್ನು ಕೊಂದು ಹಾಕಲಾರವು ಅಲ್ಲವೇ? ಇದಕ್ಕೆ ಮನಸ್ಸೇ ಉತ್ತರ ಕೊಡುತ್ತಿದೆ - ಇಲ್ಲ, ಇಲ್ಲ, ನಾನು ಒಬ್ಬನೇ ಅಲ್ಲ. ನನ್ನ ಅಮ್ಮ ನನಗೆ ಹೇಳಿದ್ದಾಳೆ. "ನೀನು ಎಲ್ಲೆಲ್ಲಿ ಹೋಗುತ್ತಿಯೋ ಅಲ್ಲಲ್ಲಿ ನಾರಾಯಣನು ನಿನ್ನ ಜತೆಯಲ್ಲಿಯೇ ಇರುತ್ತಾನೆ" ತನ್ನ ತಾಯಿಯ ಮಾತಿನಲ್ಲಿಯೂ, ನಾರಾಯಣನ ಸ್ಮರಣೆಯಲ್ಲಿಯೂ ಎಷ್ಟೊಂದು ವಿಶ್ವಾಸ ಧ್ರುವನಿಗೆ.

ಎಲ್ಲರಿಗೂ ವಂದನೆ ಮಾಡಿ, ಎಲ್ಲರ ಆಶೀರ್ವಾದವನ್ನು ಪಡೆದು ಮನೆ ಬಿಟ್ಟು ಹೊರಟರೆ, ಅವನಿಗೆ ದಾರಿಯಲ್ಲೇ ಸಂತರ ಸಂದರ್ಶನವಾಗುತ್ತದೆ. ಮನೆಯಲ್ಲಿ ಜಗಳವಾಡಿ ಮನೆಬಿಟ್ಟು ಹೋದರೆ, ಅಂಥವರಿಗೆ ಸಂತರು ಸಿಗಲಾರರು. ಕೆಲವರು ಜಗಳಾಡಿ ಮನೆ ಬಿಟ್ಟು ಸನ್ಯಾಸಿ ವೇಷಹಾಕಿಕೊಂಡು ತಿರುಗುತ್ತಾರೆ. ಇದನ್ನೇ ಶಂಕರಭಗವತ್ಪಾದರು "ಉದರನಿಮಿತ್ತಂ ಬಹುಕೃತ ವೇಷಃ" ಎಂದಿದ್ದಾರೆ. ಇಂಥವರಿಗೆ ಇಹದಲ್ಲಿಯೂ ಸುಖವಿಲ್ಲ, ಪರದಲ್ಲಿಯೂ ಸುಖವಿಲ್ಲ. ಧ್ರುವನಿಗೆ ದಾರಿಯಲ್ಲಿ ನಾರದರ ದರ್ಶನವಾಯಿತು. ಧ್ರುವನು ವಿಚಾರ ಮಾಡುತ್ತಿದ್ದಾನೆ -"ಇವರು ಯಾರೋ ಒಳ್ಳೆಯ ಸಂಸ್ಕಾರವಿರುವ ಸಾಧುವಾಗಿದ್ದಾರಲ್ಲ! ತಾಯಿಯು ಹೇಳಿದ್ದಾಳೆ - ದಾರಿಯಲ್ಲಿ ಯಾರಾದರೂ ಸಂತರು ಸಿಕ್ಕಿದರೆ, ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು ಮತ್ತು ಅವರಿಂದ ಆಶೀರ್ವಾದ ಪಡೆಯಬೇಕು" ಧ್ರುವನು ನಾರದನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಸಾಷ್ಟಾಂಗ ನಮಸ್ಕಾರ ಮಾಡುವುದರಿಂದ ಆತ್ಮನಿವೇದನೆಯಾಗುತ್ತದೆ. ಯೋಗ್ಯ ಶಿಷ್ಯನಿಗೆ, ಗುರುವು ದಾರಿಯಲ್ಲಿಯೇ ಭೇಟಿಯಾಗುತ್ತಾನೆ. ಸದ್ಗುರುತತ್ವವನ್ನು ಈಶ್ವರನ ವ್ಯಾಪಕತೆಯನ್ನು ಶೋಧನೆ ಮಾಡುವ ಅಗತ್ಯವಿಲ್ಲ. ಅದನ್ನು ಗುರುತಿಸುವುದು ಅಗತ್ಯವಾಗಿದೆ. ಬಾಲಕನ ವಿನಯವನ್ನು ಕಂಡ ನಾರದನಿಗೆ ಅತಿಶಯ ಆನಂದವಾಯಿತು. ನಾರದನು ಧ್ರುವನ ಶಿರಸ್ಸಿನಲ್ಲಿ ತನ್ನ ಕೈಯನ್ನು ಇಟ್ಟನು. ಯಾರಾದರೂ ಮಹಾಪುರುಷರ, ಸಂತರ ಹಸ್ತವು ಮಸ್ತಕ ಸ್ಪರ್ಶವಾದರೆ ಆಗ ಆ ಶಿಷ್ಯನ ಮನಸ್ಸಿನ ವಿಕಾರಗಳೆಲ್ಲವೂ ದೂರವಾಗಿ ಮನಸ್ಸು ಶುದ್ಧವಾಗುವುದು. ಧ್ರುವನು ತನ್ನ ತಾಯಿಯ ಆಶೀರ್ವಾದದಿಂದ, ದಾರಿಯಲ್ಲಿ ನನಗೆ ಇನ್ನೊಂದು ತಾಯಿ ಸಿಕ್ಕಿದಳು ಎಂದುಕೊಳ್ಳುತ್ತಾನೆ.

ಒಬ್ಬಳು ಮಾತೆಯು ಮಗುವಿಗೆ ಸ್ತನಪಾನ ಮಾಡಿಸಿ ಪುಷ್ಟಿಯನ್ನು ಕೊಡುತ್ತಾಳೆ. ಸದ್ಗುರುರೂಪೀ ತಾಯಿಯು ಶಾಶ್ವತವಾಗಿ ಸ್ತನಪಾನವನ್ನು ಬಿಡಿಸಿ, ಜನ್ಮ ಮರಣದ ಚಕ್ರದಿಂದ ಮುಕ್ತಿಯನ್ನು ಕೊಡುತ್ತಾಳೆ. ಪುನಃ ಯಾವ ಸಮಯದಲ್ಲೂ ಜನ್ಮವೆತ್ತಿ ಸ್ತನಪಾನ ಮಾಡುವ ಅಗತ್ಯ ಇರುವುದಿಲ್ಲ. ಸ್ತನಪಾನ ಮಾಡಿಸುವ ಮಾತೆಯು ಶ್ರೇಷ್ಠವೇ? ಅಥವಾ ಸ್ತನಪಾನ ಬಿಡಿಸುವ ತಾಯಿ (ಸದ್ಗುರು) ಶ್ರೇಷ್ಠವೇ? **(ಮುಂದುವರಿಯುವುದು)**


**MODERN INTERIORS & FURNITURE** Ph.: 2523504

**Opp. : Sanskrit College, Maruthi Veethika, Udupi - 576 101**

*Specialists in :*
- Interior Decoration work and Furnishings.
- Steel & Wooden Furniture.
- Sofa sets of different designs
- Computer Furniture and chairs of different Designs
- Kurlon & Duroflex Mattress and many more.

# ದಾಸ ಮತ್ತು ಸಂತ ಸಾಹಿತ್ಯ

## ಒಂದು ಅವಲೋಕನ

**ಡಾ। ಎಚ್. ವಿ. ನರಸಿಂಹ ಮೂರ್ತಿ, ಕುಂದಾಪುರ**

ಸುಮಾರು ಹನ್ನೆರಡನೆಯ ಶತಮಾನದ ಕೊನೆಯಲ್ಲಿ ಕನ್ನಡ ವಾಙ್ಮಯದಲ್ಲಿ ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯ ಎಂಬ ಎರಡು ಪ್ರಕಾರಗಳು ಅಸ್ತಿತ್ವಕ್ಕೆ ಬಂದುವು. ಅದುವರೆಗೂ ಪಂಡಿತರ ಪಾಲಿಗೆ ಮೀಸಲಾಗಿದ್ದ ಸಾಹಿತ್ಯದ ಸವಿ, ಜ್ಞಾನ, ಸಂಪತ್ತು ಈ ಮಾಧ್ಯಮಗಳಿಂದ ಜನ ಸಾಮಾನ್ಯರ ಪಾಲಿಗೂ ದೊರೆಯುವಂತಾಯಿತು. ಈ ಎರಡು ಪ್ರಕಾರಗಳಲ್ಲೂ ಕಾಣುವ ಸಾಮಾನ್ಯವಾದ ಒಂದು ಅಂಶವೆಂದರೆ ಆಸ್ತಿಕ ಮನೋಭಾವ; ಸಾಮಾಜಿಕ ಪ್ರಜ್ಞೆ; ಬದುಕಿನ ರೀತಿ - ನೀತಿ; ಇವೆಲ್ಲವುಗಳಿಂದ ಮೇಲಾಗಿ ತತ್ತ್ವಜ್ಞಾನ. ಇವೆರಡರ ತಳಹದಿಯಲ್ಲಿ ಕಾಣುವ ಭಿನ್ನವಾದ ಮತೀಯ ಭಾವನೆಯಿಂದ ಇವು ಸಂಪ್ರದಾಯವಾಗಿ ಬೆಳೆದು ಬಂದಿವೆ.

ಇವುಗಳಲ್ಲಿ ದಾಸಸಾಹಿತ್ಯಕ್ಕೆ ಮುಖ್ಯವಾದ ಆಧಾರಸ್ತಂಭ ಮಧ್ವಮತ. ದಾಸರ ಕೀರ್ತನೆಗಳಲ್ಲಿ ಮಧ್ವಮತದ ಪ್ರಕ್ರಿಯೆಗಳು ಸರಳವಾಗಿ ಮತ್ತು ಸುಲಭವಾಗಿ ಪ್ರತಿಪಾದಿತವಾಗಿವೆ. ಶ್ರೀ ಮದಾಚಾರ್ಯರ ತತ್ತ್ವಶಾಸ್ತ್ರದ ಸಾರಸರ್ವಸ್ವವೂ, ಅದರಿಂದ ಚೇತನಗೊಂಡ ಅನುಭಾವವೂ ದಾಸ ಸಾಹಿತ್ಯದಲ್ಲಿ ಅಲೆ- ಅಲೆಯಾಗಿ ಹರಿದಿದೆ. ದಾಸ ಸಾಹಿತ್ಯದ ಅನೇಕ ಗುಣಲಕ್ಷಣಗಳು ಮಧ್ವಾಚಾರ್ಯರ ದ್ವಾದಶ ಸ್ತೊತ್ರಗಳಲ್ಲೇ ಅಭಿವ್ಯಕ್ತಿ ಕಂಡಿವೆ. ಸ್ವತಃ ಮಧ್ವಾಚಾರ್ಯರೇ ಕನ್ನಡದಲ್ಲಿ ಪದ್ಯಗಳನ್ನು ರಚಿಸಿರಬಹುದೆಂಬುದಕ್ಕೆ ತಕ್ಕ ಪುರಾವೆಗಳಿಲ್ಲ. ಆದರೆ ಆಚಾರ್ಯರ ಶಿಷ್ಯರೇ ಆದ ನರಹರಿತೀರ್ಥರ ರಚನೆಗಳು ದೊರೆತಿವೆ. ಅಲ್ಲದೆ ಮಾಧ್ವಪೀಠವನ್ನಲಂಕರಿಸಿದ ಅನೇಕ ಯತಿವರ್ಯರು ತಾವು ಉತ್ತಮ ದಾಸ ಸಾಹಿತ್ಯವನ್ನು ರಚಿಸಿದ್ದಲ್ಲದೆ ಹರಿದಾಸರನ್ನು ಶಿಷ್ಯರನ್ನಾಗಿ ಪರಿಗ್ರಹಿಸಿ, ಮಾಧ್ವ ಸಂಪ್ರದಾಯಕ್ಕೆ ಪ್ರೋತ್ಸಾಹಕೊಟ್ಟಿರುವರು. ಇವರಲ್ಲಿ ಶ್ರೀಪಾದರಾಯರು ಮೊದಲಿಗರು. ಬಳಿಕ ವ್ಯಾಸ ತೀರ್ಥರು, ವಾದಿರಾಜರು, ರಾಘವೇಂದ್ರ ಸ್ವಾಮಿಗಳು ಮೊದಲಾದ ಯತಿವರ್ಯರು ದಾಸ ಸಾಹಿತ್ಯವನ್ನು ರಚಿಸಿ, ಹರಿದಾಸರಿಗೆ ಆಶ್ರಯವಿತ್ತು ಹರಿದಾಸಪಂಥಕ್ಕೆ ಸಾಕಷ್ಟು ಮಟ್ಟಿನ ಪ್ರೋತ್ಸಾಹವನ್ನು ಕೊಟ್ಟರು. ಅಂತೂ ದ್ವೈತ ಸಂಪ್ರದಾಯ ಜನಪದದಲ್ಲಿ ಒಂದು ಉತ್ತಮ ಸಂಸ್ಕೃತಿಯನ್ನು ಬಿತ್ತಲು ದಾಸಸಾಹಿತ್ಯವು ಮಾಧ್ಯಮವಾಗಿತ್ತು.

ಈ ಸಂಪ್ರದಾಯ ಬೆಳೆದು ಬಂದ ಮೇಲೆ ವಿದ್ವಾಂಸರಾದ ಕೆಲವರೂ ದಾಸರಿಂದಲೇ ಶಿಷ್ಯದೀಕ್ಷೆ ಪಡೆದು ಹರಿದಾಸರಾಗುತ್ತಿದ್ದರು. ಇವರಲ್ಲಿ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ಮೊದಲಾದವರನ್ನು ಹೆಸರಿಸಬಹುದು. ಶ್ರೀ ಮಧ್ವಾಚಾರ್ಯರಿಂದ ತೊಡಗಿ ಸುಮಾರು ಹತ್ತೊಂಬತ್ತನೆಯ ಶತಮಾನದ ಕೊನೆಯವರೆಗೂ ಈ ಹರಿದಾಸರ ಪರಂಪರೆ ಬೆಳೆದು ಬಂತು. ಹರಿದಾಸ ಸಾಹಿತ್ಯದಿಂದ ಕನ್ನಡ ವಾಙ್ಮಯ ಸಮೃದ್ಧವಾಯಿತು.

**'ಚೇತನಾ', ನೇರಂಬಳ್ಳಿ ರೋಡ್, ಕೋಟೇಶ್ವರ - 576 222**



ಭಗವಂತನೊಬ್ಬನೇ ತನಗೆ ಬೇಕೆಂದು ಭಗವಂತನಿಗಾಗಿ ಹಂಬಲಿಸಿ, ಭಗವಂತನ ಸಾಕ್ಷಾತ್ಕಾರವನ್ನು ಪಡೆದು, ಜಗತ್ತಿನಲ್ಲಿ ಭಗವದಾನಂದದಿಂದ ಬಾಳನ್ನು ನಡೆಸಿ, ಇತರರಿಗೆ ಮಾರ್ಗದರ್ಶಕವಾದ ಬೋಧನೆಗಳನ್ನು ನೀಡಿದವರೇ ಸಂತರು. ಇವರಲ್ಲಿ ಜಾತಿ - ಮತಗಳ ಭೇದವಾಗಲಿ, ವಿದ್ಯೆ - ಪಾಂಡಿತ್ಯಗಳ ತಾರತಮ್ಯ ದೃಷ್ಟಿಯಾಗಲಿ ಇಲ್ಲ. ಇವರಲ್ಲಿ ಹಲವರು ಭಗವಂತನ ಸಾಕ್ಷಾತ್ಕಾರವನ್ನು ಅನುಭವಿಸಿ, ದಿವ್ಯಾನಂದದಿಂದ ಕೂಡಿ, ತತ್ತ್ವಪದ ಮತ್ತು ಹಾಡುಗಳ ಮೂಲಕ ಗಹನವಾದ ಆಧ್ಯಾತ್ಮಿಕ ತತ್ತ್ವಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ಬೋಧಿಸಿದ್ದಾರೆ. ತಮಿಳುನಾಡಿನ ಆಳ್ವಾರರು, ಬಂಗಾಳದ ಶ್ರೀಕೃಷ್ಣ ಚೈತನ್ಯ ಮಹಾಪ್ರಭುಗಳು, ರಾಜಸ್ಥಾನದ ಮೀರಾಬ್ಯಾ, ಉತ್ತರದ ಕಬೀರ, ತುಳಸೀದಾಸ, ಸೂರದಾಸ, ಗುಜರಾತಿನ ವಲ್ಲಭಾಚಾರ್ಯ, ಅಸ್ಸಾಂನ ಶಂಕರದೇವ, ಕರ್ನಾಟಕದ ಶಿಶುನಾಳ ಶರೀಫ, ಮಹಾರಾಷ್ಟ್ರದ ಜ್ಞಾನದೇವ, ಏಕನಾಥ, ತುಕಾರಾಂ, ರಾಮದಾಸ, ನಾಮದೇವ ಹೀಗೆ ಸಂತರ ಒಂದು ದೊಡ್ಡ ಪರಂಪರೆಯೇ ಈ ನೆಲದಲ್ಲಿ ಬೆಳೆದು ಬಂದಿದೆ. ಇವರೆಲ್ಲರೂ ತಮ್ಮ ಭಜನೆ, ದೋಹಾ, ಅಭಂಗ್ ಇತ್ಯಾದಿಗಳಿಂದ ಭಕ್ತಿರಸದ ಮಹಾಪೂರವನ್ನೇ ಹರಿಸಿದ್ದಾರೆ.

ಹರಿದಾಸ ಮತ್ತು ಸಂತ ಸಾಹಿತ್ಯದಲ್ಲಿ ಬರುವ ಎಲ್ಲಾ ತರದ ರಸಭಾವಗಳಿಗೂ ಭಕ್ತಿಯೇ ಆಧಾರಸ್ತಂಭ. ಅಪರೋಕ್ಷ ಜ್ಞಾನಿಗಳಾದ ಹರಿದಾಸರು ಮತ್ತು ಸಂತರು ದೇವರನ್ನು ಹೊಗಳಿ-ತೆಗಳಿ, ಬೇಡಿ-ಕಾಡಿ, ಬೈದು, ಭಂಗಿಸಿ, ನಾನಾವಿಧದಲ್ಲಿ ಹಾಡಿ ತಣಿದಿದ್ದಾರೆ. ಹೆಚ್ಚು ಕಡಿಮೆ ಇದೇ ಕಾಲದಲ್ಲಿ ಬೆಳೆದುಬಂದ ವಚನಸಾಹಿತ್ಯದಲ್ಲೂ ಈ ತರಹದ ವಚನಗಳಿವೆ. ಈ ಎರಡು ವಿಧದ ಸಾಹಿತ್ಯಗಳೂ ಪರಸ್ಪರ ಪ್ರಭಾವಿತವಾಗಿಯೂ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡಿವೆ. ಶಿವಶರಣರ ಮತ್ತು ಹರಿದಾಸರ ಮತಗಳು ಬೇರಾದರೂ ಮೂಲಭಾವವು ಒಂದೇ. ಒಬ್ಬರು ಶಿವಪಾರಮ್ಯವನ್ನು ಎತ್ತಿ ಹಿಡಿದರೆ, ಮತ್ತೊಬ್ಬರು ಹರಿಯೇ ಸರ್ವೋತ್ತಮ ಎಂದು ಸಾರಿದರು.

ಶಿವಶರಣರದು ಹೆಚ್ಚಾಗಿ ವಚನರೂಪದ ಸಾಹಿತ್ಯವಾಗಿದ್ದರೆ, ದಾಸಪಂಥದವರದು ಕೀರ್ತನ ರೂಪದ ಸಾಹಿತ್ಯ. ವಚನಗಳ ಭಾವತೀವ್ರತೆಯನ್ನು ದಾಸರ ಕೀರ್ತನೆಗಳಲ್ಲಿ ಕಾಣಲಾಗದು. ಅಂತೆಯೇ ದಾಸಸಾಹಿತ್ಯದ ಲಾಲಿತ್ಯ ವಚನಗಳಲ್ಲಿ ಸಿಗದು. ಆದರೆ ಈ ಎರಡೂ ಪಂಥದವರು ಸಮಾಜವನ್ನು ತಿದ್ದುವ ಕೆಲಸದಲ್ಲಿ ಸಿದ್ಧಿಯನ್ನು ಕಂಡವರು.

ಪುರಂದರ - ಕನಕ ಮೊದಲಾದ ಹರಿದಾಸರ ಹಾಗೂ ತುಕಾರಾಂ, ಮೀರಾ ಬ್ಯಾ ಮೊದಲಾದ ಸಂತರ ಕೀರ್ತನೆ ಮತ್ತು ಹಾಡುಗಳು ಶಿವಶರಣರ ವಚನಗಳಿಗಿಂತ ಹೆಚ್ಚು ಜನಪ್ರಿಯವಾಗಲು ಭಾಷೆಯ ಸರಳತೆ ಮತ್ತು ಸಾಕಾರನಿಷ್ಠೆಯೇ ಕಾರಣ. ಹರಿದಾಸರು ಮತ್ತು ಸಂತರು ನಾದಲೋಲುಪರಾದುದರಿಂದ ಅವರ ಕೀರ್ತನೆಗಳಲ್ಲಿ, ಪದಬಂಧಗಳಲ್ಲಿ ಆರ್ದ್ರತೆ ಹೆಚ್ಚು; ಗೇಯಗುಣ ಹೆಚ್ಚು.

ಒಮ್ಮೊಮ್ಮೆ ಹರಿದಾಸರ ಕೀರ್ತನೆಗಳನ್ನು ಅಥವಾ ಸಂತರ ಭಜನೆ, ಅಭಂಗ್ ಇತ್ಯಾದಿಗಳನ್ನು ಕೇಳುವಾಗ ಭಾವಾತಿರೇಕಕ್ಕೆ ಎಡೆಕೊಡುವ ಅತಿರಂಜಿತವಾದ ಇಂತಹ ಸಾಹಿತ್ಯದಿಂದ ಲಾಭವೇನು? ನಮ್ಮ ಬದುಕಿಗೆ ಇವುಗಳಿಂದ ಏನಾದರೂ ಪ್ರಯೋಜನವಿದೆಯೇ? ಯುಗ ಒಂದು ಕ್ಷಣವಾಗುವ, ಈ ವೈಜ್ಞಾನಿಕ ಯುಗದಲ್ಲಿ,

ಗೊಂದಲದ ವಾತಾವರಣದಲ್ಲಿ ಕರ್ತವ್ಯ ಪ್ರಜ್ಞೆ ಇಲ್ಲದೆ, ಮೌನವಾಗಿ ಹರಿನಾಮಸ್ಮರಣೆ ಮಾಡುವುದೆಂದರೆ ಅದು ಅಭಾವದ ವೈರಾಗ್ಯವೋ, ಸೋಮಾರಿತನವೋ, ಪಲಾಯನವಾದವೋ ಎನಿಸಿದರೆ ಆಶ್ಚರ್ಯವಿಲ್ಲ. ಆದರೆ ನಮ್ಮವರಿಗೆ ದೇವರು, ಧರ್ಮ, ಸ್ವರ್ಗ, ನರಕ ಮುಂತಾದವುಗಳಲ್ಲಿ ಬಲವಾದ ನಂಬಿಕೆ ಇತ್ತು. ಆ ನಂಬಿಕೆಯೇ ಅವರ ಬದುಕನ್ನು ನೆಮ್ಮದಿಯ ದಾರಿಯಲ್ಲಿ ಕೊಂಡೊಯ್ದಿತು. ಎಲ್ಲದರಲ್ಲಿಯೂ ನಂಬಿಕೆಯನ್ನು ಕಳೆದುಕೊಂಡ ನಾವು ಈ ಅಸಹಾಯ ಸ್ಥಿತಿಯಲ್ಲಿದ್ದೇವೆ. ಹಾಗಿರುವಾಗ ಈ ದಾಸಸಾಹಿತ್ಯವನ್ನು ಅಥವಾ ಸಂತರ ಅನುಭಾವ ಸಾಹಿತ್ಯವನ್ನು ಓದಲಿ, ಹಾಡಲಿ, ಅದರ ಭಾವವು ನಮ್ಮ ಅಂತರಂಗದಲ್ಲಿ ಇಳಿಯಲು ಸಾಧ್ಯವಾಗುತ್ತಿಲ್ಲ. ಓದುವಾಗ ಅದರ ವಿಡಂಬನೆಯ ಕಡೆಗೆ ಮನಸ್ಸು ಒಲಿದರೆ, ಹಾಡುವಾಗ ಜನರಂಜನೆಯ ಕಡೆಗೆ. ಹೀಗಾಗಿ ನಮಗೆ ಈ ಸಾಹಿತ್ಯವು ಸತ್ವಹೀನವಾಗಿ ಕಾಣಬಹುದು.

ಆದರೆ ಈ ಸಾಹಿತ್ಯದ ಮೂಲಪುರುಷರಾದ ದಾಸರನ್ನು, ಸಂತರನ್ನು ನೋಡಿದರೆ ಅವರು ಅಭಾವ ವೈರಾಗ್ಯದಿಂದಲೋ, ಮಾಡಲು ಬೇರೆ ಕೆಲಸವಿಲ್ಲದೆಯೋ ಇದನ್ನು ರಚಿಸಿದವರಲ್ಲ. ಸಮೃದ್ಧಿಯಾದ ಬದುಕನ್ನು ನೆಮ್ಮದಿಯಿಂದ ಬಾಳಿದವರು. ಪುರಂದರ ದಾಸರು ಕೋಣೆಯಲ್ಲಿ ಕುಳಿತು ನಾಣ್ಯವನ್ನು ಎಣಿಸುವುದರಲ್ಲೇ ಕಾಲ ಕಳೆಯುತ್ತಿದ್ದ ನವಕೋಟಿ ನಾರಾಯಣರು. ಕನಕದಾಸರು ಆನೆಗೊಂದಿ ಸಂಸ್ಥಾನದ ದಂಡನಾಯಕರಾಗಿದ್ದವರು. ಜಗನ್ನಾಥ ದಾಸರು ಪಂಡಿತ ಪ್ರಕಾಂಡರು; ವಾದಿರಾಜರು ಪೀಠಾಧಿಪತಿಗಳು, ಮೀರಾ ಬ್ಯಾ ರಾಜ ಮನೆತನದವಳು; ಸಂತ ತುಕಾರಾಂ, ರಾಮದಾಸ - ಎಲ್ಲರೂ ಬದುಕಿಗೊಂದು ಭದ್ರತೆ ಕಂಡವರು. ಇವರು ಯಾರೂ ಉದರ ಪೋಷಣೆಗಾಗಿ ದಾಸರಾದವರಲ್ಲ; ತಾಳ - ತಂಬೂರಿ ಹಿಡಿದು ಸಂತರಾದವರಲ್ಲ. ಪರಿಪೂರ್ಣವಾದ ಬದುಕಿನಲ್ಲೂ ಅರೆಕೊರೆಯನ್ನು ಕಂಡು ಇದರ ನಶ್ವರತೆಯನ್ನು ತೀವ್ರವಾಗಿ ಚಿಂತಿಸಿದವರು. ಬದುಕಿನಲ್ಲಿ ಹರಿ ಚಿಂತನೆ ಮಾಡಿದ ಕ್ಷಣವೇ ಸಾರ್ಥಕ ಎಂದು ಭಾವಿಸಿ ಹರಿದಾಸರಾದವರು; ಅನುಭಾವಿಗಳಾದವರು. ಆಗ ಅವರು ಬದುಕಿನ ಬಗೆಗೆ ಇಟ್ಟುಕೊಂಡ ದೃಷ್ಟಿಕೋನ ಈಗಲೂ ನಮ್ಮ ಪಾಲಿಗೆ ಸತ್ಯವೇ. ನಮ್ಮ ಹಣ, ಯೌವನ, ಜೀವನಾನುಕೂಲತೆ ಮುಂತಾದವು ದೇಶ - ಕಾಲ ಭೇದದಿಂದ ತಾತ್ಕಾಲಿಕ ಎಂಬುದು ಕಟು ಸತ್ಯ. ಶಾಂತಿ ಎಂಬುದು ನಮ್ಮ ಬದುಕಿಗಾಗಿ ನಾವು ನಿರಂತರವಾಗಿ ನಡೆಸುವ ಹೋರಾಟವೇ ಹೊರತು ಬೇರೇನೂ ಅಲ್ಲ. ಬೇರೆಯವರಿಗಾಗಿ ಬಿಟ್ಟುಹೋಗುವ ನಮ್ಮ ಧನ, ಕನಕ, ವಸ್ತು, ವಾಹನಗಳು ನಮಗೆ ಶಾಂತಿ ನೀಡಲಾರವು. ಶಿವಪ್ಪನಾಯಕನಾಗಿದ್ದಾಗ 'ನವಕೋಟಿ' ತಮಗಿದ್ದರೂ ದಾಸರಿಗೆ ಶಾಂತಿ ನೀಡಲಿಲ್ಲ. ಅದೆಲ್ಲವನ್ನೂ ಕೃಷ್ಣಾರ್ಪಣ ಮಾಡಿ, ತಾಳ - ತಂಬೂರಿ ಹಿಡಿದು ಹರಿದಾಸರಾದ ಮೇಲೆಯೇ ಅವರಿಗೆ ನಿಜವಾದ ಶಾಂತಿ - ನೆಮ್ಮದಿಗಳು ದೊರಕಿದವು. ಹರಿದಾಸರಾದ ಅವರಿಗೆ ಆ ಶಾಂತಿಯೇ ಬದುಕಿನ ಪರಮ ಮೌಲ್ಯವಾಗಿತ್ತು.

ದಾಸ ಸಾಹಿತ್ಯದ ಸುವರ್ಣಯುಗವು ಪುರಂದರದಾಸರು ಮತ್ತು ವಾದಿರಾಜರು ಇದ್ದ ಕಾಲ. ಈ ಕಾಲದಲ್ಲಿ ದಾಸ ಮತ್ತು ಸಂತ ಸಾಹಿತ್ಯವು ಸಮೃದ್ಧವಾಗಿ ಬೆಳೆಯಿತು. ಸಂಸಾರದಲ್ಲಿದ್ದು ನಿರ್ಲಿಪ್ತತೆಯಿಂದ ಇರಬೇಕು. 'ಹಕ್ಕಿ ಅಂಗಳದಲ್ಲಿ ಕೂತಂತೆ' ನಾವು ಸಂಸಾರದಲ್ಲಿ ಇದ್ದೇವೆ. 'ಮಕ್ಕಳು ಕಟ್ಟಿದ ಮರಳ ಮನೆಯಂತೆ' ಈ ಸಂಸಾರ ಅಶಾಶ್ವತ. ಇಂದು ಉಂಟು; ನಾಳೆ ಇಲ್ಲ. ಯಾರೂ ಇಲ್ಲಿ ಶಾಶ್ವತವಾಗಿ ಉಳಿಯಲಾರರು ಎಂಬ ಅನುಭವ ಬಂದಾಗ "ಹಿಗ್ಗುವೆ ಯಾಕೋ ಈ ದೇಹಕೆ? ಮನುಜ ಶರೀರವಿದೇನು ಸುಖ?" ಎಂಬಂತಹ



ಮಾತುಗಳನ್ನಾಡಿದರು. "ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲುಬೇಡಿ ಹುಚ್ಚಪ್ಪಗಳಿರಾ" ಎಂದು ಕೂಡ ಹಾಡಿದ್ದಾರೆ. ಇದರ ಅರ್ಥ ಇದ್ದಷ್ಟು ದಿನ ಆರೋಗ್ಯವಂತರಾಗಿ ಸುಖದಿಂದ ಬಾಳಬೇಕು. ಇತರರನ್ನು ಪೀಡಿಸಿ, ಗಳಿಸಿದ ಸಂಪತ್ತು ಯಾವ ದೃಷ್ಟಿಯಿಂದಲೂ ಪ್ರಯೋಜನಕ್ಕೆ ಬಾರದು. ತನಗೆ ಸಿಕ್ಕಿದ್ದರಲ್ಲಿ ತೃಪ್ತಿಹೊಂದಿ, ಯಾರ ಬಳಿಯಲ್ಲೂ ದೈನ್ಯದಿಂದ ಯಾಚನೆ ಮಾಡದೆ, ಹರಿಭಕ್ತರಾಗಿರುವವರ ಬದುಕು ಸಾರ್ಥಕ ಎಂಬ ತತ್ತ್ವವನ್ನು ದಾಸರು ಜಗತ್ತಿಗೆಲ್ಲ ಬಿತ್ತರಿಸಿದರು.

ಭಕ್ತರ ಅಧೀನನಾದ ಭಗವಂತ ನಂಬಿದ ಭಕ್ತರ ಕೈಬಿಡಲಾರ ಎಂಬ ತತ್ತ್ವ ಎಲ್ಲ ಸಂತರದ್ದು. ಅದನ್ನೇ ಮೀರಾಬ್ಯಾ 'ಮೇರೇ ತೋ ಗಿರಿಧರ ಗೋಪಾಲ, ದೂಸರಾನ ಕೋಯಿ' ಎಂದರೆ ಅಕ್ಕಮಹಾದೇವಿ 'ಎನ್ನ ದೇವ ಚೆನ್ನ ಮಲ್ಲಿಕಾರ್ಜುನನಿಗಲ್ಲದೆ ಅನ್ಯ ಕೆಳಸುವುದೇ ಎನ್ನ ಮನ' ಎಂದಿದ್ದಾಳೆ. ತಮ್ಮ ಸುತ್ತಮುತ್ತಲೂ ದುರ್ಜನರಿದ್ದರೂ, ಅದರಿಂದ ದಾಸರ ಮನಸ್ಸು ಕೆಡಲಿಲ್ಲ. 'ಜಾಲಿಯಮರದಂತೆ ಧರೆಯಲಿ ದುರ್ಜನರು' ಎಂದು ಅವರನ್ನು ದೂರಕ್ಕೆ ಇಟ್ಟು, 'ನಿಂದಕರಿರಬೇಕು' ಎಂದು ಅವರ ಇರುವಿಕೆಯನ್ನು ಬಯಸಿದ್ದಾರೆ. ತನ್ನ ಗುರಿಯತ್ತ ನೇರವಾಗಿ ಸಾಗುವ ಸ್ಥಿತಪ್ರಜ್ಞನಿಗಲ್ಲದೆ ಅನ್ಯರಿಗೆ ಈ ಮನಃಸ್ಥಿತಿ ಸಾಧ್ಯವಿಲ್ಲ.

ಅಕ್ಷರವರಿಯದ ಆ ಕಾಲದ ಸಾಮಾನ್ಯ ಜನರೂ ಕೂಡ ಹರಿದಾಸರ ಕೀರ್ತನೆಗಳಿಂದ ಸಂತರ ಹಾಡುಗಳಿಂದ ತಮ್ಮನ್ನು ತಾವು ತಿದ್ದಿಕೊಂಡರು. ದೊಡ್ಡ ಶ್ರೀಮಂತರು ದಾಸರ ಮತ್ತು ಸಂತರ ಪ್ರಭಾವದಿಂದ ತಮ್ಮ ಸಂಪತ್ತನ್ನು ಸತ್ಪಾತ್ರರಲ್ಲಿ ದಾನ ಮಾಡಿದರು. ತಮ್ಮ ಬದುಕನ್ನು ಹಸನು ಮಾಡಿಕೊಂಡರು. ಈ ಸಾಹಿತ್ಯವು ಇತರ ಸಾಹಿತ್ಯದ ಮೇಲೂ ತನ್ನ ಪ್ರಭಾವ ಬೀರಿತು. ಈ ಸಾಹಿತ್ಯವನ್ನು ಅನುಸರಿಸಿ, ಬರೆದ ಯಕ್ಷಗಾನ ಪದ್ಯಗಳು, ಹಸೆಯ ಹಾಡುಗಳು, ಭಕ್ತಿಗೀತೆಗಳು, ಭಾವಗಾನಗಳು ಹೇರಳವಾಗಿವೆ. ಈ ದೃಷ್ಟಿಯಿಂದ ದಾಸರ ಮತ್ತು ಸಂತರ ಸಾಹಿತ್ಯವು ಸಮಾಜದ ಮೇಲೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ತನ್ನ ಪ್ರಭಾವವನ್ನು ಬೀರಿದೆ. ಅಬಾಲವೃದ್ಧರಿಗೂ ವಿಶೇಷವಾಗಿ ಮಹಿಳೆಯರಿಗೆ ಸುಲಭ ಗ್ರಾಹ್ಯವಾದ ಈ ಸಾಹಿತ್ಯ ಸಮಾಜ ಜಾಗೃತಿಯಲ್ಲಿ ವಹಿಸಿದ ಪಾತ್ರ ಸಣ್ಣದೇನಲ್ಲ.

ಹೀಗೆ ನಮ್ಮ ನಾಡಿಗೆ, ನುಡಿಗೆ ಅಪಾರಕೊಡುಗೆಯನ್ನು ನೀಡಿ, ಅವನ್ನು ಸಮೃದ್ಧಗೊಳಿಸಿದ ದಾಸರ ಮತ್ತು ಸಂತರ ಸಾಹಿತ್ಯದ ಅಧ್ಯಯನ ಇಂದಿನ ಕಾಲಕ್ಕೆ ನಿಷ್ಪ್ರಯೋಜಕವೆಂದಾಗಲಿ, ಅನವಶ್ಯಕವೆಂದಾಗಲೀ ಭಾವಿಸಬಾರದು. ನಮ್ಮ ನಾಡಿನ ಸಂಸ್ಕೃತಿ, ಸಾಹಿತ್ಯ, ಪ್ರಾಚೀನ ಪರಂಪರೆ, ಜೀವನ ಮೌಲ್ಯ, ಇವೆಲ್ಲವುಗಳ ಅರಿವಿಗೆ ಈ ಸಾಹಿತ್ಯದ ಅಧ್ಯಯನ ತೀರಾ ಪ್ರಸ್ತುತ. ಆದುದರಿಂದ ಹರಿದಾಸರ ಮತ್ತು ಸಂತರ ಸಾಹಿತ್ಯದ ಅಧ್ಯಯನದಲ್ಲಿ ಹಳೆ ತಲೆಮಾರಿನವರು ಅಥವಾ ಹರಿಕೀರ್ತನಕಾರರು ಮಾತ್ರವಲ್ಲ, ತರುಣ ಜನಾಂಗವೂ ಆಸಕ್ತಿ ವಹಿಸಬೇಕು. ವಿಶ್ವವಿದ್ಯಾಲಯಗಳಲ್ಲಿ, ಶಾಲೆ - ಕಾಲೇಜುಗಳಲ್ಲಿ ಮೌಲ್ಯ ಶಿಕ್ಷಣ ಅಥವಾ ನೈತಿಕ ಶಿಕ್ಷಣದ ಒಂದು ಭಾಗವಾಗಿ ಇದು ಅಧ್ಯಯನ ವಿಷಯವಾಗಬೇಕು. ನಮ್ಮ ದೇವಸ್ಥಾನಗಳು, ಮಠಗಳು, ಧರ್ಮಪೀಠಗಳು ಈ ಹರಿದಾಸ ಮತ್ತು ಸಂತ ಸಾಹಿತ್ಯವನ್ನು ರಚಿಸಿ, ಪ್ರಸಾರ ಮಾಡುವಲ್ಲಿ ಪ್ರಧಾನ ಪಾತ್ರ ವಹಿಸಬೇಕು. ಏಕೆಂದರೆ ಇದರ ರಕ್ಷಣೆಯೆಂದರೆ ನಮ್ಮ ಪರಂಪರೆಯ ರಕ್ಷಣೆ; ಸಂಸ್ಕೃತಿ ಮತ್ತು ಜೀವನ ಮೌಲ್ಯಗಳ ರಕ್ಷಣೆ.

# ವಿವಿಧ ಪುರಾಣಗಳಲ್ಲಿ ಗಣಪತಿ



**ಅಚಿಂಜ್ಯೋ ಬಿಣಗಾ**

**ಮಂ**ಗಲ ಮೂರ್ತಿಯಾಗಿರುವ ಗಣಪತಿಯು ಸರ್ವರಿಗೂ ವಂದನೀಯ ದೇವತೆಯಾಗಿದ್ದು, ಅನೇಕ ಪುರಾಣಗಳಲ್ಲಿ ಗಣಪತಿಯ ವಿವರವಿದೆ.

ಹದಿನೆಂಟು ಮಹಾಪುರಾಣಗಳ ಪೈಕಿ ಪದ್ಮ, ಭವಿಷ್ಯ, ವರಾಹ, ಲಿಂಗ, ಶಿವ, ಗರುಡ, ಬ್ರಹ್ಮ, ಬ್ರಹ್ಮವೈವರ್ತ, ಸ್ಕಂದ, ಅಗ್ನಿ ಮತ್ತು ನಾರದ ಈ ಹನ್ನೊಂದು ಪುರಾಣಗಳಲ್ಲಿ ಗಣಪತಿಯ ಉಲ್ಲೇಖ ಕಂಡುಬರುತ್ತದೆ. ಉಪಪುರಾಣವಾದ ಸೌರ ಪುರಾಣದಲ್ಲಿ ದೂರ್ವಾಗಣಪತಿ ವ್ರತವನ್ನು ವಿವೇಚಿಸಲಾಗಿದೆ. ವಿಷ್ಣು ಧರ್ಮೋತ್ತರ ಮತ್ತು ಭವಿಷ್ಯೋತ್ತರದಲ್ಲಿ ಗಣಪತಿಯ ಸಂದರ್ಭ ಬಂದಿರುತ್ತದೆ. ಬ್ರಹ್ಮಾಂಡ ಪುರಾಣದಲ್ಲಿ ಸತ್ಯವಿನಾಯಕ ವ್ರತವಿದೆ.

ಇದಲ್ಲದೆ ಗಣೇಶ ಪುರಾಣ ಮತ್ತು ಮುದ್ಗಲ ಪುರಾಣಗಳಂತೂ ಗಣಪತಿಗೆ ಮೀಸಲಾಗಿದೆ.

ಮಹಾಪುರಾಣಗಳಲ್ಲಿ ವಿಘ್ನರಾಜ ಗಜಾನನನ ಉಲ್ಲೇಖಗಳು ವಿಪುಲ ಪ್ರಮಾಣದಲ್ಲಿ ಬ್ರಹ್ಮ ವೈವರ್ತಪುರಾಣದೊಳಗೆ ಲಭಿಸುತ್ತದೆ. ಇದಕ್ಕಾಗಿ ಬ್ರಹ್ಮವೈವರ್ತಪುರಾಣಗಳಲ್ಲಿ ಗಣಪತಿ ಖಂಡ ಎಂಬ ಸ್ವತಂತ್ರ ಖಂಡವೇ ಇದೆ. ಇದರ 46 ಅಧ್ಯಾಯದೊಳಗೆ ಗಜಾನನ ಏಕದಂತ ಮೊದಲಾದ ಹೆಸರುಗಳು ಬಂದ ಬಗೆ ವಿಸ್ತಾರವಾಗಿ ವರ್ಣಿಸಲಾಗಿದೆ. ಪಾರ್ವತಿಯು ಗಣೇಶ ಪ್ರಾಪ್ತಿಗಾಗಿ ವ್ರತವನ್ನು ಮಾಡಿದ ಕಥಾಭಾಗ ಇದೆ. ಕೇವಲ ಗಣಪತಿ ಖಂಡದ ವಾಚನದಿಂದ ಲಭಿಸುವ ಪುಣ್ಯವು ಇಡೀ ಬ್ರಹ್ಮ ವೈವರ್ತಪುರಾಣ ವಾಚನದ ಪುಣ್ಯಕ್ಕೆ ಸಮವಾಗಿದೆ.

ಶಿವಪುರಾಣದ ರುದ್ರ ಸಂಹಿತೆಯಲ್ಲಿ ಬರುವ ಕುಮಾರ ಖಂಡದಲ್ಲಿಯ ಹದಿಮೂರನೆಯ ಅಧ್ಯಾಯದಿಂದ ಇಪ್ಪತ್ತನೆಯ ಅಧ್ಯಾಯ ತನಕ ನಾರದ ಮತ್ತು ಬ್ರಹ್ಮದೇವ ಇವರ ಸಂವಾದದಿಂದ ಗಜಾನನನ ಉತ್ಪತ್ತಿ ಕಥೆಯನ್ನು ತಿಳಿಸಲಾಗಿದೆ. ದ್ವಾರ ರಕ್ಷಣೆಯಿಂದ ಮೊದಲ್ಗೊಂಡು ವಾದದಿಂದ ಯುದ್ಧ ತನಕ ಪರ್ಯವಸಾನ ವಿಷ್ಣು - ಶಿವರ ವಿರುದ್ಧ

ಅನಂತ ಚಿಂತಾಮಣಿ ಜ್ಯೋತಿಷೀ, ಬಿಣಗಾ, ಕಾರವಾರ



ಗಣಪತಿಯ ತುಮುಲ ಯುದ್ಧ ಗಜಾನನ ನಾಮಾಭಿಧಾನ ಗಣಾಧ್ಯಕ್ಷ ಪದಪ್ರಾಪ್ತಿ ಗಣಪತಿಯ ವಿವಾಹ ಇತ್ಯಾದಿ ವಿವೇಚಿಸಲಾಗಿದೆ. ಪೂಜನದಲ್ಲಿ ಗಣಪತಿಗೆ ಪ್ರಾಥಮ್ಯ ಹೇಗೆ ಲಭಿಸಿತು ಎಂಬುದರ ಕಥೆಯು ಪದ್ಮಪುರಾಣದ ಸೃಷ್ಟಿ ಖಂಡದ ೬೧ ರಿಂದ ೬೩ ಅಧ್ಯಾಯದಲ್ಲಿ ಬಂದಿರುತ್ತದೆ.

ಶ್ರೀಕೃಷ್ಣನ ಮುಖದಿಂದ ಬಂದ ಅಂಗಾರಕ ಹಾಗೂ ವಿನಾಯಕ ಚತುರ್ಥಿ ವ್ರತ ಮಹಾತ್ಮ್ಯಗಳು ಭವಿಷ್ಯ ಪುರಾಣದಲ್ಲಿದೆ. ವಿನಾಯಕೋತ್ಪತ್ತಿಯ ಬಗೆಗೆ ಒಂದು ಅಧ್ಯಾಯವು ವರಾಹ ಪುರಾಣದಲ್ಲಿದೆ. ಲಿಂಗಪುರಾಣದೊಳಗೆ ಗಣೇಶ ಪ್ರಭಾವದ ವರ್ಣನೆಯು ೧೦೪ - ೧೦೫ ಅಧ್ಯಾಯಗಳಲ್ಲಿ ವಿವರವಾಗಿದೆ.

ಅಗ್ನಿ ಪುರಾಣದಲ್ಲಿ ಚತುರ್ಥಿ ವ್ರತದ ಮಹಾತ್ಮೆಯನ್ನು ಹೇಳಿದ್ದು, ಪೂಜಾ ವಿಧಿ ಮತ್ತು ಪೂಜೆ ಅವಶ್ಯಕತೆಗಳ ಕುರಿತು ಉಲ್ಲೇಖವಿದೆ. ಗರುಡ ಪುರಾಣದಲ್ಲಿ ಗಣಪತಿಯ ಉಲ್ಲೇಖವು ಒಂದೇ ಬಾರಿಗೆ ಬಂದರೂ ಕೂಡಾ ಅತ್ಯಂತ ಮಹತ್ವದ್ದಿದ್ದು ಗಣೇಶ ಪ್ರಾಧಾನ್ಯವನ್ನು ಸ್ಪಷ್ಟವಾಗಿ ಹೇಳಿದೆ. ಬ್ರಹ್ಮಪುರಾಣದಲ್ಲಿ ಶ್ರೀ ಗಣಪತಿಯ ಕ್ರೋಧದ ವರ್ಣನೆಯನ್ನು ಸ್ವಲ್ಪದರಲ್ಲಿ ಹೇಳಿದರೂ ಅದು ಗಣಪತಿ ಸಾಮರ್ಥ್ಯವನ್ನು ಪ್ರಕಟಪಡಿಸುತ್ತದೆ.

ಸ್ಕಂದ ಪುರಾಣದ ಕಾಶಿ ಖಂಡದಲ್ಲಿ ದಿವೋದಾಸ ರಾಜನ ಕಾಶಿ ನಿವಾಸದ ಕಥೆಯನ್ನು ತಿಳಿಸುತ್ತ ಗಣಪತಿಯ ವಿವರ ವಿವೇಚಿಸುತ್ತದೆ. ಬ್ರಹ್ಮ ಪುರಾಣದಲ್ಲಿ ಸತ್ಯವಿನಾಯಕ ವ್ರತಕಥೆ ಇದೆ. ನಾರದ ಪುರಾಣದಲ್ಲಿ ವಿನಾಯಕ ಶಾಂತಿ ಪ್ರಯೋಗ ಮಾತೃಕಾ ಪೂಜನ ಮತ್ತು ಪ್ರತಿ ಮಾಸಗಳ ಚತುರ್ಥಿಗಳ ಪೂಜಾ ಮಹಾತ್ಮೆ ಹೇಳಿದೆ.

ಸೌರ ಪುರಾಣದಲ್ಲಿ ಸ್ಕಂದ ಮತ್ತು ಶಿವ ಇವರ ಸಂವಾದದಿಂದ ಪ್ರಕಟಗೊಂಡ ದೂರ್ವಾ ಗಣಪತಿ ವ್ರತವು ಪ್ರಸಿದ್ಧವಾಗಿದೆ. ಸ್ವತಃ ಶಿವನು ಮಾಡಿದ ದೂರ್ವಾಗಣಪತಿ ವ್ರತದ ಉಪಾಸನೆಯನ್ನು ಹೇಳಲಾಗಿದೆ. ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಮಾರ್ಕಂಡೇಯ ಮತ್ತು ವಜ್ರ ಇವರ ಸಂವಾದದಿಂದ ಗಣಪತಿಯರಲ್ಲಿ ಆಗಸ ಮತ್ತು ಭೂಮಿ

*With Best Compliments from :*

PRAKASH OFFSET

PRAKASH OFFSET PRINTERS

Factory :
# 164, Industrial Area, Baikampady
New Mangalore - 575 010.
Ph.: 2407365/ 2409675.
Fax : 2409636

Branch :
Prakash Beedies Ltd., Compound
Opp. Rambhavan Complex,
Kodialbail, Mangalore - 575 001
Tel.: 0824 - 2427777

ಇವರೊಳಗಿನ ವೈಶಿಷ್ಟ್ಯಗಳ ಸಮಾವೇಶದ ವರ್ಣನೆ ಕಂಡು ಬರುತ್ತದೆ.

ಗಣೇಶ ಪುರಾಣವು ಎರಡು ಖಂಡಗಳನ್ನು ಹೊಂದಿದೆ. ಬ್ರಹ್ಮನು ವ್ಯಾಸರಿಗೆ, ವ್ಯಾಸರು ಭೃಗು ಮಹರ್ಷಿಗೆ ಸೋಮಕಾಂತ ಮಹಾರಾಜನಿಗೆ ತಿಳಿಸಿದನು. ಈ ಪುರಾಣದ ಪೂರ್ವ ಖಂಡವು (ಮೊದಲನೆ ಖಂಡ) ೯೨ ಅಧ್ಯಾಯಗಳನ್ನು ಹೊಂದಿದ್ದು, ಗಣಪತಿಯ ಅನೇಕ ಪ್ರಕಾರಗಳ ಮಂತ್ರೋಪಾಸನೆಯ ವಿವರವಿದೆ. ಇದನ್ನು ಉಪಾಸನಾಖಂಡ ಎಂದೂ ಕರೆಯುತ್ತಾರೆ. ಉತ್ತರ ಖಂಡವನ್ನು ಕ್ರೀಡಾ ಖಂಡವೆಂದು ಕರೆಯುತ್ತಿದ್ದು ಅದು ೧೫೫ ಅಧ್ಯಾಯಗಳನ್ನು ಹೊಂದಿದೆ. ಈ ಖಂಡದಲ್ಲಿ ನಾಲ್ಕು ಯುಗಗಳ ಅವತಾರ ಕಾರ್ಯ ಗಣಪತಿಯ ರೂಪ ಬಾಲಲೀಲೆ ಅಸುರರ ಸಂಹಾರ ಮೊದಲಾದವುಗಳಿಂದ ಎರಡನೆಯ ಖಂಡವು ಸಂಪನ್ನವಾಗಿದೆ.

ಮುದ್ಗಲ ಪುರಾಣದಲ್ಲಿ ಗಣಪತಿ ವಿಷಯ ವಿವರವಾಗಿದೆ. ಗಣಪತಿಯು ಸೃಷ್ಟಿನಿರ್ಮಾಣದ ಸಾಮರ್ಥ್ಯವನ್ನು ಸರ್ವರಿಗೂ ನೀಡಿದ್ದು, ವೇದಪ್ರಾರಬ್ಧ, ಮತ್ಸರಾಸುರ ವಧೆ, ವಕ್ರತುಂಡ ಚರಿತ್ರೆ, ಮದಾಸುರ ವಧೆ, ಏಕದಂತ ಸ್ತುತಿ ಹೀಗೆ ಗಣಪತಿಯು ಬೇರೆ ಬೇರೆ ಅವತಾರಗಳಿಂದ ರಾಕ್ಷಸರನ್ನು ಸಂಹರಿಸಿದ್ದು ಗಣಪತಿ ವ್ರತ ವಿಚಾರ ಸ್ತುತಿಪರ ಶ್ಲೋಕಗಳು ಹೀಗೆ ಮುದ್ಗಲ ಪುರಾಣವು ಗಣಪತಿಯ ಮಹಿಮೆಯನ್ನು ಸಾರುತ್ತದೆ. ಇಡೀ ವರ್ಷದಲ್ಲಿ ಶುದ್ಧ ಹಾಗೂ ಕೃಷ್ಣ ಪಕ್ಷಗಳಲ್ಲಿ ಬರುವ ಚತುರ್ಥಿಗಳ ಪೂಜಾವಿಧಿ ಮತ್ತು ಅದರ ಫಲ ಶಾಸ್ತ್ರ ಶುದ್ಧ ಮಾಹಿತಿ ಆ ಆ ವ್ರತಗಳ ಫಲಗಳನ್ನು ಯಾರು ಯಾರು ಪಡೆದುಕೊಂಡರು ಎಂಬುದರ ಬಗ್ಗೆ ಮುದ್ಗಲ ಪುರಾಣದಲ್ಲಿದೆ. ದಕ್ಷ ಹಾಗೂ ಮುದ್ಗಲದಲ್ಲಿ ನಡೆದ ಸಂವಾದಾತ್ಮಕವಾದ ಮುದ್ಗಲ ಪುರಾಣದಲ್ಲಿ ವಿಶೇಷವಾಗಿ ವಿವಿಧ ಸಿದ್ಧಕ್ಷೇತ್ರಗಳ ವರ್ಣನೆಯಲ್ಲಿ ಸ್ವಾನಂದ ಭುವನ (ಮೋರಗಾಂವ) ಕ್ಷೇತ್ರದ ವಿಸ್ತೃತ ವರ್ಣನೆ - ಖ್ಯಾತಿಯ ವಿವರವಿದೆ. ಮುದ್ಗಲ ಪುರಾಣದಲ್ಲಿ ನನ್ನ ಪೂರ್ಣ ಹಾಗೂ ಸರ್ವ ಪ್ರಕಾಶಕ ಸ್ವರೂಪಗಳು ಪ್ರಕಟವಾಗಿವೆ ಎಂದು ಸ್ವತಃ ಧೂಮ್ರವರ್ಣ ಗಣಪತಿಯು ಹೇಳಿದ್ದಾನೆ. ಗಣೇಶ ಪುರಾಣದಲ್ಲಿ ಗಣೇಶ ಗೀತೆ ಇದ್ದಂತೆ ಮುದ್ಗಲ ಪುರಾಣದಲ್ಲಿ ಯೋಗ ಗೀತೆಯು ಪ್ರಸಿದ್ಧವಾಗಿದೆ. ಈ ರೀತಿ ಮುದ್ಗಲ ಪುರಾಣವು ಒಂಭತ್ತು ಖಂಡಗಳಲ್ಲಿ ೪೨೮ ಅಧ್ಯಾಯದೊಳಗೆ ೨೩ ಸಾವಿರ ಶ್ಲೋಕಗಳನ್ನು ಹೊಂದಿದೆ. ಇನ್ನು ಉಳಿದ ಮಹಾಪುರಾಣ - ಉಪಪುರಾಣಗಳಲ್ಲಿ ಗಣಪತಿಯ ವಿವರಗಳಿವೆ. ★

### ಉತ್ತರಗಳು :

1. ಜನಮೇಜಯ; 2. ಭಾವಪುರಿ; 3. ಋಷ್ಯಮೂಕ ಪರ್ವತದಲ್ಲಿ; 4. ಕರ್ಣನ ಅಂಗದೇಶದ 5. ಹರಿಶ್ಚಂದ್ರನ; 6. ಮಂಗಳೂರು ಸಮಾಚಾರ; 7. ಸೀತೆ; 8. ಗೋಕರ್ಣ; 9. ಜಂಬೂ ದ್ವೀಪದಲ್ಲಿ; 10. ರಾಜಾ, ರೋರರ್, ರಾಕೆಟ್ ಮತ್ತು ರಾಣಿ; 11. ತಾಳಿಕೋಟೆ ಯುದ್ಧ; 12. ಪರಾಶರ; 13. ವೇದವ್ಯಾಸರು; 14. ಭೀಷ್ಮ ಪರ್ವದಲ್ಲಿ; 15. ಕೆ. ಎಂ. ಮುನ್ಷಿ; 16. ವಸಿಷ್ಠರ; 17. ಸಮರ್ಥರಾಮದಾಸ; 18. ಕ್ರಿ. ಪೂ. 3101ರಲ್ಲಿ; 19. ವೇದವ್ಯಾಸರನ್ನು; 20. ಗಂಗಾಮೂಲ.



# ಸಾಂಸ್ಕೃತಿಕ ರಸಪ್ರಶ್ನೆಗಳು

ಡಾ। ಎಚ್. ವಿ. ನರಸಿಂಹ ಮೂರ್ತಿ, ಕುಂದಾಪುರ

1. ಪರೀಕ್ಷಿತನ ನಂತರ ಹಸ್ತಿನಾಪುರದ ರಾಜನಾದವನು ಯಾರು?
2. ಭಗವಾನ್ ಮಹಾವೀರ ಅಸುನೀಗಿದ ಸ್ಥಳ ಯಾವುದು?
3. ರಾಮ - ಸುಗ್ರೀವರು ಭೇಟಿಯಾದಾಗ ಸುಗ್ರೀವ ವಾಸವಾಗಿದ್ದುದು ಎಲ್ಲಿ?
4. ಚಂಪಾವತಿ ಯಾವ ದೇಶದ ರಾಜಧಾನಿಯಾಗಿತ್ತು?
5. ತ್ರಿಶಂಕು ಯಾರ ತಂದೆ?
6. ಕನ್ನಡ ಭಾಷೆಯ ಮೊದಲ ಪತ್ರಿಕೆ ಯಾವುದು?
7. ವಾಲ್ಮೀಕಿ ರಾಮಾಯಣದ ವೈದೇಹಿ ಯಾರು?
8. 'ಭೂಕೈಲಾಸ' ಎಂದು ಪ್ರಸಿದ್ಧವಾದ ಕ್ಷೇತ್ರ ಯಾವುದು?
9. ಭಾರತವು ಯಾವ ದ್ವೀಪದಲ್ಲಿ ಇದೆ?
10. ಜೋಗಜಲಪಾತದ ನಾಲ್ಕು ಜಲಧಾರೆಗಳ ಹೆಸರೇನು?
11. ವಿಜಯನಗರ ಸಾಮ್ರಾಜ್ಯದ ಇತಿಶ್ರೀ ಹಾಡಿದ ಯುದ್ಧ ಯಾವುದು?
12. ಭಗವಾನ್ ವೇದವ್ಯಾಸರ ತಂದೆ ಯಾರು?
13. ವಿಷ್ಣು ಸಹಸ್ರನಾಮವನ್ನು ಬರೆದವರು ಯಾರು?
14. ಮಹಾಭಾರತದ ಯಾವ ಪರ್ವದಲ್ಲಿ ಭಗವದ್ಗೀತೆ ಬರುತ್ತದೆ?
15. ಭಾರತೀಯ ವಿದ್ಯಾಭವನದ ಸ್ಥಾಪಕರು ಯಾರು?
16. ವೇದವ್ಯಾಸರು ಯಾರ ಮೊಮ್ಮಗ?
17. ಛತ್ರಪತಿ ಶಿವಾಜಿಯ ಧಾರ್ಮಿಕ ಗುರು ಯಾರು?
18. ಕಲಿಯುಗವು ಯಾವಾಗ ಆರಂಭವಾಯಿತು?
19. 'ಬಾದರಾಯಣ' ಎಂದು ಯಾರನ್ನು ಕರೆಯುತ್ತಾರೆ?
20. ತುಂಗಾನದಿಯ ಉಗಮಸ್ಥಾನ ಯಾವುದು?

*With Best Compliments from :*



**LAXMIDAS JEWELLERS**

"Megha Building" Balmatta Road,
Mangalore - 575 001.

**Phone : 2426060, 2421760**

ಪ್ರಕರಣ ಗ್ರಂಥಗಳು - ಸಾರ ಸಂಗ್ರಹ

# ಪ್ರಪಂಚಮಿಥ್ಯಾತ್ವಾನುಮಾನಖಂಡನ

**ಪ್ರೊ। ಎಸ್. ವೆಂಕಟೇಶ ಮೂರ್ತಿ**

ಬ್ರಹ್ಮಮೀಮಾಂಸಾ ಶಾಸ್ತ್ರದಲ್ಲಿ ಜನ್ಮಾದ್ಯಧಿಕರಣದಲ್ಲಿ ಸೂತ್ರಕಾರನಾದ ಭಗವಾನ್ ವೇದವ್ಯಾಸರು ಜಗತ್ಸೃಷ್ಟ್ಯಾದಿ ಅಷ್ಟಕರ್ತೃತ್ವವನ್ನು ಪರಬ್ರಹ್ಮನ ಲಕ್ಷಣವೆಂದು ಹೇಳಿದ್ದಾರೆ. ಜಗತ್ತು ಅಸತ್ಯವಾದರೆ ಬ್ರಹ್ಮನು ಅದಕ್ಕೆ ಕಾರಣವಾಗುವುದು ಹೇಗೆ? ಬ್ರಹ್ಮನಿಗೆ ಜಗತ್ಕಾರಣತ್ವವನ್ನು ಒಪ್ಪಬೇಕಾದರೆ ಮೊದಲಿಗೆ ಸತ್ಯ ಎಂದು ಒಪ್ಪಬೇಕು. ಜಗತ್ತು ಅಸತ್ಯ ಎಂದು ಸಾಧಿಸಲು ಮಾಯಾವಾದಿಗಳು ಪ್ರಯೋಗಿಸುವ ಅನುಮಾನಗಳನ್ನು ದೋಷಪೂರಿತ ಎಂದು ಖಂಡಿಸಿ, ಜಗತ್ಸತ್ಯತ್ವವನ್ನು ಸಮರ್ಥಿಸಲು ಶ್ರೀಮದಾಚಾರ್ಯರು ಈ ಪ್ರಕರಣವನ್ನು ರಚಿಸಿದ್ದಾರೆ.

## ಪರಮತಾನುವಾದ

ಈ ಪ್ರಕರಣದ ಮೊದಲಿಗೆ ಶ್ರೀಮದಾಚಾರ್ಯರು ಮಾಯಾವಾದಿಗಳಿಂದ ಉಕ್ತವಾದ ಪ್ರಪಂಚಮಿಥ್ಯಾತ್ವಾನುಮಾನವನ್ನು ಅನುವಾದ ಮಾಡುತ್ತಾರೆ.

**ವಿಮತಂ ಮಿಥ್ಯಾ ದೃಶ್ಯತ್ವಾತ್ । ಯದಿತ್ಥಂ ತತ್ತಥಾ । ಯಥಾ ಸಂಪ್ರತಿಪನ್ನಮ್।**

ತತ್ವವಾದಿಗಳು ಮತ್ತು ಮಾಯಾವಾದಿಗಳ ನಡುವೆ ಸತ್ಯ, ಅಸತ್ಯ ಎಂಬುದಾಗಿ ವಿವಾದಕ್ಕೆ ವಸ್ತುವಾಗಿರುವ ಪ್ರಪಂಚವನ್ನು ಇಲ್ಲಿ **ವಿಮತ** ಎಂದು ಉಲ್ಲೇಖಿಸಲಾಗಿದೆ. ಪ್ರಪಂಚ ಸುಳ್ಳು; ಕಣ್ಣಿಗೆ ಕಾಣುವುದರಿಂದ ಅಥವಾ ಅನುಭವಗೋಚರವಾದುದರಿಂದ. ಉದಾಹರಣೆಗೆ, ಹಗ್ಗದಲ್ಲಿ ಕಾಣುವ ಹಾವು ಅಥವಾ ಕಪ್ಪೆಚಿಪ್ಪಿನಲ್ಲಿ ಕಾಣುವ ಬೆಳ್ಳಿ. ಹೀಗೆಂದು ಮಾಯಾವಾದಿಗಳು ಹೇಳುತ್ತಾರೆ.

ಇಲ್ಲಿ ಪ್ರಪಂಚ **ಪಕ್ಷ**. ಮಿಥ್ಯಾತ್ವ **ಸಾಧ್ಯ**. ದೃಶ್ಯತ್ವ **ಹೇತು**. ವಿಮತಂ ಮಿಥ್ಯಾ ಎಂಬುದು **ಪ್ರತಿಜ್ಞಾ**.

ಅನುಮಾನಪ್ರಮಾಣದಿಂದ ಸಾಧಿಸಲ್ಪಡುವ ವಸ್ತು **ಸಾಧ್ಯ**. ಯಾವ ಧರ್ಮವನ್ನು ಸಾಧಿಸಬೇಕಾಗಿದೆಯೋ ಅಂಥಹ ಧರ್ಮವುಳ್ಳ ಧರ್ಮಿಯ **ಪಕ್ಷ**. ಸಾಧ್ಯದಂತಿರುವ ಧರ್ಮವು ಅದು **ಸಪಕ್ಷ**. ಸಾಧ್ಯಕ್ಕೆ ವಿರುದ್ಧವಾದ ಧರ್ಮವು **ವಿಪಕ್ಷ**. ಪಕ್ಷದಲ್ಲಿ ಸಾಧ್ಯಸಂಬಂಧವನ್ನು ತಿಳಿಸುವ ವಾಕ್ಯ **ಪ್ರತಿಜ್ಞಾ**. ವ್ಯಾಪ್ತಿ ಸಂಬಂಧದಿಂದ ಸಾಧ್ಯದ ಜ್ಞಾನವನ್ನು ಉಂಟುಮಾಡುವ ಧರ್ಮ ಹೇತು. ಲಿಂಗ ಎಂದರೂ ಇದುವೇ. ಸಾಧ್ಯ - ಹೇತುಗಳಿಗಿರುವ ವ್ಯಾಪ್ತಿಯನ್ನು ಅರಿಯಲು ಸಹಾಯಕವಾದ ಆಶ್ರಯವೇ **ದೃಷ್ಟಾಂತ.**

ಪವನಜ ಪ್ರಕಾಶನ, 1625, 5ನೇ ಬಿ ಕ್ರಾಸ್, 2ನೇ ಬ್ಲಾಕ್, ಬಿ. ಎಸ್. ಕೆ. Iಸ್ಟೇಜ್, ಬೆಂಗಳೂರು – 560 050



## ಪರಮತದ ಖಂಡನೆ

### ೧. ಪ್ರತಿಜ್ಞಾವಾಕ್ಯಕ್ಕೆ ದೋಷಗಳು :

ಜಗತ್ತು ಇಲ್ಲದಿರುವುದರಿಂದ ಅವರು ಹೇಳುವ ಅನುಮಾನಕ್ಕೆ **ಆಶ್ರಯಾಸಿದ್ಧಿ** ಎಂಬ ದೋಷ ಬರುತ್ತದೆ ಎಂದು ಆಚಾರ್ಯರು ಹೇಳುತ್ತಾರೆ. ಹಾಗಲ್ಲ, ಮಿಥ್ಯಾ ಎಂದರೆ ಅನಿರ್ವಚನೀಯ (ಅಂದರೆ ಯಾವ ರೀತಿಯಿಂದಲೂ ವರ್ಣಿಸಲಾಗದ ವಸ್ತು) ಎಂದು ಅವರು ಹೇಳುತ್ತಾರೆ. ಪಕ್ಷದ ಈ ವಿಶೇಷಣವು ಅಪ್ರಸಿದ್ಧವಾದುದರಿಂದ (ಅನುಭವಕ್ಕೆ ಅಗೋಚರವಾಗಿರುವುದರಿಂದ) ಪಕ್ಷಕ್ಕೆ **ಅಪ್ರಸಿದ್ಧವಿಶೇಷಣ** ಎಂಬ ದೋಷ ಬರುತ್ತದೆ.

ಅನಿರ್ವಚನೀಯ ಎಂದರೆ **ಸದಸದ್ವಿಲಕ್ಷಣ** ಎಂದು ಹೇಳಿದರೆ ಆಗ **ಸಿದ್ಧಸಾಧನತಾ** ಎಂಬ ದೋಷ. ಪ್ರಪಂಚವು ಸತ್ ವಸ್ತುವೂ ಅಲ್ಲ, ಅಸತ್ ವಸ್ತುವೂ ಅಲ್ಲ. ಅದು ಇವೆರಡಕ್ಕಿಂತ ವಿಲಕ್ಷಣವಾದುದು. ಅಂದರೆ ಸದಸದ್ವಿಲಕ್ಷಣ ಎಂದರ್ಥ. ಹೀಗೆ ಅದ್ವೈತಿಗಳು ಹೇಳುತ್ತಾರೆ. ಪ್ರಪಂಚವು ಅಸತ್ ವಸ್ತುವಲ್ಲ ಎಂಬುದನ್ನು ನಾವು ಒಪ್ಪಿದ್ದೇವೆ. ನಾವು ಒಪ್ಪಿರುವುದನ್ನೇ ಅವರು ಸಾಧಿಸಿದರೆ ಸಿದ್ಧಸಾಧನತಾ ಎಂಬ ದೋಷ.

### ೨. ಹೇತುವಿನ ದೋಷಗಳು :

ದೃಶ್ಯತ್ವಾತ್ ಎಂಬ ಹೇತುವಿಗೆ ದೋಷವನ್ನು ಹೇಳುತ್ತಾರೆ. ದೃಶ್ಯತ್ವವು ಸತ್ಯವೋ ಅಥವಾ ಅಸತ್ಯವೋ ಎಂಬುದು ಮೊದಲು ಸಿದ್ಧವಾಗಬೇಕಾದ ವಿಷಯ. ಅದು ಬ್ರಹ್ಮನಂತೆ ಸತ್ಯವಾಗಲಾರದು. ದೃಶ್ಯತ್ವವು ಸತ್ಯವಾದರೆ ಅದು ಸಾಧಿಸಬೇಕಾದ ಧರ್ಮವು ಸತ್ಯವಾಗಬೇಕಾಗುತ್ತದೆ. ಅಂದರೆ ಮಿಥ್ಯಾತ್ವಕ್ಕೆ ಹಾನಿ. ಅಂದರೆ ವಿಶ್ವವು ಅಸತ್ಯವಲ್ಲ ಎಂದಾಗುತ್ತದೆ. ಅಂದಮೇಲೆ ದೃಶ್ಯವಾದುದೆಲ್ಲ ಅಸತ್ಯ ಎಂಬ ಅದ್ವೈತದ ನಿಯಮಕ್ಕೆ ಭಂಗ ಬರುತ್ತದೆ. ಹೇತುವು ಅಸತ್ಯ ಎಂದು ಹೇಳುವುದಾದರೆ ಅಸತ್ಯವಾದ ಹೇತುವು ಸಾಧ್ಯವನ್ನು ಸಾಧಿಸಲಾರದು. ಆಗ ಹೇತುವಿಗೆ **ಅಸಿದ್ಧಿ** ಎಂಬ ದೋಷ. ಸತ್ಯವೂ ಅಲ್ಲ, ಅಸತ್ಯವೂ ಅಲ್ಲ, ಅದು ಅನಿರ್ವಚನೀಯ ಎಂದರೆ ಆಗಲೂ ಅಸಿದ್ಧಿಯೇ. ಈ ಪ್ರಕಾರ ಪ್ರಪಂಚವೇ ಅಸತ್ಯವಾದುದರಿಂದ ದೃಶ್ಯತ್ವ ಎಂಬ ಹೇತುವಿಗೆ ಆಶ್ರಯವಿಲ್ಲದಂತಾಗುವುದರಿಂದ **ಆಶ್ರಯಾಸಿದ್ಧಿ** ಎಂಬ ದೋಷ ಬರುತ್ತದೆ.

ಹೇತುವು ಸಾಧ್ಯಸಾಧಕವಾಗಬೇಕಾದರೆ ಸಾಧ್ಯದ ವ್ಯಾಪ್ತಿಯು ಹೇತುವಿನಲ್ಲಿ ಇರಬೇಕು. ಒಂದು ಇನ್ನೊಂದನ್ನು ಬಿಟ್ಟಿರಲಾರದ ಸಂಬಂಧಕ್ಕೆ **ವ್ಯಾಪ್ತಿ** ಎಂದು ಹೆಸರು. ಬೆಂಕಿಯನ್ನು ಬಿಟ್ಟು ಹೊಗೆ ಇರಲು ಸಾಧ್ಯವಿಲ್ಲ. ಅಂದರೆ ಹೊಗೆಯಲ್ಲಿ ಬೆಂಕಿಯ ವ್ಯಾಪ್ತಿ ಇದೆ ಎಂದರ್ಥ. ಆದ್ದರಿಂದ ನಾವು ಹೊಗೆಯನ್ನು ಕಂಡಾಗ ಅಲ್ಲಿ ಬೆಂಕಿಯಿದೆ ಎಂದು ನಿರ್ಣಯಿಸುತ್ತೇವೆ. **ವಿರೋಧ** ಹಾಗೂ **ಅನೈಕಾಂತಿಕ** ಎಂಬ ದೋಷಗಳಿದ್ದರೆ ಆಗ ಹೇತುವಿನಲ್ಲಿ ವ್ಯಾಪ್ತಿ ಇರುವುದಿಲ್ಲ. ಹೇತುವು ಸಾಧ್ಯದಲ್ಲಿರುವ ಬದಲು ಸಾಧ್ಯವಿಲ್ಲದಿರುವ ಕಡೆಯಲ್ಲಿಯೇ ಇದ್ದರೆ ಆಗ ಹೇತುವಿಗೆ **ವಿರೋಧ** ಎಂಬ ದೋಷ. ಉದಾಹರಣೆಗೆ, ಇದು ತಣ್ಣಗಿರುವುದರಿಂದ ಬೆಂಕಿ ಎನ್ನುವ ಮಾತು. ತಣ್ಣಗೆ ಎಂಬ ಧರ್ಮವು ಬೆಂಕಿಯಲ್ಲಿಲ್ಲ, ಆದರೆ ನೀರಿನಲ್ಲಿರುತ್ತದೆ.

ಹೇತುವು ಸಾಧ್ಯವಿರುವಲ್ಲೂ, ಸಾಧ್ಯವಿಲ್ಲದ ಕಡೆಯಲ್ಲೂ ಇದ್ದರೆ ಅದು **ಅನೈಕಾಂತಿಕ** ಎಂಬ ದೋಷಕ್ಕೆ ಕಾರಣವಾಗುತ್ತದೆ. 'ಕೋಡು ಇರುವುದರಿಂದ ಇದು ಹಸು' ಎಂದು ಹೇಳಿದರೆ ಅದು ಅನೈಕಾಂತಿಕ ದೋಷವುಳ್ಳ ಹೇತು. ಏಕೆಂದರೆ ಕೋಡು ಹೊಂದಿರುವಿಕೆ ಎಂಬ ಧರ್ಮವು ಹಸುವಿನಲ್ಲಿ ಮಾತ್ರವಲ್ಲದೆ ಬೇರೆ ಕೆಲವು ಪ್ರಾಣಿಗಳಲ್ಲಿಯೂ ಇರುತ್ತದೆ.

ಸತ್ಯವಾದ ಆತ್ಮನು ದೃಶ್ಯನೆಂದು ಅದ್ವೈತದಲ್ಲಿ ಒಪ್ಪಿರುವುದರಿಂದ ದೃಶ್ಯವಾದ ಜಗತ್ತು ಆತ್ಮನಂತೆ ಸತ್ಯವೇ ಆಗಬೇಕಾಗುತ್ತದೆ. ಅದ್ವೈತವು ಹೇಳುವಂತೆ ಜಗತ್ತು ಅಸತ್ಯವೇ ಆದ ಪಕ್ಷದಲ್ಲಿ ಜಗತ್ತಿನಲ್ಲಿಯೇ ಸೇರಿರುವ 'ವಿಶ್ವಂ ಮಿಥ್ಯಾ ದೃಶ್ಯತ್ವಾತ್' ಎಂಬ ಅನುಮಾನವೂ ಅಸತ್ಯವಾಗುತ್ತದೆ. ಹೀಗೆ ತರ್ಕದ ಬಾಧವಿರುವುದರಿಂದ ಹೇತುವು ಸಾಧ್ಯನಿಶ್ಚಯವನ್ನು ಉಂಟುಮಾಡುವುದಿಲ್ಲ. ಆದ್ದರಿಂದ ಹೇತುವಿಗೆ **ಅನಧ್ಯವಸಿತ** ಎಂಬ ದೋಷ ಬರುತ್ತದೆ. ಸಾಧ್ಯಸಿದ್ಧಿಯು ಯಾವುದರಿಂದ ಆಗುತ್ತದೋ ಅದು **ಅಧ್ಯವಸಿತ**. ಯಾವುದರಿಂದ ಸಾಧ್ಯಸಿದ್ಧಿಯು ಆಗುವುದಿಲ್ಲವೋ ಅದು ಅನಧ್ಯವಸಿತ.

**೩. ಅನುಮಾನಕ್ಕೆ ದೋಷಗಳು :**

'ವಿಶ್ವಂ ಮಿಥ್ಯಾ' ಎಂಬುದು ಪ್ರತ್ಯಕ್ಷಾದಿ ಪ್ರಮಾಣಗಳಿಗೆ ವಿರುದ್ಧವಾಗಿದೆ. ಪ್ರಪಂಚವು ಸತ್ಯ ಎಂಬುದು ಪ್ರತ್ಯಕ್ಷಕ್ಕೆ ಗೋಚರವಾಗಿರುವುದಲ್ಲದೆ, 'ವಿಶ್ವಂ ಸತ್ಯಂ ಮಘವಾನಾ ಯುವೋಃ' ಇತ್ಯಾದಿ ವೇದವಾಕ್ಯಗಳಿಂದಲೂ ಸಿದ್ಧವಾಗಿದೆ. ಪ್ರತ್ಯಕ್ಷ ಮತ್ತು ಆಗಮಗಳಿಗೆ ವಿರುದ್ಧವಾಗಿ ಅನುಮಾನದಿಂದ ವಿಶ್ವವು ಮಿಥ್ಯಾ ಎಂದು ಸಾಧಿಸಲು ಹೊರಟರೆ, ಅನುಮಾನಕ್ಕೆ **ಕಾಲಾತ್ಯಯಾಪದಿಷ್ಟ** ಅಥವಾ **ಬಾಧ** ಎಂಬ ದೋಷ ಬರುತ್ತದೆ. ಪ್ರಬಲ ಪ್ರಮಾಣಗಳಿಂದ ಸಾಧ್ಯಾಭಾವವು ಸಾಧಿಸಲ್ಪಟ್ಟರೆ ಅದು ಬಾಧ ಎಂಬ ದೋಷ.

ಕಪ್ಪೆಚಿಪ್ಪನ್ನು ನೋಡಿ ಅದನ್ನು ಬೆಳ್ಳಿ ಎಂಬುದಾಗಿ ಗ್ರಹಿಸಿದರೆ ಅಂಥಹ ಜ್ಞಾನಕ್ಕೆ ಭ್ರಮೆಯೇ ಕಾರಣ. ಅಂಥಹ ಭ್ರಮೆಯು ಪ್ರಮಾಣವಾಗಲಾರದು. ಅಲ್ಲಿ ನಿರ್ದೋಷವಾದ ಇಂದ್ರಿಯ ಸನ್ನಿಕರ್ಷ ಇಲ್ಲದಿರುವುದರಿಂದ ಅದು ಸಾಕ್ಷಿಗೃಹೀತವಾದ ನಿಜವಾದ ಪ್ರತ್ಯಕ್ಷವಾಗಲಾರದು. ಭ್ರಾಂತಿರಹಿತವಾದ ಪ್ರತ್ಯಕ್ಷಕ್ಕೆ ಪ್ರಪಂಚವು ಸತ್ಯ ಎಂದೇ ತಿಳಿದು ಬರುತ್ತದೆ. ಅದ್ವೈತವು 'ವಿಶ್ವಂ ಮಿಥ್ಯಾ'ಎಂದು ಸಾಧಿಸಲು ಪ್ರಯೋಗಿಸಿದ ಅನುಮಾನದಿಂದಲೇ 'ವಿಶ್ವಂ ಸತ್ಯಂ' ಎಂದು ನಾವು ನಿರ್ವಿವಾದವಾಗಿ ಸಾಧಿಸಬಹುದು.

**೪. ದೃಷ್ಟಾಂತಕ್ಕೆ ದೋಷಗಳು :**

ವಿಶ್ವಮಿಥ್ಯಾತ್ವವನ್ನು ಸಾಧಿಸಲು ಪ್ರತಿವಾದಿಗಳು ಕೊಡುವ ಶುಕ್ತಿ - ರಜತ ದೃಷ್ಟಾಂತಕ್ಕೆ **ಸಾಧ್ಯವೈಕಲ್ಯ** ಎಂಬ ದೋಷವಿದೆ. ಇಲ್ಲಿ ಮಿಥ್ಯಾತ್ವವು ಸಾಧ್ಯ. ಅದನ್ನು ಸಾಧಿಸಲು ಕೊಡುವ ದೃಷ್ಟಾಂತವಾದ ಶುಕ್ತಿ ರಜತಗಳು ಅನಿರ್ವಚನೀಯವಲ್ಲ ಅಂದರೆ ಅವು ಸತ್ಯ. ಸತ್ಯವಾದ ದೃಷ್ಟಾಂತದಿಂದ ಅಸತ್ಯವನ್ನು ಸಾಧಿಸಲು ಸಾಧ್ಯವಿಲ್ಲವಾದ್ದರಿಂದ ದೃಷ್ಟಾಂತಕ್ಕೆ ಸಾಧ್ಯವೈಕಲ್ಯ ಎಂಬ ದೋಷ. ಹಿಂದೆ ಹೇಳಿದಂತೆ ದೃಶ್ಯತ್ವ ಹೇತುವು ದೃಷ್ಟಾಂತದಲ್ಲಿ ಇಲ್ಲ (ಶುಕ್ತಿಯಲ್ಲಿ ರಜತ ಕಂಡದ್ದು ಭ್ರಾಂತಿಯೆಂದು ಈ ಹಿಂದೆಯೇ ಹೇಳಲಾಗಿದೆ.) ಆದ್ದರಿಂದ **ಸಾಧನವೈಕಲ್ಯ**



ಎಂಬ ಮತ್ತೊಂದು ದೋಷವೂ ಬರುತ್ತದೆ.

ಹೀಗೆ ಪ್ರಪಂಚವು ಮಿಥ್ಯಾ ಎಂದು ಸಾಧಿಸಲು ಅದ್ವೈತವು ಪ್ರಯೋಗಿಸುವ ಅನುಮಾನ, ಹೇತು ಮತ್ತು ದೃಷ್ಟಾಂತಗಳು ಕೇವಲ ದೋಷಗಳಿಂದಲೇ ತುಂಬಿರುವುದರಿಂದ ಪ್ರಪಂಚವು ಸತ್ಯ ಎಂಬ ಸಿದ್ಧಾಂತ ಅಬಾಧಿತ ಎಂಬುದಾಗಿ ಶ್ರೀ ಮದಾಚಾರ್ಯರು ಈ ಪ್ರಕರಣ ಗ್ರಂಥದಲ್ಲಿ ಸಾಧಿಸಿ ತೋರಿಸಿದ್ದಾರೆ.

**ಯೋ ದೃಶ್ಯತೇ ಸದಾನಂದನಿತ್ಯವ್ಯಕ್ತಚಿದಾತ್ಮನಾ ।**
**ನಿರ್ದೋಷಾಖಿಲಕಲ್ಯಾಣಗುಣಂ ವಂದೇ ರಮಾಪತಿಮ್ ॥**

★

*Our pranamas at the feet of*
SRI SRI SUGUNENDRA THIRTHA SWAMIJI

**FOR ALL YOUR AIR TICKETS**
- Lowest International Fares
- Rock bottom Price on Domestic Air Tickets
- Package Tours - Worldwide
- Mediclaim Insurance Foreign Exchnage
- Western Union Money Transfer • Passports & Visas
- Hotel Reservation - Worldwide

Contact : MS. S. MALINI / MR. S. HARISH
AIR PUSHPAK TOURS (INDIA) PVT. LTD.
# 86, Richmond Road, Bangalore - 560 025
Ph.: 22231661-4 Lines / 22228355-5 Lines FAX : 22244366 Mobile : 9448497441
Website : www.airpushpak.com E-mail: airpushpak@vsnl.net

- Airport / Railway Station - Pickups and Drops.
- Coach Tours / Railway Reservations
- Hotel Reservations - World Wide
- DOMESTIC PACKAGE TOURS

DELHI - AGRA - JAIPUR - GOA - KERALA
KODAIKANAL - OOTY - MYSORE ETC.

Contact : MR. K. RAJENDRA / MS. LAKSHMI
Ph.: 22231661-4 Lines / 22228355-5 Lines FAX : 22244366 Mobile : 9448497449
Website : www.airpushpak.com E-mail: airpushpak@vsnl.net
PUSHPAK TRAVELS
# 86, Richmond Road, Bangalore - 560 025



# ಪ್ರೇಯಸ್ಸು - ಶ್ರೇಯಸ್ಸು

ಎ. ಬಿ. ಕುಂಜಾರ್, ಬೆಂಗಳೂರು

ಪ್ರೇಯಸ್ಸು ಶ್ರೇಯಸ್ಸುಗಳು ಲೋಕದ ಸಂಪತ್ತಿನ ಎರಡು ಬಗೆಗಳು. ಎರಡೂ ಜ್ಞಾನರೂಪಿಗಳು. ಕರ್ಮಮಾರ್ಗದಲ್ಲಿ ಫಲಪ್ರದಗಳು, ವಿಭಿನ್ನ ಪ್ರಯೋಜನದಾಯಕಗಳು ಕೂಡ. ಲೌಕಿಕ ಫಲವು ಪ್ರೇಯಸ್ಸಾದರೆ ಅಲೌಕಿಕ ಫಲವೇ ಶ್ರೇಯಸ್ಸು. ಐಹಿಕ ಭೋಗ ಸುಖಕ್ಕೆ ಯೋಗ್ಯವೆನಿಸುವ ನಿಲುವು ಪ್ರೇಯಸ್ಸಿನದು. ಭಗವಂತನ ಸಾಯುಜ್ಯ ಯೋಗದ ಭಾಗ್ಯ ಅರಸುವ ಒಲವು ಶ್ರೇಯಸ್ಸಿನದು.

ಶ್ರೇಯಸ್ಸು ಪ್ರೇಯಸ್ಸುಗಳ ನಡುವೆ ಕೂದಲೆಳೆಯಷ್ಟೇ ಅಂತರ. ಹೀಗಾಗಿ ಈ ವ್ಯತ್ಯಾಸ ಅರಿಯದ ಅನೇಕರ ಅವಾಂತರವೇ ನಿರಂತರ. ಕರ್ಮಫಲಾಪೇಕ್ಷೆಗೆ ನಿಷ್ಠೆ ಮತ್ತು ಅದರ ಸ್ವಾರ್ಥಪರ ವಿನಿಯೋಗದ ದೃಷ್ಟಿಯೇ ಪ್ರೇಯಸ್ಸು. ನಿಷ್ಕಾಮ ಕರ್ಮಫಲವನ್ನು ನಿಸ್ವಾರ್ಥ ಕರ್ಮಗಳಲ್ಲಿ ತೊಡಗಿಸಿ ಧನ್ಯತೆ ಕಂಡುಕೊಳ್ಳುವುದು ಶ್ರೇಯಸ್ಸು.

ಪ್ರೇಯಸ್ಸು ಶ್ರೇಯಸ್ಸುಗಳು ನೀಡುವ ಫಲಗಳ ನಡುವೆ ಉತ್ತರ ದಕ್ಷಿಣ ಧ್ರುವಗಳ ವ್ಯತ್ಯಾಸ. ಶ್ರೇಯಸ್ಸು ಶಾಶ್ವತ ಆನಂದಕ್ಕೆ ದಾರಿಯಾಗಬಲ್ಲುದಾದರೆ ಪ್ರೇಯಸ್ಸು ಅದಕ್ಕೆ ಮಾರಿಯಾಗಿ ನಿಲ್ಲಬಲ್ಲುದು. ಭೋಗಸುಖದ ಬೆನ್ನುಹತ್ತಿ ಸುಸ್ತುಹೋಗುವುದೊಂದೇ ಪ್ರೇಯಸ್ಸಿನ ಪರಿ. ಕರ್ಮದಲ್ಲಿ ಪ್ರೇಮವಿಟ್ಟು ಫಲಾಪೇಕ್ಷೆಯನ್ನು ಬದಿಗಿಟ್ಟು ಕರ್ತವ್ಯದ ನೆಲೆಗಟ್ಟಿನಲ್ಲಿ ಮುಂದುವರಿಯುವುದು ಶ್ರೇಯಸ್ಸಿನ ಗುರಿ.

ಪ್ರೇಯಸ್ಸು ಶ್ರೇಯಸ್ಸುಗಳು ಎರಡೂ ಬಂಧಕಗಳೇ. ಲೌಕಿಕ ಬಂಧನ ಬಿಗಿಯುವ ವ್ಯಾಪಾರ ಪ್ರೇಯಸ್ಸಿನದು. ಅಲೌಕಿಕ ಬಂಧನ ಬೆಸೆಯುವ ವ್ಯವಹಾರ ಶ್ರೇಯಸ್ಸಿನದು. ಭೋಗ ಸುಖದ ಬಂಧನಕ್ಕೆ ಯುಕ್ತವಾದುದು ಪ್ರೇಯಸ್ಸಾದರೆ, ಸದಾನಂದ - ಸಂಬಂಧ - ಬಂಧನಕ್ಕೆ ಉಕ್ತವಾದುದು ಶ್ರೇಯಸ್ಸು. ಒಂದರದು ಮೋಹಬಂಧನಕ್ಕೆ ಒತ್ತು. ಇನ್ನೊಂದರದು ನಿರ್ಮೋಹ ಬಂಧನದ ಗತ್ತು.

ಸಂಸಾರದ ಸುಳಿಯಲ್ಲೇ ಉಳಿದುಕೊಳ್ಳುವಂತೆ ನೋಡಿಕೊಳ್ಳುವಂಥದು ಪ್ರೇಯಸ್ಸು. ಪರಮಾತ್ಮನ ಆನಂದಮಯ ಪರಿಸರದಲ್ಲಿ ಸೇರಿಕೊಳ್ಳಲು ಸರಿಹೋಗುವಂಥದು ಶ್ರೇಯಸ್ಸು. ಶ್ರೇಯಸ್ಸಿನಲ್ಲಿ ಆಸಕ್ತಿ ತೋರಿದ್ದಾದರೆ ಪ್ರೇಯಸ್ಸಿನಲ್ಲಿ ವಿರಕ್ತಿ ತನ್ನತಾನೇ ತೂರಿಕೊಳ್ಳುತ್ತದೆ.

ಕರ್ಮಫಲ ವಿನಿಯೋಗದ ನೆಲೆಯಲ್ಲಿ ಪ್ರೇಯಸ್ಸು ಶ್ರೇಯಸ್ಸುಗಳೆಂಬ ವಿಭಾಗಕ್ಕೆ ಬೆಲೆ. ವಿನಿಯೋಗದಲ್ಲಿ ಸ್ವಾರ್ಥಪರತೆ ಇದ್ದಾಗ ಅದು ಪ್ರೇಯಸ್ಸು. ನಿಸ್ವಾರ್ಥಪರತೆ ಎದ್ದಾಗ ಶ್ರೇಯಸ್ಸು. ಪ್ರೇಯೋಭಿಲಾಷಿಗೆ ನಾನು ನನ್ನದು ನನಗಾಗಿ ಎಂಬುದು ಪ್ರಾಮುಖ್ಯ. ತನ್ನಂತೆಯೇ ಪರರು ಎಂಬ ಏಕೀಭಾವ, ಎಲ್ಲರೊಳಗೂ ನೆಲೆಸಿ ಸರ್ವವನ್ನೂ ನಡೆಸಿಕೊಡುವಾತನೊಬ್ಬನೇ ಎನ್ನುವ ಏಕಾತ್ಮಭಾವ ಶ್ರೇಯೋಭಿಲಾಷಿಗೆ ಅತಿಮುಖ್ಯ.

126/A, 1ನೇ ಮಹಡಿ, 1ನೇ ಕ್ರಾಸ್, ಕಾಳಪ್ಪ ಬ್ಲಾಕ್, ಶ್ರೀನಗರ, ಬೆಂಗಳೂರು – 560 050. ದೂ. 26601259



ಕರ್ಮಮಾಡುವವನು ನಾನೆಂಬ ಅಹಂಕಾರ ಅಭಿಮಾನ ಉಳ್ಳವ ಪ್ರೇಯೋಭಿಲಾಷಿ. **ನಾಹಂ ಕರ್ತಾ ಹರಿಃ ಕರ್ತಾ...** ಎನ್ನುವ ವಿನೀತಭಾವ ತಳೆದುಕೊಳ್ಳುವವನು ಶ್ರೇಯೋಭಿಲಾಷಿ. ವ್ಯಷ್ಟಿ ಕೇಂದ್ರಿತ ವಹಿವಾಟು ಪ್ರೇಯೋಭಿಲಾಷಿಯದು. ಸಮಷ್ಟಿ ಕೇಂದ್ರಿತ ನಿಷ್ಠೆ ಶ್ರೇಯೋಭಿಲಾಷಿಗೆ.

ಜ್ಞಾನವನ್ನು ಅವಿದ್ಯೆ ಮತ್ತು ವಿದ್ಯೆ ಎಂದು ವಿಭಾಗಿಸುವ ಕ್ರಮವಿದೆ. ಅವಿದ್ಯೆ ಪ್ರೇಯೋಭಿಮುಖವಾದುದು, ಶ್ರೇಯೋನ್ಮುಖವಾದುದು ವಿದ್ಯೆ. ಅವಿದ್ಯೆ ಲೋಕಜ್ಞಾನ ಬೋಧಕ. ವಿದ್ಯೆ ಆತ್ಮಜ್ಞಾನ ಸಾಧಕ. ಒಂದು ಐಹಿಕ ಸುಖಭೋಗ ಭುಕ್ತಿಯಲ್ಲೇ ಮಗ್ನ. ಇನ್ನೊಂದು ಅವಿಚ್ಛಿನ್ನ ಆನಂದಾನುಭೂತಿಯಲ್ಲಿ ಸಂಲಗ್ನ.

ಇಂದ್ರಿಯಾನುಭವ ಮಾತ್ರ ಸತ್ಯವೆನ್ನುವ ದಾರ್ಷ್ಟ್ಯ ಅವಿದ್ಯೆಯದು. ಇಂದ್ರಿಯಾತೀತವಾದ ಸತ್ಯವೊಂದರ ಅಸ್ತಿತ್ವವನ್ನು ಪರಿಚಯಿಸುವ ದೃಷ್ಟಿ ವಿದ್ಯೆಯದು. ಅವಿದ್ಯೆಯು ಸೃಷ್ಟಿಯ ಶಕ್ತ್ಯಂಶಗಳನ್ನು ಹಾಗೂ ರಹಸ್ಯಗಳನ್ನು ಬಯಲಿಗೆಳೆಯುವ ಸಂಶೋಧಕ. ಪ್ರಕೃತಿಯಲ್ಲಿ ವಿಕೃತಿ ಸಾಧಿಸುವ ಸಾಧಕ. ಮಾನವನಲ್ಲಿ ಸ್ವಾರ್ಥಪರತೆಯನ್ನು ಬಿತ್ತುವ ಕೃಷಿಕ. ಕೊನೆಗೊಮ್ಮೆ ಎಲ್ಲವನ್ನೂ ನಾಶದಂಚಿಗೆ ಸಾಗಹಾಕುವ ನಾವಿಕ ಕೂಡ.

ಅವಿದ್ಯೆ ಅತ್ಯಾಸೆಗಳ ಜನಕ, ಅಹಂಕಾರ ಪ್ರೇರಕ, ಮಮಕಾರ ಪೋಷಕವೂ ಹೌದು. ಅದು ಲೌಕಿಕ ಭೋಗ ಸಾಧಕವಾದರೂ ಸರ್ವಥಾ ತ್ಯಾಜ್ಯವೆನ್ನಲಾಗದು. ಆದರೂ ಅವಿದ್ಯಾಪ್ರಾಪ್ತ ಫಲಾನುಭವಿಸುವಲ್ಲಿ ಎಚ್ಚರ ಇರಬೇಕು. ಕೌಶಲ ತೋರಬೇಕು. ಆಡಂಬರದ ಭೋಗಮಯ ಜೀವನಕ್ಕೊಂದು ಕಡಿವಾಣವಿದ್ದರೆ ಶ್ರೇಯಸ್ಸು ಸಂಪಾದನೆಗೆ ಇದೇ ಸಾಕು.

ಅವಿದ್ಯೆ ವಿದ್ಯೆಗಳೇನೇ ಇರಲಿ, ಕರ್ಮಮಾರ್ಗ ಹಾಗೂ ಕರ್ಮಫಲ ವಿನಿಯೋಗದಲ್ಲಿ ಎಲ್ಲರಲ್ಲೂ ತನ್ನನ್ನು ಕಂಡರಿಯಬೇಕು. ಸಂಚಿತ ಅರ್ಥವು ಹಂಚುವ ಕಾರ್ಯದಲ್ಲಿ ಹರಿಯುತ್ತಿರಬೇಕು. ಕರ್ಮಸಾರ್ಥಕ್ಯದ ಧನ್ಯತಾ ಭಾವ ಬಲಿಯುತ್ತಿರಬೇಕು. ಇಂತಾದರೆ

*With Best Compliments from :*

Ph.: 2365931, 2216327 (O)
2216326, 2247066 (R)

**SHARMA ENTERPRISES**

*Distributors of Karthikeya Papers & Boards Ltd.*

**Kubsad Galli, HUBLI -580 028**

*Dealers in Papers & Boards, Wedding Cards,*
*Mfg. of Students Note Books & Envelopes*

ಶ್ರೇಯೋಮಾರ್ಗಿಯಾಗಿ ಎತ್ತರಕ್ಕೇರುವುದು ವ್ಯಕ್ತಿಗೆ ಶಕ್ಯವಾಗುವುದು.

ಕರ್ಮಕ್ಕೊಂದು ಧರ್ಮ ಇದ್ದೇ ಇರುತ್ತದೆ. ಕರ್ಮವನ್ನದು ನಿಯಮನವೂ ಮಾಡುತ್ತಿರುತ್ತದೆ. ಧರ್ಮ ಸಂಮತವಾಗಿ ಕರ್ಮಮಾಡುತ್ತಿದ್ದರೆ ಅತ್ಯಾಸೆಗೆ ತಾನಾಗಿ ಕಡಿವಾಣ ಮೂಡುತ್ತಿರುತ್ತದೆ. ನಿಷ್ಕಾಮ ಕರ್ಮಾನುಷ್ಠಾನ ಇಷ್ಟವಾಗುತ್ತ ಸಾಗುತ್ತಿರುತ್ತದೆ. ಕರ್ಮಫಲ ವಿನಿಯೋಗದಲ್ಲೂ ನಿಸ್ವಾರ್ಥಪರತೆ ಬೆಳೆದುಕೊಳ್ಳುತ್ತಿರುತ್ತದೆ; ಶ್ರೇಯೋಮಾರ್ಗ ನಿಧಾನವಾಗಿ ತೆರೆದುಕೊಳ್ಳುತ್ತಿರುತ್ತದೆ. ಅನ್ಯರ ದುಡಿಮೆಯ ಗಳಿಕೆಯನ್ನು ತನ್ನ ಉಡಿಗಿಳಿಸುವುದು, ಸಾಕೆನಿಸದ ದುಡ್ಡಿನ ಬಯಕೆಯ ತೀರಿಕೆಗಾಗಿ ಅನ್ಯರ ದಾರಿಗೆ ಅಡ್ಡಿಯಾಗುವುದು, ಗಳಿಕೆಯೆಲ್ಲವೂ ತನ್ನ ಬಳಕೆಗಷ್ಟೇ ಎಂದು ತಿಳಿದುಕೊಳ್ಳುವುದು, ಉಂಡಷ್ಟೂ ಇನ್ನೂ ಉಣಬೇಕೆಂಬ ಹುಚ್ಚು ಹೆಚ್ಚುವುದು. ಸುಖ ಸವಿದು ಅತಿಯಾಗಿ ಹಿಗ್ಗುವುದು, ಅಲ್ಪ ದುಃಖಕ್ಕೂ ಮಿತಿಮೀರಿ ಕುಗ್ಗಿಹೋಗುವುದು - ಇವೆಲ್ಲ ಶ್ರೇಯಸ್ಸು ಕಾಣಲಾಗದ ಪ್ರೇಯೋಕರ್ಮಗಳು.

ಪ್ರೇಯಸ್ಸೇ ಶ್ರೇಯಸ್ಸೆಂಬ ಮೌಢ್ಯ ಮೂಡದಿರಲಿ. ಅತಿಭೋಕ್ತೃತ್ವದ ವ್ಯಕ್ತಿತ್ವ ಬಲಿಯದಿರಲಿ. ಕರ್ಮದಲಿ ಕಾಪಟ್ಯ ನುಸುಳದಿರಲಿ. ವಹಿವಾಟು ಏನಾದರೂ ಇರಲಿ 'ವಿದ್ಯೆ'ಯ ಮಾರಾಟವೊಂದು ಮಾತ್ರ ಬದಿಗಿರಲಿ. ನಿತ್ಯ ಮುಕ್ತನೆಡೆಗೆ ಸದಾ ನೋಟವಿರಲಿ. ಆದರೆ ಅದಕ್ಕಾಗಿ ಕುರುಡು ಓಟದ ಆಟ ಒಂದೂ ನಡೆಯದಿರಲಿ. ಪ್ರೇಯಸ್ಸಿನಲ್ಲಿ ವಿರಕ್ತಿ ಹಾಗೂ ಶ್ರೇಯಸ್ಸಿನಾಸಕ್ತಿ ಸದಾ ವ್ಯಕ್ತಿಗಿರಲಿ. ★


Ph. : 2480248 (5 lines)
Mobile : 9844009894 (Amar)
Tele Fax : 2125099 /2126420
Email : nandaki@vsnl.net

NANDAKI

Investments & Holdings (P) Ltd.
ENGINEERS & DEVELOPERS (P) Ltd.

1st floor, CFC Building Annexe, #14/3,
Nrupathunga Road, Bangalore - 560 001

Contact us for advice on your
Investments (Mutual Funds, RBI Bonds, Infrastructure Bonds etc.)
Insurance (Life Insurance & General Insurance)
Home Loans
Construction of Flats & Houses








ಕರ್ನಾಟಕ ಬ್ಯಾಂಕ್‌ನಲ್ಲಿ, ಗ್ರಾಹಕರತೃಪ್ತಿಗೆ ಮತ್ತು ಗ್ರಾಹಕ ಕೇಂದ್ರಿತ ಬ್ಯಾಂಕಿಗ್‌ಗೆ ನಮ್ಮ ಬದ್ಧತೆಯು ಮತ್ತೊಮ್ಮೆ ನಿರೀಕ್ಷೆ ಮೀರಿದ ಸಾಧನೆಗೆ ಕಾರಣವಾಗಿದೆ. 2003-2004ರ ಆರ್ಥಿಕ ವರ್ಷದಲ್ಲಿ ನಾವು ಎಲ್ಲ ಬ್ಯಾಂಕಿಂಗ್ ಮಾನದಂಡಗಳ ನೆಲೆಯಲ್ಲಿ ಉಜ್ವಲ ಸಾಧನೆಯನ್ನು ದಾಖಲಿಸಿದ್ದೇವೆ. ಈ ಸಾಧನೆಗಾಗಿ ನಾವು ನೆಮ್ಮೆ ಪಡುತ್ತೇವೆ. ಕಾರಣ ಇದು ಇನ್ನೊಮ್ಮೆ ಶೀಘ್ರವಾಗಿ, ಹೆಚ್ಚಿನ ಯಶಸ್ಸಿನೊಂದಿಗೆ ಇನ್ನಷ್ಟು ಉತ್ತಮ ಗ್ರಾಹಕ ಪ್ರಧಾನ ಸಾಧನೆಗೈಯಲು ನೆರವಾಗುತ್ತದೆ.

**ನಮ್ಮ ಗ್ರಾಹಕರು, ಶೇರುದಾರರು ಮತ್ತು ಹಿತೈಷಿಗಳ ಬೆಂಬಲಕ್ಕಾಗಿ ಕೃತಜ್ಞತೆಗಳು**

**16 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 370 ಶಾಖೆಗಳು, 90 ಕೇಂದ್ರಗಳಲ್ಲಿ 224 ಶಾಖೆಗಳು, ಬಹು ಶಾಖಾ ಬ್ಯಾಂಕಿಂಗ್, ಮನಿಪ್ಲಾಂಟ್ ಎಟಿಎಂ ಸೇವೆ, ಶೀಘ್ರ ಹಣ ವರ್ಗಾವಣೆ, ಆಕರ್ಷಕ ಸಾಲ ಯೋಜನೆಗಳು, ಠೇವಣಿ ಮತ್ತು ವಿಮಾ ಯೋಜನೆಗಳು**

ಕರ್ನಾಟಕ ಬ್ಯಾಂಕ್ ಲಿ.

ಪ್ರಧಾನ ಕಚೇರಿ: ಮಂಗಳೂರು – 575 002
ಇಮೇಲ್ : info@ktkbank.com ಇಮೇಲ್ : info@ktkbankltd.com



## ಚಿಂಚೋಳಿ ವೇಂಕಣ್ಣಾಚಾರ್ಯ ವಿರಚಿತ

# ಸಂವತ್ಸರನಾಮಸ್ತೋತ್ರ ಹಾಗೂ ಇತರ ಕೃತಿಗಳು

**ಸಗ್ರಿ ರಾಘವೇಂದ್ರ ಉಪಾಧ್ಯಾಯ**



**ಆ**ಶು ಕವಿಗಳಾಗಿದ್ದ ಚಿಂಚೋಳಿ ವೇಂಕಣ್ಣಾಚಾರ್ಯರಿಂದ ರಚಿತಗಳಾದ ಅನೇಕ ಕೃತಿಗಳಲ್ಲಿ 'ಸಂವತ್ಸರನಾಮಸ್ತೋತ್ರಮ್' - ಎಂಬುದೂ ಒಂದು. ಅನುಷ್ಟುಪ್ ಛಂದಸ್ಸಿನ ಐದು ಶ್ಲೋಕಗಳಲ್ಲಿ 60 ಸಂವತ್ಸರಗಳಲ್ಲಿಯ ಹೆಚ್ಚಿನ ಸಂವತ್ಸರಗಳ ನಾಮಗಳ ಉಲ್ಲೇಖ ಬರುವಂತೆ ಮಾಡಿ, ಅವುಗಳಿಂದ ಭಗವಂತನ ಸ್ತುತಿಯನ್ನು ನಡೆಸಲಾಗಿದೆ.

**ಮನ್ಮಥೋ ನಂದನೋ ಯಸ್ಯ ವಿಕೃತಿರ್ನಾವಿಕಾರಿಣಃ ।**
**ಪ್ರಜೋತ್ಪತ್ತಿಕ್ಷಯೌ ಯೇನ ಯುವಾಽಸೌ ಶ್ರೀಮುಖಾರ್ಚಿತಃ ॥೧॥**

ಮನ್ಮಥನು ಯಾರ ಪುತ್ರನೋ, ಅವಿಕಾರಿಯಾದ ಯಾರಿಗೆ ಯಾವುದೇ ವಿಕಾರವಿಲ್ಲವೋ, ಯಾರಿಂದ ಎಲ್ಲ ಪ್ರಜೆಗಳ ಉತ್ಪತ್ತಿ ಹಾಗೂ ಸಂಹಾರಗಳು ನಡೆಯುವವೋ, ಶ್ರೀ ದೇವಿಯೇ ಮುಂತಾದವರಿಂದ ಆರಾಧಿತನಾಗುವ ಅವನು ನಿತ್ಯ ತರುಣ.

ಈ ಶ್ಲೋಕದಲ್ಲಿ ಮನ್ಮಥ (29) ನಂದನ (26) ವಿಕೃತಿ (24) ವಿಕಾರಿ (33) ಪ್ರಜೋತ್ಪತ್ತಿ (5) ಕ್ಷಯ (60) ಯುವಾ (9) ಶ್ರೀಮುಖ (7) - ಹೀಗೆ ಒಟ್ಟು 8 ಸಂವತ್ಸರಗಳ ನಾಮಗಳ ಉಲ್ಲೇಖ ಬಂದಿದೆ.

**ಸರ್ವಜಿತ್ ಸರ್ವಧಾರೀ ಚ ಪ್ಲವಃ ಪ್ರಭವತಾರಣೇ ।**
**ಜಯೋ ವಿಜಯ ಇತ್ಯೇತೌ ರಾಕ್ಷಸಂ ಭಾವಮಾಗತೌ ॥೨॥**

ಅಂತಹ ಭಗವಂತನು ಎಲ್ಲರನ್ನೂ ಗೆದ್ದವನು, ಎಲ್ಲವನ್ನೂ ಹೊಂದಿರುವವನು. ಸರ್ವಧಾರಕನು. ಸಂಸಾರವನ್ನು ದಾಟುವುದಕ್ಕೆ ದೋಣಿಯಂತೆ ಇರುವವನು. ಜಯ, ವಿಜಯ ಎಂಬ ಅಮುಕ್ತಸ್ಥಾನದ ದ್ವಾರಪಾಲಕರು (ಸನಕಾದಿಗಳ ಶಾಪಕ್ಕನುಗುಣವಾಗಿ) ಯಾರಿಂದಾಗಿ ರಾಕ್ಷಸಯೋನಿಯನ್ನು ಹೊಂದಿರುವರೋ (ಪರಾಭವಂ ಯೇನ ಗತೌ) ಎಂದು ಮುಂದಿನ ಪದ್ಯದಲ್ಲಿರುವ 'ಯೇನ' ಶಬ್ದವನ್ನು ಪರಾಮರ್ಶಿಸಿ ಅನ್ವಯಮಾಡಿಕೊಳ್ಳಬೇಕು.

ಈ ಶ್ಲೋಕದಲ್ಲಿ ಸರ್ವಜಿತ್ (21) ಸರ್ವಧಾರೀ (22) ಪ್ಲವ (35) ಪ್ರಭವ (1) ತಾರಣ (18) ಜಯ (28) ವಿಜಯ (27) ರಾಕ್ಷಸ (49) ಭಾವ (8) - ಹೀಗೆ ಒಟ್ಟು 9 ಸಂವತ್ಸರಗಳ ನಾಮಗಳ ಉಲ್ಲೇಖ ಬಂದಿದೆ.

**ಪರಾಭವಂ ಯೇನ ಗತೌ ಸ ಶುಕ್ಲೋರಷ (?) ವಿಕ್ರಮಃ ।**

ವೇದಾಂತ ಉಪನ್ಯಾಸಕರು, ಸಂಸ್ಕೃತ ಕಾಲೇಜು, ಉಡುಪಿ



ರಾಕ್ಷಸ ಯೋನಿಯನ್ನು ಹೊಂದಿದ ಜಯವಿಜಯರು ಯಾರಿಂದ ಪರಾಜಯವನ್ನು ಹೊಂದಿದರೋ ಅಂತಹ ಪರಮಾತ್ಮನು ಶುದ್ಧವಾದ ಪರಾಕ್ರಮವುಳ್ಳವನು.

ಹೀಗೆ ಈ ಶ್ಲೋಕಾರ್ಧದಲ್ಲಿ ಪರಾಭವ (40) ಶುಕ್ಲ (3) ವಿಕ್ರಮ (14) - ಹೀಗೆ ಒಟ್ಟು 3 ಸಂವತ್ಸರಗಳ ನಾಮಗಳ ಉಲ್ಲೇಖ ಬಂದಿದೆ. ಇಲ್ಲಿ ಶುಕ್ಲ ಮತ್ತು ವಿಕ್ರಮ ಶಬ್ದಗಳ ಮಧ್ಯದ ಶಬ್ದ ಯಾವುದೆಂಬುದನ್ನು ಊಹಿಸಲು ಬರುವುದಿಲ್ಲ.

**ಆಂಗೀರಸಂ ಚಿತ್ರಭಾನುಂ ಶಾರ್ವರೀಶಂ ನಲಂ ತಥಾ ।**
**ಬಹುಧಾನ್ಯಾನ್ ಭಾಸಯತಿ ಪಾರ್ಥಿವಾಂಶ್ಚ ಸ್ವಭಾನುಭಿಃ ॥**

ಬೃಹಸ್ಪತ್ಯಾಚಾರ್ಯರನ್ನು, ಸೂರ್ಯನನ್ನು, ಚಂದ್ರನನ್ನು ಹಾಗೆಯೇ ಅಗ್ನಿಯನ್ನು, ಬಹುಧಾನ್ಯಾದಿ ಸಂಪತ್ತುವುಳ್ಳ ರಾಜರನ್ನೂ ತನ್ನ ಕಿರಣಗಳಿಂದ ಯಾರು ಬೆಳಗುವನೋ (ಸ ಸಾಧಾರಣೋ ನಹಿ - ಅಂತಹವನು ಅಸಾಧಾರಣನಾಗಿರುವನೆಂದು ಮುಂದಿನ ಪದ್ಯದ ಶಬ್ದಗಳಿಂದ ಅನ್ವಯ)

ಹೀಗೆ ಈ ಶ್ಲೋಕದಲ್ಲಿ ಆಂಗೀರಸ (6) ಚಿತ್ರಭಾನು (16) ಶಾರ್ವರಿ (34) ನಲ (50) ಬಹುಧಾನ್ಯ (12) ಪಾರ್ಥಿವ (19) ಸುಭಾನು (17) ಹೀಗೆ ಒಟ್ಟು 6 ಸಂವತ್ಸರಗಳ ನಾಮಗಳ ಉಲ್ಲೇಖ ಬಂದಿದೆ.

**ದುರ್ಮತಿಂ ದುರ್ಮುಖಂ ರೌದ್ರಂ ರಕ್ತಾಕ್ಷಂ ಕ್ರೋಧನಂ ಖರಮ್ ।**
**ರುಧಿರೋದ್ಗಾರಿಣಾಂ ಚಕ್ರೇ ಸೌಮ್ಯಃ ಸಾಧಾರಣೋ ನ ಹಿ ।**
**ವಿಭವಾನಂದದೋ ಭೂಯಾಚ್ಛುಭಕೃದ್ಧಾತುರೀಶ್ವರಃ ॥**

ಕೆಟ್ಟ ಬುದ್ಧಿವುಳ್ಳ, ಭಯಂಕರನಾದ, ಕೆಟ್ಟ ಮುಖವುಳ್ಳ, ಕೆಂಪುಗಣ್ಣಿನ, ಕ್ರೋಧಸ್ವಭಾವದ ಖರ ಎಂಬ ರಾಕ್ಷಸನನ್ನು ರಕ್ತಕಾರುವಂತೆ ಮಾಡಿದನು. ಅಂತಹ ಸೌಮ್ಯ ಸ್ವರೂಪಿ ಪರಮಾತ್ಮನು ಅಸಾಧಾರಣನು. ಇಂತಹ ಧಾರಕನಾದ, ಈಶ್ವರನು ಸಂಪತ್ತನ್ನು ಹಾಗೂ ಆನಂದವನ್ನು ನೀಡುವವನಾಗಲಿ. ಶುಭಕಾರಿ ಆಗಲಿ.

ಹೀಗೆ ಈ ಮೂರು ಸಾಲುಗಳಲ್ಲಿ ಧುರ್ಮತಿ (55) ದುರ್ಮುಖಿ (30) ರೌದ್ರಿ (54) ರಕ್ತಾಕ್ಷಿ (58) ಕ್ರೋಧನ (59) ಖರ (25) ರುಧಿರೋದ್ಗಾರಿ (57) ಸೌಮ್ಯ (43) ಸಾಧಾರಣ (44) ವಿಭವ (2) ಆನಂದ (48) ಶುಭಕೃತ್ (37) ಧಾತು (10) ಈಶ್ವರ (11) ಒಟ್ಟು 14 ಸಂವತ್ಸರಗಳ ನಾಮಗಳ ಉಲ್ಲೇಖ ಬಂದಿದೆ.

ಈ ರೀತಿಯಾಗಿ 41 ಸಂವತ್ಸರ ನಾಮಗಳ ಉಲ್ಲೇಖದೊಂದಿಗೆ ನಡೆಸಿರುವ ಭಗವಂತನ ಸ್ತುತಿಯನ್ನು ಹೀಗೆ ಉಪಸಂಹರಿಸಲಾಗಿದೆ.

**ವೇಂಕಣ್ಣಾಚಾರ್ಯನಾಮ್ನೇದಂ ಚಿಂಚೋಲೀವಂಶಜನ್ಮನಾ ।**
**ಪದ್ಯಜಾತಂ ಕೃತಂ ತೇನ ಪ್ರೀಯತಾಂ ಜಾನಕೀ ಪತಿಃ ॥**

ಚಿಂಚೋಲಿ ವಂಶದಲ್ಲಿ ಜನ್ಮ ಪಡೆದ ವೇಂಕಣ್ಣಾಚಾರ್ಯರಿಂದ ಈ ಪದ್ಯ ಸಮೂಹ ರಚಿತವಾಗಿದ್ದು, ಇದರಿಂದ ಸೀತಾಪತಿ ರಾಮಚಂದ್ರ ಸುಪ್ರೀತನಾಗಲಿ.

## ಗೋವಿನ ಹಿರಿಮೆ

**ಬಾಲಾನಾಂ ಮಾತೃತಃ ಸ್ತನ್ಯಂ ತೃತೀಯೇಽಬ್ದೇ ವಿಯುಜ್ಯತೇ ।**
**ಭುವಃ ಪತನಮಾರಭ್ಯ ಗೋಸ್ತನ್ಯಂ ಮರಣಾವಧಿ ॥**

ಮಕ್ಕಳಿಗೆ ತಾಯಿಯ ಮೊಲೆಹಾಲು ಅವರ ಮೂರು ವರ್ಷ ವಯಸ್ಸಿನವರೆಗೆ ಮಾತ್ರ. ಆದರೆ ಹಸುವಿನ ಹಾಲು ಭೂಮಿಗೆ ಬಿದ್ದಂದಿನಿಂದ ಪ್ರಾರಂಭಿಸಿ ಸಾಯುವವರೆಗೂ ಸ್ವೀಕರಿಸಲ್ಪಡುತ್ತಿರುತ್ತದೆ.

### ಯಾರು ಶ್ಲಾಘ್ಯ? ಯಾರು ಅಶ್ಲಾಘ್ಯ ?

**ಜ್ಞಾನಾರ್ಥಂ ಯಸ್ತು ಜಿಜ್ಞಾಸಾಂ ಪುತ್ರಾರ್ಥಂ ಯಸ್ತು ಮೈಥುನಮ್ ।**
**ಕ್ಷುಧಾನಿವೃತ್ತಯೇ ಭುಕ್ತಿಂ ಧರ್ಮಾರ್ಥಂ ಧನಸಂಚಯಮ್ ।**
**ಕರೋತಿಯಃ ಸ ವೈ ಶ್ಲಾಘ್ಯ ಇಹಲೋಕೇ ಪರತ್ರ ಚ ॥**

ಜ್ಞಾನಾರ್ಜನೆಗಾಗಿ ಜಿಜ್ಞಾಸೆಯನ್ನು ನಡೆಸುವವನು, ಪುತ್ರಸಂಪಾದನೆಗಾಗಿ ಮೈಥುನ ನಡೆಸುವವನು, ಹಸಿವಿನ ನಿವೃತ್ತಿಗಾಗಿ ಭೋಜನ ನಡೆಸುವವನು, ಧರ್ಮಾಚರಣೆಗಾಗಿ ಹಣ ಸಂಗ್ರಹ ನಡೆಸುವವನು, ಈ ಲೋಕದಲ್ಲೂ ಪರಲೋಕದಲ್ಲೂ ಶ್ಲಾಘ್ಯ ಎನಿಸುವನು.

**ಜಯಾಯ ಯಸ್ತು ಜಿಜ್ಞಾಸಾಂ ಯಶ್ಚ ಕಾಮಾಯ ಮೈಥುನಮ್ ।**
**ಜಿಹ್ವಾಚಾಪಲ್ಯತೋ ಭುಕ್ತಿಂ ವ್ಯಾಜಾರ್ಥಂ ಧನಸಂಚಯಮ್ ।**
**ಕರೋತಿಯಃ ಸಜಾಶ್ಲಾಘ್ಯ ಇಹ ಲೋಕೇ ಪರತ್ರ ಚ॥**

ಯಾರು ಜಯ ಸಂಪಾದನೆಗಾಗಿ ಜಿಜ್ಞಾಸೆಯನ್ನು ನಡೆಸುವನೋ, ಕಾಮತೃಷೆಗಾಗಿ ಮೈಥುನದಲ್ಲಿ ತೊಡಗುವನೋ, ನಾಲಗೆ ಚಾಪಲ್ಯಕ್ಕೊಳಪಟ್ಟು ತಿನ್ನುವನೋ, ಹೆಗ್ಗಳಿಕೆಗಾಗಿ ಧನ ಸಂಪಾದನೆ ನಡೆಸುವನೋ ಅವನು ಈ ಲೋಕದಲ್ಲೂ ಪರಲೋಕದಲ್ಲೂ ಅಶ್ಲಾಘ್ಯ ಎನಿಸುವನು. ★


**MODERN INTERIORS & FURNITURE** Ph.: 2523504
Opp. : Sanskrit College, Maruthi Veethika, Udupi - 576 101
*Specialists in :* • Interior Decoration work and Furnishings.
• Steel & Wooden Furniture. • Sofa sets of different designs
• Computer Furniture and chairs of different Designs
• Kurlon & Duroflex Mattress and many more.



# ಪರಮಾತ್ಮನ ನಿಜವಾದ ಪೂಜೆ

**ಯು. ಎಸ್. ಶ್ರೀನಿವಾಸ ರಾವ್**

"ಒಬ್ಬ ಒಳ್ಳೆಯ ವ್ಯಕ್ತಿ ಕಷ್ಟಗಳ ವಿರುದ್ಧ ಸೆಣಸಾಡುವುದೇ ಈ ಪ್ರಪಂಚದಲ್ಲಿ ಬಹುದೊಡ್ಡ ಘಟನೆ ಎಂದು ಓರ್ವ ತತ್ವಜ್ಞಾನಿಯು ಹೇಳುತ್ತಾನೆ. ಆದರೆ ಅದಕ್ಕಿಂತಲೂ ಮಿಗಿಲಾದ ಮಹತ್ವದ ಘಟನೆ ಎಂದರೆ ಆ ಕಷ್ಟಗಳನ್ನು ಪರಿಹರಿಸಲು ಇನ್ನೊಬ್ಬ ಒಳ್ಳೆಯ ವ್ಯಕ್ತಿ ಮುಂದಾಗುವುದು. ಕಷ್ಟದಲ್ಲಿ ಸಿಲುಕಿರುವ ಜನರಿಗೆ, ಪ್ರಾಣಿಗಳಿಗೆ, ಸಸ್ಯಗಳಿಗೆ ಅವರಲ್ಲಿ ಪರಮಾತ್ಮನನ್ನು ಗುರುತಿಸಿಕೊಂಡು ಭಗವತ್ ಸೇವಾದೃಷ್ಟಿ ಜಾಗೃತವಾಗಿಟ್ಟುಕೊಂಡು ಮಾಡುವ ಲೋಕಸೇವೆ ಪರಮಾತ್ಮನ ವಿಶೇಷ ಪೂಜೆಯೆಂದು ಭಕ್ತರಲ್ಲಿ ಅಗ್ರಪಂಕ್ತಿಯಲ್ಲಿರುವ ಪ್ರಹ್ಲಾದರಾಜರು ಉಪದೇಶಿಸಿದ್ದಾರೆ.

ಈ ಬಗ್ಗೆ ಒಂದು ಕಥೆ ಹೀಗಿದೆ - ಒಮ್ಮೆ ಕೆಲ ಸಾಧು ಸಂತರು ಸೇರಿಕೊಂಡು ಕಾಶಿಯಾತ್ರೆಗೆ ಹೊರಟರು. ಕಾಶಿಯಲ್ಲಿ ಪವಿತ್ರ ಗಂಗಾನದಿಯಲ್ಲಿ ಸ್ನಾನಮಾಡಿ ವಿಶ್ವನಾಥನ ದರ್ಶನ ಪಡೆದರು. ತಿರುಗಿ ತಮ್ಮ ಊರಿಗೆ ಬರುವ ಮೊದಲು ರಾಮೇಶ್ವರಕ್ಕೆ ಹೋಗಿ ಅಲ್ಲಿ ರಾಮೇಶ್ವರನಿಗೆ ಗಂಗಾಜಲದಿಂದ ಅಭಿಷೇಕ ಗೈದು ಈಶ್ವರನನ್ನು ಮೆಚ್ಚಿಸಿ ಪುಣ್ಯ ಕಟ್ಟಿಕೊಳ್ಳುವ ಆಶೆಯಿಂದ ಪ್ರತಿಯೊಬ್ಬರೂ ದೊಡ್ಡ ತಂಬಿಗೆಗಳಲ್ಲಿ ಗಂಗಾಜಲವನ್ನು ತುಂಬಿಸಿಕೊಂಡರು. ಹಿಂದಿರುಗುವಾಗ ದಾರಿಯಲ್ಲಿ ರಾಜಸ್ಥಾನದ ಮರುಭೂಮಿಯಲ್ಲಿ ಒಂಟೆಯೊಂದು ಬಾಯಾರಿಕೆಯಿಂದ ನೀರಿಲ್ಲದೆ ಒದ್ದಾಡುತ್ತಿತ್ತು. ಅದರ ಪ್ರಾಣ ಸಂಕಟವನ್ನು ಕಂಡು ಸಾಧು ಸಂತರ ಮನ ಕರಗಿತು. ಆದರೆ ನೀರಿಲ್ಲದ ಆ ಮರುಭೂಮಿಯಲ್ಲಿ ನೀರಿಗಾಗಿ ಕಂಗಾಲಾಗಿದ್ದ ಒಂಟೆಯ ಸಂಕಟವನ್ನು ಹೋಗಲಾಡಿಸಲು ಅವರು ನಿರುಪಾಯರಾಗಿ ಕೈಚಾಚಿ ಸುಮ್ಮನಿದ್ದರೆ ಅವರಲ್ಲೊಬ್ಬ ಒಂಟೆಯ ಪ್ರಾಣ ಸಂಕಟವನ್ನು ಕಂಡು ಬೇರೆ ಏನೂ ಯೋಚಿಸದೆ ತನ್ನ ಕೈಯಲ್ಲಿದ್ದ ಗಂಗಾ ಪಾತ್ರೆಯ ಮುಚ್ಚಳವನ್ನು ತೆಗೆದು ಗಂಗಾಜಲವನ್ನು ಒಂಟೆಯ ಬಾಯಿಗೆ ಹಾಕಿದ. ಇದನ್ನು ನೋಡಿ ಆತನ ಸಂಗಡಿಗರು ಸಖೇದಾಶ್ಚರ್ಯ ಪಟ್ಟರು! ಭಗವಾನ್ ರಾಮೇಶ್ವರನ ಅಭಿಷೇಕಕ್ಕೆಂದು ತಂದ ಪವಿತ್ರ ಗಂಗಾ ಜಲವನ್ನು ಈ ಕ್ಷುದ್ರ ಪ್ರಾಣಿಯ ಬಾಯಿಗೆ ಅರ್ಪಿಸಿ ಹಾಳುಗೈದದ್ದಕ್ಕೆ ಆಕ್ಷೇಪವೆತ್ತಿದರು. ಆಗ ಸಾಧು ತನ್ನ ಸಂಗಡಿಗರಿಗೆ ಹೇಳಿದ್ದು ಹೀಗೆ: "ಒಂಟೆಯ ಬಾಯಿಗೆ ಗಂಗಾಜಲಹಾಕುತ್ತಿದ್ದಂತೆ ಆ ಒಂಟೆಯಲ್ಲಿಯೇ ರಾಮೇಶ್ವರನು ತನ್ನ ಕೈಯಿಂದ ಅಭಿಷೇಕ ಮಾಡಿಸಿಕೊಳ್ಳುತ್ತಿರುವುದನ್ನು ಕಂಡೆ!" ಎಂದು.

ಕಷ್ಟದಲ್ಲಿರುವವರಿಗೆ ಯಾರು ಸ್ವಾರ್ಥ ರಹಿತ ಸಹಾಯ ಹಸ್ತ ನೀಡಿ ಅವರಿಗೆ ಸಂತೋಷವನ್ನುಂಟು ಮಾಡುವರೋ ಅದೇ ಪರಮಾತ್ಮನ ನಿಜವಾದ ಪೂಜೆ. ಆಡಂಬರದ ಪೂಜೆ, ತೋರಿಕೆಯ ಭಕ್ತಿ ಇವುಗಳಿಗೆ ದೇವರು ಎಂದೂ ಮೆಚ್ಚುವುದಿಲ್ಲವೆಂದು, ದರಿದ್ರ ನಾರಾಯಣನ ಸೇವೆಯೇ ಹರಿಗೆ ಅತಿ ಪ್ರೀತಿ ಎಂದು ನಮ್ಮ ಋಷಿ ಮುನಿಗಳು, ಹರಿದಾಸರು, ಶಿವಶರಣರು - ಶರಣೆಯರು ಸಾರಿ ಸಾರಿ ಹೇಳಿದ್ದಾರೆ.

ಪರಮಾತ್ಮನೇ ಈ ಸೃಷ್ಟಿಯ ಒಡೆಯ. ಆತನು ಮಹಾಕರುಣಾಳು, ಮಹಾದಾನಿ. ಇಳೆ, ಬೆಳೆ, ಗಾಳಿ, ಎತ್ತು, ಬಿತ್ತು, ಸುತ್ತಿ ಹರಿಯುವ ನದಿ, ಸಾಗರ, ಪರ್ವತ ಎಲ್ಲವೂ ಆತನಿತ್ತ ದಾನ. ದೇವನ ದಾನವನ್ನುಂಡು ಸಮಾಜ ಸೇವೆ ಮಾಡದಿದ್ದರೆ ನಾವು ಕೃತಘ್ನರಾಗುತ್ತೇವೆ. ಕೃತಘ್ನತೆಗೆ ಪ್ರಾಯಶ್ಚಿತ್ತವಿಲ್ಲ. ಕಾರಣ ಸುಜ್ಞಾನ, ಸದ್ಭಕ್ತಿ, ಕಾಯಕನಿಷ್ಠೆ ಬೆಳೆಸಿಕೊಂಡು ಪರಮಾತ್ಮನ ಪ್ರೀತಿಗೆ ಪಾತ್ರರಾಗಬೇಕು. ಆತನು ನಿರಾಕಾರನಾದರೂ ದೀನದಲಿತರಲ್ಲಿ, ಅಶಕ್ತರಲ್ಲಿ ನಾವು ದೇವರನ್ನು ಕಂಡು ಸಾಕಾರವಾದ ಸಮಾಜ ಸೇವೆ ಮಾಡುವ ಮೂಲಕ ಆ ಸೃಷ್ಟಿಕರ್ತನನ್ನು ಸುಲಭದಲ್ಲಿ ಒಲಿಸಿಕೊಳ್ಳಬಹುದೆಂದು ರಾಮಕೃಷ್ಣ ಪರಮಹಂಸರು ಹೇಳುತ್ತಾರೆ. ಪೂಜೆಯ ಸತ್ವವಿರುವುದು ಪ್ರೇಮ ಮತ್ತು ಸೇವೆಯಲ್ಲಿ. ಪ್ರೇಮದಿಂದ ಸೇವಾ ಮನೋಧರ್ಮ ಉಕ್ಕಿಬರಬೇಕು. ಭಗವಂತನ ಪ್ರೇಮವೇ ಸೇವೆಗೆ ಸ್ಫೂರ್ತಿ ಚಿಲುಮೆ.

ಮೇಲೆ ಹೇಳಿದ ಒಂಟೆಯ ಕಥೆಯಿಂದ ನಮಗೆ ತಿಳಿದು ಬರುವುದೇನೆಂದರೆ ಕಷ್ಟದಲ್ಲಿರುವವರಿಗೆ ಯಾರಾದರೂ ನಿಸ್ವಾರ್ಥ ಸೇವೆ ಸಲ್ಲಿಸಲು ಒಂದು ಹೆಜ್ಜೆ ಮುಂದಿಟ್ಟರೆ ಅವರ ಉದ್ಧಾರಕ್ಕೆ ಪರಮಾತ್ಮ ನೂರು ಹೆಜ್ಜೆಯಿಟ್ಟು ಆತನೆಡೆಗೆ ಬರಲು ಸದಾ ಸಿದ್ಧನಾಗಿರುತ್ತಾನೆಂದು. ಆದ್ದರಿಂದ ಜಂಗಮವೇ ಲಿಂಗವೆಂದರಿತು ಜಂಗಮ (ಸಮಾಜ) ಸೇವೆ ಮಾಡುವುದೇ ಪರಮಾತ್ಮನ ನಿಜವಾದ ಪೂಜೆ ಹಾಗೂ ಮುಕ್ತಿಗೆ ಸುಲಭದ ರಾಜಮಾರ್ಗ.

**938, ಆಶೀರ್ವಾದ, ಬಿ.ಎಸ್.ಕೆ. 3 ನೇ ಹಂತ, 7ನೇ ಬ್ಲಾಕ್, ಕಾಳಿದಾಸ ನಗರ, ಹೊಸಕೆರೆ ಹಳ್ಳಿ, ಬೆಂಗಳೂರು-85**

## ನೀತಿವಾಕ್ಯಗಳು

★ **ಮಿತವರಿತು ನಡೆಯುವವಗೆ ಔಷಧವು ತಾನೇಕೆ?**

★ **ಬಿರಿಯ ಉಂಡವನಿಗೆ ಭಿಕ್ಷೆ ಏತಕೆ?**

★ **ಹೆತ್ತ ತಾಯಿಯನ್ನು ತಿನ್ನುವವಳು ಅತ್ತೆಯನ್ನು ಬಿಟ್ಟಾಳೆ?**

★ **ಹೆತ್ತಯ್ಯನನ್ನು ಹಳಿಯುವವ ಮುತ್ತಯ್ಯನನ್ನು ಬಿಟ್ಟಾನೆ?**

★ **ಎಳ್ಳಷ್ಟು ತಪ್ಪಲು ಯಮನೋರು ನರಕಕ್ಕೆ ಎಳೆದೊಯ್ವರೆಚ್ಚರಿಕೆ.**

★ **ಹುಟ್ಟುವಾಗ ಅಣ್ಣತಮ್ಮಂದಿರು ಬೆಳೆಯುವಾಗ ದಾಯಾದಿರೆನಬೇಡ.**

★ **ಸಂತೆ ಹೊತ್ತಿಗೆ ಮೂರು ಮೊಳ ನೆಯ್ದ ಹಾಗೆ.**

★ **ನೋಟ ನೆಟ್ಟಗಿದ್ದರೆ ಕಾಟ ಹೇಗೆ ಬಂದೀತು?**

★ **ನೆಲ್ಲು ಒಂದು ಕಾಲಕ್ಕೆ ಆದರೆ, ಹುಲ್ಲು ಒಂದು ಕಾಲಕ್ಕೆ.**

★ **ಕಬ್ಬು ಡೊಂಕಾದರೆ ಸಿಹಿಯು ಡೊಂಕೆ?**

**- (ಸಂಗ್ರಹ) ಜಾಹ್ನವಿ ಆಚಾರ್ಯ**

# ಒಂದು ಶ್ರೇಷ್ಠ ತತ್ವ

ಮ. ಗೋ. ಹೆಗಡೆ

**ಪ್ರ**ತಿಯೊಬ್ಬ ಮನುಷ್ಯನೂ, ತಾನು ಶರೀರಧಾರಿಯಾಗಿ ಈ ಪ್ರಪಂಚಕ್ಕೆ ಬಂದ ಮೇಲೆ, ಒಂದು ಗಾಢವಾದ ತತ್ವವನ್ನು ಸದಾಜ್ಞಾಪಕದಲ್ಲಿಡಬೇಕು ಎಂದು ಭಗವಾನ್ ಶ್ರೀಕೃಷ್ಣ ನಮ್ಮನ್ನು ಎಚ್ಚರಿಸುತ್ತಾನೆ.

ಅದು ಪವಿತ್ರ ಬದುಕಿನ ಮೂಲಮಂತ್ರ. "ಸಂಸ್ಪರ್ಶದಿಂದ ದೊರೆಯುವ ಭೋಗ ಸುಖವು ದುಃಖಕ್ಕೆ ಕಾರಣವಾಗುತ್ತದೆ" ಎಂತಹ ಅಗಾಧವಾದ ತತ್ವ! ಪ್ರತಿಯೊಬ್ಬನೂ ಅಳವಡಿಸಿಕೊಳ್ಳಲೇಬೇಕಾದ ನಿಗೂಢ ತತ್ವವಿದು.

ಪ್ರಾಪಂಚಿಕ ಸುಖವನ್ನು ಅನುಭವಿಸುತ್ತ ಹೋದಂತೆ ಅವುಗಳಲ್ಲಿ ಆಸಕ್ತಿ ದಿನೇ ದಿನೇ ವೃದ್ಧಿಸುತ್ತದೆ. ಆದರೆ ಅದು ಕೊನೆಯ (ಸಾವು)ವರೆಗೂ ಸುಖವನ್ನೀಯಲಾರದು ಎಂಬ ಸತ್ಯ ಸಂಗತಿಯನ್ನು ನಾವು ಮರೆತು ಬಿಡುತ್ತೇವೆ.

ಮನುಷ್ಯ ತತ್ವಬಾಹಿರವಾಗುವುದು ಇಲ್ಲಿಯೇ. ಭೌತ ಪ್ರಪಂಚದ 'ಭೋಗಸುಖ'ಗಳನ್ನು ಪಟ್ಟಿಮಾಡುತ್ತ ಹೋದರೆ ಅದೊಂದು ಅರ್ಥರಹಿತ ಪುರಾಣ ವಾದೀತು.

ಕೆಲವು ಸುಖೋಪಭೋಗಗಳನ್ನು ಇಲ್ಲಿ ತತ್ವದರ್ಶನಕ್ಕಾಗಿ ನಿರೂಪಿಸಬಹುದು. ಅಧಿಕಾರ, ಹಣ, ಬಟ್ಟೆ, ವಾಹನ... ಮುಂತಾದವುಗಳು ಇಹಲೋಕದ, ದಾರಿ ತಪ್ಪಿಸುವ ಆಕರ್ಷಣೆಗಳು. ಅವೆಲ್ಲವೂ ಸಂಸ್ಪರ್ಶದಿಂದ ದೊರೆಯುವ ಸುಖಾನುಭವಗಳು.

ಮನುಷ್ಯನಿಗೊಂದು ಅಧಿಕಾರ ದೊರೆತರೆ, ಅವನು ತಾನು 'ಮನುಷ್ಯ'ನೆಂಬ ಮೂಲಭೂತ ವಿಚಾರವನ್ನೇ ಮರೆತು ಬಿಡುತ್ತಾನೆ. 'ಅಧಿಕಾರ' ಎಂದರೇನು? ಎಂಬ ಅರಿವಿಲ್ಲದವನಿಗೆ ಅಧಿಕಾರ ದೊರೆತರೆ ಖಂಡಿತವಾಗಿ ಅವನು ಮನುಷ್ಯತ್ವದಿಂದ ದೂರ ಸರಿದು ಪಶುವೃತ್ತಿಯನ್ನು ಆರಾಧಿಸುತ್ತಾನೆ. ಕುರ್ಚಿಯ ಸಂಸ್ಪರ್ಶದಿಂದ ಅವನು ಮೂರ್ಖತನವೇ ಮೈವೆತ್ತ ಹುಚ್ಚನಾಗುತ್ತಾನೆ.

ಭಗವಾನ್ ಶ್ರೀಕೃಷ್ಣ ಅಧಿಕಾರ ಎಂಬ ಶಬ್ದವನ್ನು ಅತ್ಯಂತ ಅರ್ಥವತ್ತಾದ ಚಾಣಾಕ್ಷ ಮತಿಯಿಂದ ಬಳಸಿ ಮನುಷ್ಯಲೋಕಕ್ಕೊಂದು ಮಹದುಪಕಾರ ಮಾಡಿದ್ದಾನೆ.

**'ಕರ್ಮಣ್ಯೇ ವಾಧಿಕಾರಸ್ತೇ'**

ಕರ್ಮದಲ್ಲಿ ನಿನಗೆ ಅಧಿಕಾರವಿದೆ ಅಂದರೆ ಅಧಿಕಾರ ದೊರೆತಾಗ ಮನುಷ್ಯನು ನಾಲ್ಕು ಜನಕ್ಕೆ ಹಿತವಾಗುವ ಕೆಲಸವನ್ನು ಕೈಗೆತ್ತಿಕೊಂಡು ಅದನ್ನು ಶ್ರದ್ಧೆಯಿಂದ ಮಾಡಿ ಮುಗಿಸಬೇಕು.

ಬಂಕಿಕೊಡ್ಲ – 581 319, ಉತ್ತರಕನ್ನಡ



ಇದು ಪರಮಾತ್ಮನು ಲೋಕಕ್ಕೆ ನೀಡಿದ ಪರಮಾದರ್ಶ.

ಆ ಅಮೃತ ನುಡಿಯಲ್ಲಿ ಶಬ್ದದ ಚಾಣಾಕ್ಷತನದ ಉಪಯೋಗವಾದದ್ದಕ್ಕಿಂತ ನೂರುಪಟ್ಟು ಅದರಲ್ಲಿಯ ತಾತ್ವಿಕ ದರ್ಶನ ಮನನೀಯ.

ಪ್ರಕೃತಿ ತಂದೊಡ್ಡುವ ಸಂಸ್ಪರ್ಶದಲ್ಲಿ ಗುರುತರವಾದ ವಸ್ತುವಿನ ಉದ್ದೀಪನಕ್ಕೆ ಕಾರಣವಾಗುವ ಆಂತರಿಕ ಅಂಶಗಳು ಅನೇಕ ತರವಾಗಿರುತ್ತವೆ.

ತಾತ್ಕಾಲಿಕ ಸುಖದಿಂದ 'ಶಾಶ್ವತ ಆನಂದ'ದೆಡೆಗೆ ಚರಾಚರ ವಸ್ತುಗಳನ್ನು ಪ್ರವಹಿಸುವಂತೆ ಮಾಡುವ ಕಾರ್ಯ ಚಾತುರ್ಯವನ್ನು ಸಂಸ್ಪರ್ಶದಲ್ಲಿ ಪ್ರಕೃತಿ ನಿರ್ದೇಶಿಸಿರುತ್ತದೆ.

'ಸಿಹಿ'ಯಿಂದ ಬದುಕು ಮಧುರವಾಗಬೇಕೇ ವಿನಾ, ಸಿಹಿಮೂತ್ರಕ್ಕೆ (diabetes) ಅದು ಕಾರಣವಾಗಬಾರದು. ಇದು ಪ್ರಕೃತಿ ನಿರ್ದೇಶಿಸುವ ತತ್ವ ನಮ್ಮ ನಾಲಿಗೆಗೆ ಸಿಹಿಯ ಸಂಸ್ಪರ್ಶದಿಂದ ಅದನ್ನು ಮತ್ತೂ ಸವಿಯಬೇಕು, ಇನ್ನೂ ಸವಿಯಬೇಕು ಎಂದುಅನಿಸುತ್ತದೆ. ಇದು ಮುಂದೆ ರಕ್ತದ ಗುಣದಲ್ಲಿ ಅಸ್ತವ್ಯಸ್ತತೆಗಳನ್ನುಂಟು ಮಾಡಿ - ದೈನಿಕ ಚಟುವಟಿಕೆಗಳಿಗೆ ಸಂಚಕಾರ ತರುತ್ತದೆ. 'ಸಿಹಿ' ಮಿತಿಯಲ್ಲಿದ್ದಾಗ ಅದು ಜೀವಿತಾವಧಿಯನ್ನು ಮಧುರಗೊಳಿಸಬಲ್ಲದು. ಅದು ಮಿತಿಯನ್ನು ಮೀರಿದಾಗ -

**ದುಃಖಯೋನಯ ಏವತೇ...** ಖಂಡಿತವಾಗಿ ಅದು ದುಃಖಕ್ಕೆ ಕಾರಣವಾಗುತ್ತದೆ. ಪ್ರಾಯಶಃ ಇದನ್ನನುಸರಿಸಿಯೇ - ಅಧರಕ್ಕೆ ಸಿಹಿ, ಉದರಕ್ಕೆ ಕಹಿ - ಎಂಬ ಗಾದೆ ಮಾತು ಜನಿಸಿರಬೇಕು.

ಹೆಣ್ಣು, ಮಕ್ಕಳನ್ನು ಮಾತ್ರವಲ್ಲ, ಕಷ್ಟಗಳನ್ನು ಹಡೆಯುತ್ತಾಳೆ - ಎಂದು ಪಾಶ್ಚಾತ್ಯ ವಿದ್ವಾಂಸನೊಬ್ಬನು ಅಭಿಪ್ರಾಯಪಡುತ್ತಾನೆ. ಶರೀರದ ಯೌವನಾವಸ್ಥೆಯಲ್ಲಿ ದೇಹದ ಸಂಸ್ಪರ್ಶದಿಂದ ಆಗುವ ಸಂತೋಷ ಶಾಶ್ವತವೇನೋ ಎನ್ನುವಷ್ಟರ ಮಟ್ಟಿಗೆ (ಗಂಡು ಮತ್ತು ಹೆಣ್ಣುಗಳೆರಡೂ) ಮರುಳಾಗುತ್ತವೆ. ಇದೊಂದು ಪ್ರಕೃತಿಯ ಚಾತುರ್ಯ.

ದೇಹ ಸುಖದ ಅತಿಯಾಸೆಯಿಂದ ಗಂಡಾಗಲೀ ಹೆಣ್ಣಾಗಲೀ ಧರ್ಮ ವಿಧಿಸಿದ ಚೌಕಟ್ಟಿನ ಹೊರಗೆ ಹೋದಲ್ಲಿ ಖಂಡಿತವಾಗಿ ದೊರೆಯುವ ಕಾಣಿಕೆಯೆಂದರೆ - 'ಏಡ್ಸ್' (AIDS) ಅದನ್ನೇ ಭಗವಂತ "ಯೇ ಹಿ ಸಂಸ್ಪರ್ಶ ಜಾ ಭೋಗಾ ದುಃಖ ಯೋನಯ ಏವ ತೇ..." ಎಂದು ಕ್ರಿಸ್ತ ಪೂರ್ವ ಐದು ಸಾವಿರ ವರ್ಷಗಳಿಗಿಂತ ಮೊದಲೇ ಎಚ್ಚರಿಕೆ ನೀಡಿದ್ದಾನೆ.

ಸಂತಾನಾಭಿವೃದ್ಧಿಗಾಗಿ - ಗಂಡು - ಹೆಣ್ಣು ಕೂಡುವುದು ಪ್ರಕೃತಿಯ ನಿಯಮ. ಅದನ್ನು ಭಗವಂತನೆಂದಿಗೂ ವಿರೋಧಿಸಲಿಲ್ಲ. ಬದಲಾಗಿ - **ಧರ್ಮಾ ಅವಿರುದ್ಧೋ ಭೂತೇಷು ಕಾಮೋಸ್ಮಿ ಭರತರ್ಷಭ** ಎಂದು ಅದನ್ನು ಭಗವಂತನು ಅನುಮೋದಿಸುತ್ತಾನೆ. ಆದರೂ ಸಹ ಅದಕ್ಕೊಂದು 'ಕಾಲಮಿತಿ' ಇರುವುದನ್ನು ತತ್ವಜ್ಞಾನಿಗಳು ಸೂಚಿಸುತ್ತಾರೆ. ಯಾಕೆಂದರೆ ಸಜೀವಿಗಳಲ್ಲಿ - ಮನುಷ್ಯನೊಬ್ಬನೇ ಋತುಮಾನಗಳನ್ನು ಧಿಕ್ಕರಿಸಿ ಲೈಂಗಿಕ ಸುಖವನ್ನು ಪಡೆಯಲು ಹವಣಿಸುತ್ತಾನೆ. ಶಾಸ್ತ್ರೋಕ್ತವಾಗಿ ಮದುವೆಯಾದ ಹೆಂಡತಿಯನ್ನಾದರೂ ಅಕಾಲದಲ್ಲಿ ಸ್ವೇಚ್ಛಾಚಾರದಿಂದ ಬಳಸುವುದು - ವ್ಯಭಿಚಾರಕ್ಕೆ

ಸಮಾನವೆಂದು ದಾರ್ಶನಿಕರು ಹೇಳುತ್ತಾರೆ.

ಹೀಗೆ ಹೆಣ್ಣನ್ನು ಭೋಗವಸ್ತುವಾಗಿ ನಿಯಮೋಲ್ಲಂಘನೆಯಿಂದ ಉಪಯೋಗಿಸಿದರೆ, ಸಮಾಜದಲ್ಲಿ - 'ವರ್ಣಸಂಕರ'ವಾಗಿ ಸಾಮಾಜಿಕ ಜೀವನ ಅಸ್ತವ್ಯಸ್ತಗೊಳ್ಳುತ್ತದೆ. ಅದರಿಂದ ಸಾಮಾಜಿಕ ಸ್ವಾಸ್ಥ್ಯವೂ ಮಣ್ಣು ಪಾಲಾಗಿ ಪ್ರತಿಯೊಬ್ಬನೂ ಮನೋರೋಗಿಗಳಾಗುತ್ತಾರೆ.

ಇದರಿಂದಲೇ ಉಪನಿಷತ್ ಕಾಲದಿಂದಲೂ ನಮ್ಮ ದೇಶದಲ್ಲಿ 'ಹೆಣ್ಣಿ'ಗೆ ತಾಯಿಯ ಸ್ಥಾನಕೊಟ್ಟು ಗೌರವಿಸುತ್ತ ಬಂದಿದ್ದಾರೆ. ಯಾವುದೇ ಒಂದು ಶುಭಕಾರ್ಯವನ್ನು ಮಾಡುವಾಗ -

'ಮಾತೃದೇವೋ ಭವ।' ಎಂದು ಮೊದಲು ತಾಯಿಗೆ ವಂದಿಸುವ ಸಂಪ್ರದಾಯವಿದೆ. ನಂತರ - ಪಿತೃದೇವೋ ಭವ । ಆಚಾರ್ಯ ದೇವೋ ಭವ... ಇತ್ಯಾದಿ

ಹೆಣ್ಣಿನ ಶರೀರ ಸಂಸ್ಪರ್ಶದಿಂದ - ಒಳಿತಿಗಿಂತ ಕೆಡಕುಗಳೇ ಹೆಚ್ಚಾಗಿರುವುದನ್ನು ಇತಿಹಾಸದ ಪುಟಗಳನ್ನು ಮಡಚಿಹಾಕಿದಾಗ ತಿಳಿದು ಕೊಳ್ಳಬಹುದು **"ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣ ಸಂಕರ"** ಎಂದು ಹೇಳಿದ ಧನಂಜಯನ ಮಾತು - ಭಗವದ್ವಿಚಾರದ ಪ್ರತಿಫಲನವಾಗಿರುತ್ತದೆ.

ಬಂಗಾರದ ಒಡವೆಗಳ ಬಗ್ಗೆ ಇರುವ ಅತೀವ ಆಸಕ್ತಿಯೂ ದುಃಖಕ್ಕೆ ಕಾರಣವಾಗುತ್ತದೆ. ಬಂಗಾರದ ಮಂಗಳ ಸೂತ್ರ, ಬಳೆ, ಉಂಗುರ, ಸರ.. ಮುಂತಾದವುಗಳನ್ನು ಮನುಷ್ಯರೂಪದ ಕಳ್ಳರು ಅಪಹರಿಸಿದಾಗ ಆಗುವ ವೇದನೆ, ದುಃಖ, ಹೆದರಿಕೆಗಳನ್ನು ವರ್ಣಿಸಲು ಸಾಧ್ಯವಿಲ್ಲ. ಅಂತಹ ಸ್ಥಿತಿಗೆ ಒಳಗಾದವರಿಗೇ ಗೊತ್ತು ಅದರ ರುಚಿ. ಅದರಂತೆ ಹಣ, ಬಟ್ಟೆ, ವಾಹನ ಇತ್ಯಾದಿಗಳಿಂದಲೂ ದುಃಖ ಕಟ್ಟಿಟ್ಟ ಬುತ್ತಿ.

ದುಃಖಕ್ಕೆ ಕಾರಣವಾಗುವ ಆ ವಸ್ತುಗಳಲ್ಲಿ ಬುದ್ಧಿವಂತರು (ವಿಚಾರವಂತರು, ಅರಿತವರು) ತಲ್ಲೀನರಾಗುವುದಿಲ್ಲ ಎಂದು ಭಗವಾನ್ ಶ್ರೀಕೃಷ್ಣ ವಿವರಿಸುತ್ತಾನೆ. **ಆದ್ಯಂತ ವಂತು ಕೌಂತೇಯ, ನ ತೇಷು ರಮತೇ ಬುಧ** ಈಗ ಅದು ಅರಿತವರು ಯಾರೆಂದು ನಿರ್ಣಯಿಸಬೇಕಾಗಿದೆ. ಅಂಥವರು ಅಪರೂಪವಾದರೂ ಯುಗಕ್ಕೊಬ್ಬರಾದರೂ ಈ ಧರೆಯ ಮೇಲೆ ಅವತರಿಸುತ್ತಾರೆ.

ಪೂರ್ವಾಶ್ರಮದಲ್ಲಿ ರಾಜಕುಮಾರನಾದ ಸಿದ್ಧಾರ್ಥ ಅದಕ್ಕೊಂದು ಜ್ವಲಂತ ನಿದರ್ಶನ. ಶಾಖ್ಯ ವಂಶದ ಕುಡಿಯನ್ನು ಮುಂದುವರಿಸಬೇಕೆಂಬ ಶುದ್ಧೋಧನನ ಮನದಿಚ್ಛೆ ಕೊನೆಗೂ ನುಚ್ಚು ನೂರಾಯಿತು. ಅರಮನೆಯ ವೈಭವ, ನರ್ತಕಿಯರ ನರ್ತನ, ವಜ್ರ


ಸ್ಥಾಪನೆ : 1977 ದೂರವಾಣಿ: 2521607

**ಜನತಾ ಕೋ - ಆಪರೇಟಿವ್ ಬ್ಯಾಂಕ್ ಲಿ. ಉಡುಪಿ**

★ ಸಂಜೆ ಮತ್ತು ಭಾನುವಾರ ಬ್ಯಾಂಕಿಂಗ್ ಸೇವೆ

★ ಠೇವಣಿಗಳಿಗೆ 1% ಅಧಿಕ ಬಡ್ಡಿ

**ಸ್ನೇಹಮಯ ಸೌಹಾರ್ದ ಸೇವೆಯೇ ಬ್ಯಾಂಕಿನ ಧ್ಯೇಯ**




ವೈಡೂರ್ಯಗಳಿಂದಾವೃತವಾದ ಆಭರಣಗಳು, ಅಪ್ಸರೆಯಂತಿರುವ ಹೆಂಡತಿ, ಅವಳಿಂದಾದ ಸಂತಾನ - ಇತ್ಯಾದಿಗಳೆಲ್ಲವೂ ಸಿದ್ಧಾರ್ಥನ ಮುಂದೆ **"ಸಮಲೋಷ್ಟಾಶ್ಮ ಕಾಂಚನ ..."** ವಾಯಿತು.

**'... ನೃತೇಷು ರಮತೇ ಬುಧ'** ಭಗವಂತನ ವಾಣಿ ಸತ್ಯವಾಯಿತು. ರಾಜಕುಮಾರ ಸಿದ್ಧಾರ್ಥ - ಭಗವಾನ್ ಬುದ್ಧನಾದ. ಅದರಂತೆ ಅರಮನೆಗಿಂತ ಅರಣ್ಯವೇ ವಾಸಿಯೆಂದು ವನಕ್ಕೆ ತೆರಳಿದ ಶ್ರೀರಾಮ, ಅರಮನೆಯ ಸಂಸ್ಪರ್ಶ ಸುಖವನ್ನು ತ್ಯಜಿಸಿ ವಿಶ್ವಕ್ಕೇ ಆದರ್ಶನಾಗಿದ್ದಾನೆ.

ದೇಶಪ್ರೇಮವೇ ಪುರುಷರೂಪದಿಂದ ಅವತರಿಸಿದ ನರೇಂದ್ರನು ಸ್ವಾಮಿ ವಿವೇಕಾನಂದರಾದದ್ದು - ಸಂಸ್ಪರ್ಶ ಸುಖದ ನಿರಾಕರಣೆಯಿಂದಲೇ. ದಿ। ಲಾಲಬಹಾದ್ದೂರ ಶಾಸ್ತ್ರಿಯವರನ್ನು ಇಂದು ನಾವು ದೇವರ ಪೀಠದಲ್ಲಿಟ್ಟು ನಿತ್ಯಪೂಜಿಸಿದರೂ ಅದು 'ವ್ಯಕ್ತಿ ಪೂಜೆ' ಯಾಗಲಾರದು. (Hero worship) ಸಂಸ್ಪರ್ಶದಿಂದ ದೊರೆಯುವ ಸುಖದಲ್ಲಿ ಜಂಜಾಟವೇ ಹೆಚ್ಚಾಗಿ ವ್ಯಕ್ತಿ ಅರಳುವುದಿಲ್ಲ ಎಂಬುದನ್ನು ದಿ। ಶಾಸ್ತ್ರಿಯವರು ಸಾಬೀತು ಪಡಿಸಿದರು. ಸಂಸ್ಪರ್ಶದಿಂದ ಸುಖವನ್ನು ತ್ಯಜಿಸುವವನು ಸತ್ತರೂ ಬದುಕಬಲ್ಲವೆಂಬ ಅಗಾಧ ಪಾಠವನ್ನಿತ್ತವರು ದಿ। ಶಾಸ್ತ್ರಿಯವರು.

ಅದರಂತೆ ಮಹಾತ್ಮ ಗಾಂಧೀಜಿಯವರೂ ತಮ್ಮ ಅಸ್ತಿತ್ವವನ್ನು ಇತಿಹಾಸದಲ್ಲಿ ಚಿರಸ್ಥಾಯಿಗೊಳಿಸಿದ್ದಾರೆ. ವ್ಯಷ್ಟಿ ಪ್ರಜ್ಞೆಯಿಂದ ಓರ್ವ ವ್ಯಕ್ತಿ ಸಂಸ್ಪರ್ಶ ಸುಖದಲ್ಲಿ ಜಂತುವಿನಂತೆ ತೊಳಲಾಡುತ್ತಿರುತ್ತಾನೆ.

**'ತೇನ ಮುಹ್ಯಂತಿ ಜಂತವ'** ಎಂದು ಭಗವಾನ್ ಶ್ರೀಕೃಷ್ಣ ಅಂಥವರ ಕುರಿತು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾನೆ. 'ಸಮಷ್ಟಿ' ಪ್ರಜ್ಞೆಯಲ್ಲಿ 'ವ್ಯಕ್ತಿ'ಯೋರ್ವನು ಸಂಸ್ಪರ್ಶ ಸುಖದಿಂದ ದೂರ ಸರಿದು ತನ್ನಲ್ಲಿಯ 'ದೇವತ್ವ'ದ ಅನುಭವದೆಡೆಗೆ ಸಾಗುತ್ತಾನೆ. ದ್ವಂದ್ವಗಳು ಅವನನ್ನು ವಿಶೇಷವಾಗಿ ಪೀಡಿಸಲಾರವು. ಸುಖ - ದುಃಖ, ಲಾಭ - ಹಾನಿ, ಮಾನ - ಅಪಮಾನ... ಮುಂತಾದ ದ್ವಂದ್ವಗಳಲ್ಲಿ ಶರೀರ ಸಂಸ್ಪರ್ಶವೇ ಅಧಿಕ ಪ್ರಮಾಣದಲ್ಲಿದ್ದರೆ, ಆ ವ್ಯಕ್ತಿಯ ಮಾನಸಿಕ ಆರೋಗ್ಯ ಕ್ಷಣಾರ್ಧದಲ್ಲಿ ಹದಗೆಡುತ್ತದೆ. ಆದುದರಿಂದಲೇ ಶ್ರೀಕೃಷ್ಣ ಪದೇ ಪದೇ ಒತ್ತಿ ಹೇಳುತ್ತಾನೆ.... **"ದುಃಖ ಯೋನಯ ಏವತೇ"** ಶ್ರೀ ಕೃಷ್ಣನ ಈ ಅಮೃತ ತತ್ವ - ವಿಶ್ವದ ಎಲ್ಲಾ ರಾಷ್ಟ್ರಗಳಿಗೂ ಅನ್ವಯಿಸುವ ಸಾರ್ವಕಾಲಿಕ ಸತ್ಯ.

ಗೃಹಸ್ಥರು, ಗೃಹಿಣಿಯರು, ಸಂಘ - ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸದಸ್ಯರು, ಮಂತ್ರಿ - ಮಹೋದಯರು, ಶಿಕ್ಷಕರು, ವೈದ್ಯರು, ಎಂಜಿನೀಯರುಗಳು, ಭಿಕ್ಷುಕರು, ಕುರುಡರು, ಕುಂಟರು, ಲೇಖಕರು ಮುಂತಾದ ವಿವಿಧ ವೃತ್ತಿಯಲ್ಲಿರುವ ವಿಶ್ವದ ಎಲ್ಲಾ ಮಾನವರಿಗೂ ಅನ್ವಯಿಸುವ ಈ ತತ್ವವು, ಜೀವಿತಾವಧಿಯನ್ನು ಅರ್ಥಪೂರ್ಣವಾಗಿ ಉಪಯೋಗಿಸಲು ತುಂಬಾ ನೆರವಾಗುತ್ತದೆ.

"Prevention is better than cure" ಎಂಬ ಆಂಗ್ಲೋಕ್ತಿಯಲ್ಲಿ ಶ್ರೀಕೃಷ್ಣನು ವಿವರಿಸಿದ ತತ್ವವೇ ಅಡಕವಾಗಿದೆ.

ಒಂದು ರೋಗ ಬಂದ ಮೇಲೆ ಅದನ್ನು ಗುಣಪಡಿಸಲು ಚಡಪಡಿಸುವುದಕ್ಕಿಂತ, ಅದು ಬರದಂತೆ ಜಾಗ್ರತರಾಗಿರುವುದು ಅರಿತವರ (ಬುದ್ಧಿವಂತರ) ವಿಶಿಷ್ಟ ಲಕ್ಷಣ ಎಂದು ಆ ಆಂಗ್ಲೋಕ್ತಿ ಪ್ರತಿಫಲಿಸುತ್ತದೆ. ಭಗವಾನ್ ಶ್ರೀಕೃಷ್ಣ ಅದನ್ನೇ ಪ್ರತಿಪಾದಿಸುತ್ತಾನೆ.

ಮಿತಿಮೀರಿದ ಪ್ರಾಪಂಚಿಕ ಸುಖ - ಭೋಗವು ದುಃಖಿತನನ್ನಾಗಿ ಮಾಡುವುದಕ್ಕಿಂತ ಮೊದಲು ನಾವು ಅದರಿಂದ ದೂರ ಸರಿಯಬೇಕು ಎಂಬುದೇ ಭಗವದಿಚ್ಛೆ.

ಅಸ್ತಿತ್ವದ ಅವಧಿಯಲ್ಲಿ ಸ್ಥಿತ್ಯಂತರವಾಗುವುದು ಸ್ವಾಭಾವಿಕ. ಅವು ಸಮಸ್ಯೆಯಾಗಿ ತುರ್ತುಪರಿಸ್ಥಿತಿ (Emergency) ಯ ಮಟ್ಟಕ್ಕೆ ಹೋಗಲು ಬಿಡಬಾರದು. “One must solve the problem before it becomes emergency” ಎಂದು ಪಾಶ್ಚಾತ್ಯ ತತ್ವಜ್ಞಾನಿ ಯೋರ್ವನು ಸೂಚಿಸುತ್ತಾನೆ.

ಭಗವತ್ ತತ್ವದಲ್ಲಿ ಶ್ರದ್ಧೆಯಿಟ್ಟವನು ಖಂಡಿತವಾಗಿ ಆಘಾತಕ್ಕೆ ಒಳಗಾಗಲಾರ. ಅದು ಒಂದು ಸೂಚಕ - ಫಲಕ. ಅದನ್ನು ಅತ್ಯಂತ ಕಾಳಜಿ ವಹಿಸಿ ಅನುಸರಿಸಬೇಕು. ಬಾಹ್ಯ ಪ್ರಪಂಚವು ಅಸ್ಥಿರವಾದರೂ ಭಗವಂತನ ಸೂಚನೆ ಪ್ರಕಾರ ಅದರ ಅಂತರಂಗದ ತತ್ವವನ್ನು ಅರಿತುಕೊಂಡು ಬದುಕಲು ಕಲಿತರೆ, ಅದೇ ಶಾಶ್ವತ ಜಗತ್ತಿನ ಜಗಲಿಯಾಗುತ್ತದೆ. ತಪ್ಪುವುದು ಸಹಜ. ಆದರೆ ಅದನ್ನು ತಿದ್ದಿಕೊಳ್ಳುವುದು ವ್ಯಕ್ತಿಯ ಘನತೆ.

“ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆ” ಎಂಬ ಗಾದೆಯಲ್ಲಿ ಶ್ರೀಕೃಷ್ಣ ಹೇಳಿದ ತತ್ವವೇ ಎದ್ದು ಕಾಣುತ್ತದೆ. ದೈವೇಚ್ಛೆಯನ್ನು ಅರಿತುಕೊಳ್ಳುವಾಗ, ಮನುಷ್ಯನು ಭಗವಂತನಿಂದ ನಿರೂಪಿಸಲ್ಪಟ್ಟ ಸಲಹೆ - ಸೂಚನೆಗಳನ್ನು ಶ್ರದ್ಧಾಪೂರ್ವಕವಾಗಿ ಅನುಸರಿಸಬೇಕು.

ಸಂಸ್ಪರ್ಶದಿಂದ ಬರುವ ಸುಖವನ್ನು ಮನಸಾರೆ ತ್ಯಜಿಸಿದಾಗ ಮಾತ್ರ ಅದರ ಸತ್ಪರಿಣಾಮವು ನಮಗೆ ಅನುಭವಕ್ಕೆ ಬರುತ್ತದೆ. ಮನಸ್ಸಿನಿಂದ ಸಂಪೂರ್ಣವಾಗಿ ಸಂಸ್ಪರ್ಶ ಸುಖವನ್ನು ತೆಗೆದುಹಾಕದಿದ್ದರೆ ಅಂಥವರನ್ನು ಶ್ರೀಕೃಷ್ಣ ಮಿಥ್ಯಾಚಾರಿಗಳೆಂದು ಕರೆಯುತ್ತಾನೆ. ಹಾಗೂ ಅವರು ತಾತ್ವಿಕವಾಗಿ ಈ ಪ್ರಪಂಚದಲ್ಲಿ ನೆಮ್ಮದಿಯಿಂದ ಬದುಕಲಾರರು.

**ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾಸ್ಮರನ್...** ಎಂದು ಹೇಳಿ ಭಗವಂತನು ಅವರನ್ನು ಮಿಥ್ಯಾಚಾರಿಯೆಂಬ ಅರ್ಥವತ್ತಾದ ಶಬ್ದದಿಂದ ವಿವರಿಸುತ್ತಾನೆ.

ಭಗವದ್ ತತ್ವ ಭಾಷಣದಿಂದ ಅಥವಾ ಲೇಖನದಿಂದ ಸ್ಪಷ್ಟವಾಗುವುದಿಲ್ಲ ಆದರೆ ಅದನ್ನು ಆಚರಣೆಯಲ್ಲಿ ತಂದಾಗ ಮಾತ್ರ ಅದರ ಮಹತ್ವ ನಮಗೆ ಅರಿವಾಗುತ್ತದೆ. ಭೋಗದಲ್ಲೇ ಮನಸ್ಸು ಸ್ಥಿರವಾದರೆ ರೋಗ ನಿಶ್ಚಿತ. ಆದರೆ ಯೋಗದಲ್ಲಿ ನೆಲೆಸುವ ಮನಸ್ಸಿಗೆ ಯಶಸ್ಸು ಖಚಿತ. ★


-: ಶುಭಾಶಯಗಳೊಂದಿಗೆ :-

| ಸದಾನಂದ ಶೇಟ್ ಜುವೆಲ್ಲರ್ಸ್ | ನ್ಯೂ ಸದಾನಂದ ಶೇಟ್ ಜುವೆಲ್ಲರ್ಸ್ |
|---|---|
| ಬಡಗುಪೇಟೆ, ಉಡುಪಿ - 576 101. | ಎಸ್.ಎಂ.ಎಸ್.ಪಿ. ಕಾಂಪ್ಲೆಕ್ಸ್, ಉಡುಪಿ. |
| ಫೋನ್: 2522667; 2522668 | ಫೋನ್ : 2522866 |

# ಮಧ್ವವಲ್ಲಭ ಪಾಹಿ ಮಾಮ್

**ಶತಾವಧಾನೀ - ಉಡುಪಿ ರಾಮನಾಥ ಆಚಾರ್ಯ**

**ಮಧ್ವವಲ್ಲಭ ಮಧ್ವಲ್ಲಭ ಮಧ್ವವಲ್ಲಭ ಪಾಹಿ ಮಾಮ್ ।**
**ಮಧ್ವವಲ್ಲಭ ಮಧ್ವವಲ್ಲಭ ಮಧ್ವವಲ್ಲಭ ರಕ್ಷ ಮಾಮ್ ॥೧॥**

ಆಚಾರ್ಯ ಮಧ್ವರು ಶ್ರೀಹರಿಯನ್ನು ಎಂದೆಂದಿಗೂ ತನಗೆ ಅತ್ಯಂತ ಪ್ರಿಯನೆಂದೆ ಧ್ಯಾನಿಸುತ್ತಿರುವರು; ಉಪದೇಶಿಸುತ್ತಿರುವರು ಕೂಡ. ಈ ರೀತಿಯ ಉಪಾಸನೆ, ಅನುಸಂಧಾನ ಪರಶುಕ್ಲತ್ರಯರಿಗೆ ಮಾತ್ರ; ಎಂದಿಗೂ ಯಾವಾಗಲೂ ದೇವರ ಬಗ್ಗೆ ವಿರೋಧ ಪ್ರವೃತ್ತಿ ಇಲ್ಲದವರಿಗೆ ಸೀಮಿತ. “ವಲ್ಲಭಂ ದಯಿತಂ ಪ್ರಿಯಂ” ಎಂದು ಕೋಶ ವಲ್ಲಭಪದವನ್ನು ಪ್ರಿಯ ಎಂದೆ ಅರ್ಥೈಸಿದೆ. ಮಧ್ವಪ್ರಿಯನಾದ ಉಡುಪಿಯ ಕೃಷ್ಣ ನಮ್ಮನ್ನು ಕಾಪಾಡಲಿ, ಸಲಹಲಿ. ಇಂದೂ ಎಂದೆಂದೂ ರಕ್ಷಿಸಲೋಸುಗ ಮತ್ತೆ ಮತ್ತೆ ಬೇಡಿಕೆ.

**ಶ್ರೀಧರಾರ್ಚ್ಚಿತಪಾದಪದ್ಮವಿಭೂಷಿತಪ್ರಿಯ ಪಾಹಿ ಮಾಮ್ ।**
**ಬ್ರಹ್ಮದೇವಪ್ರತಿಷ್ಠಿತಾರಮನಾಭಿಪಂಕಜ ರಕ್ಷ ಮಾಮ್ ॥೨॥**

ಹರಿಯ ಸೊಬಗನ್ನು ಪಾದದಿಂದ ಆರಂಭಿಸಿ ಬಣ್ಣಿಸಬೇಕು. ಲೋಕದ ದೃಷ್ಟಾಂತದಿಂದ ಚೆಲುವಿನ ಮಾನದಂಡ ಒಂದು ಕಮಲ ಮಾತ್ರ. ಪದುಮದಂತೆ ನಸುಗೆಂಪಾದ, ನಯವಾದ, ನಯನಮನೋಹರವಾದ, ಶ್ರೀದೇವಿ ಭೂದೇವಿಯರಿಂದ ಆರಾಧನೆಗೊಂಬ ಪಾದಗಳು ನಮ್ಮನ್ನು ಕಾಪಾಡಲಿ. ಧರಣೀದೇವಿ ನೆಲದಲ್ಲಿಟ್ಟ ಕಾಂತಿತುಂಬಿದ ಶ್ರೀಪಾದವನ್ನು ಪ್ರಿಯವಾಗಿ ಅರ್ಚಿಸಿದ್ದಾಳೆ. ತನ್ನೊಡಲ ಸಂಪತ್ತುಗಳಾದ - ಪತ್ರಪುಷ್ಪದವಸಧಾನ್ಯ ಕೆರೆ ತೊರೆ ಹಣ್ಣು ಹಂಪಲು ಗೆಡ್ಡೆಗೆಣಸುಗಳಿಂದ.

ಹರಿಯ ನಡುಗುಡಿಯಿಂದ ಹೊರನಡೆದು ಬಂದವನು ಬ್ರಹ್ಮದೇವ - ಚತುರ್ಮುಖ. ಆತ ಹರಿಯ ನಾಭಿಕಮಲದಲ್ಲೆ ಪವಡಿಸಿದ; ಆ ತೊಟ್ಟಿಲನ್ನೇ ತನ್ನ ಆಟದ ಅಂಗಳವನ್ನಾಗಿಸಿಕೊಂಡ. ಇದು ಆತನಿಗೆ ನಾರಾಯಣ ನೀಡಿದ ಕೊಡುಗೆ. ಇದರ ಜೊತೆಗೆ ಇಡಿಯ ಬ್ರಹ್ಮಾಂಡವನ್ನೇ ಕಡೆದು ಕೊಟ್ಟಿದ್ದಾನೆ. ಎಲ್ಲೆಡೆಯೂ ವಿಧಿಬರಹವೆ, ವಿಧಿಯ ಮಹತ್ತರವಾದ ಅಸ್ತಿತ್ವವೆ ಇರುವುದು. ಆತನಿರುವಲ್ಲಿ ಹರಿ ಇದ್ದೆ ಇರುತ್ತಾನೆ. ಚತುರ್ಮುಖ ಹರಿಯನ್ನು ಮತ್ತೆ ಬ್ರಹ್ಮಾಂಡದಲ್ಲೆಲ್ಲ - ಎಲ್ಲರೊಳಗೂ ಪ್ರತಿಷ್ಠೆ ಮಾಡುತ್ತಿರುತ್ತಾನೆ. ಹೀಗೆ ಹರಿಯ ಉದರದಲ್ಲಿ ಹೊಕ್ಕುಳಕುಳಿಯಲ್ಲಿ ನೆಲೆನಿಂತ ಸೃಷ್ಟಿಕರ್ತೃ, ಮತ್ತೆ ದೇವನನ್ನು ಜಗದ ಹೊಟ್ಟೆಯೊಳಗೆ ಬಚ್ಚಿಡುವನು. ಹೀಗೆ ನಿರಂತರ ಸೃಷ್ಟಿ - ಲಯಗಳ ಲೀಲೆಯೊಳಗಿರುವ ನಾರಾಯಣನ ಕೆಂಪಾದ ನಾಭಿಮಂಡಲ ನಮ್ಮನ್ನು ರಕ್ಷಿಸಲಿ.

**ಚಂದ್ರಮೌಳಿಸಮಾಶ್ರಿತೇಷ್ಟಹೃದಂಬುಜೋತ್ತಮ ಪಾಹಿ ಮಾಮ್ ।**
**ಮಾರಕಾಂತವಿಲಾಸಿತೇಂದುಮುಖಾರವಿಂದ ಸುರಕ್ಷ ಮಾಮ್ ॥೩॥**

ವಿಧಿಯ ಆಟದಿಂದ ಹರಿ ಅನಿರುದ್ಧನಾಗಿ ಎಲ್ಲೆಡೆ ಒಳಗೆ ಪ್ರವೇಶಗೈದರೆ, ಹರನ ಅನುಗ್ರಹಕ್ಕಾಗಿ ಸಂಕರ್ಷಣನಾಗಿ ಎಲ್ಲರ - ಎಲ್ಲದರ ಆಕರ್ಷಣೆಗೆ ಮನದಂಗಳದಲ್ಲಿ ನೆಲೆ ನಿಂತ. “ಶಿವಸ್ಯ ಹೃದಯಂ ವಿಷ್ಣುಃ ವಿಷ್ಣೋಶ್ಚ ಹೃದಯಂ ಶಿವಃ” ಎಂಬ ಪುರಾಣದ ಮಾತು-ಹರಿಗೆ ಹರನಲ್ಲಿನ ಪ್ರೀತಿಯನ್ನು, ಹರಗೆ ಹರಿಯಲ್ಲಿನ ಭಕ್ತಿಯನ್ನು ಸಾರಿದೆ. ಹರಿಯ ಪಾರಮ್ಯದಲ್ಲಿ ಮನವನ್ನು ಜನಕ್ಕೆ ಹರ ನೀಡಿದರೆ, ಹರಿಯ ಹೃದಯದಲ್ಲಿ ಜನರಿಗೆ ಜಾಗ ಸಿಗಲಿದೆ. ಇಲ್ಲದಿದ್ದಲ್ಲಿ ಇಲ್ಲ! ಹೀಗೆ, ಅನಂತ ಜೀವರಿಗೆ ಆಸರೆ ನೀಡುವ ಆಕಾಶದಂತೆ ಅತಿವಿಶಾಲವಾದ, ನಿರಂತರ ಭಕ್ತರಿಗಾಗಿ ಮತ್ತೆ ಮತ್ತೆ ಅರಳುವ ಬಿಳಿ ತಾವರೆ, ಮುಕ್ತ ದೆಶೆಯನ್ನು ಬಿತ್ತರಿಸಿದೆ. ಇಂತಹ ಹರಿಯ ಹೃದಯ ನಮ್ಮನ್ನು ಹರಸಲಿ.

ನಾರಾಯಣನು ತನ್ನ ತನಯನಲ್ಲಿ ಮನ್ಮಥನಲ್ಲಿ ಪ್ರದ್ಯುಮ್ನ ರೂಪದಿಂದ ನೆಲೆಸಿದ್ದಾನೆ. ಆತನೊ ಅತಿ ಚೆಲುವ. ಆತನಿಗಿಂತ ಅನಂತ ಪಾಲು, ಇನ್ನೆಷ್ಟೋ ಮಿಗಿಲು ನಾರಾಯಣನ ಮೋರೆಯ ಸೊಬಗು. ಅರಳಿನಿಂತ ಕುಸುಮದೆಸಳಿನಂತೆ ಹೊಳೆವ ತುಟಿಯಂಚುಗಳಲ್ಲಿ ಮೂಡಿಬಂದ ಮಂದಹಾಸ ನಮ್ಮ ಇಷ್ಟಗಳನ್ನೆಲ್ಲ ನೀಡುವ ಭರವಸೆಯನ್ನು ಮೂಡಿಸಿದೆ. ಹಾಗಾಗಿ ಅದನ್ನು ‘ಇಂದು’ ಎಂದು ಕರೆಯಲಾಗಿದೆ. “ಇಷ್ಟಂ ದದಾತೀತಿ ಇಂದುಃ” ಇಷ್ಟವನ್ನೀವ ಸ್ವಭಾವ ಆ ಹರಿಯದ್ದು.

ಬ್ರಹ್ಮದೇವ ಮೊದಲು ನಡೆಸಿದ ದೇವರ ಪೂಜೆ, ಮುಂದಿನವರಿಗೆ ಪ್ರಧಾನ ಧರ್ಮ - ಕರ್ಮಗಳಾದವು. ಶಿವ ದಕ್ಷಿಣಾಮೂರ್ತಿಯಾಗಿ ಹರಿಯ ಅರಿವನ್ನು ಯಥಾರ್ಥವಾಗಿ ಹರಿಯತೊಡಗಿಸಿ ಅರ್ಥಪ್ರಪಂಚವನ್ನು ಬೆಳೆಸಿದ. ಬಯಕೆಗಳನ್ನು ಕಾಮದೇವನಲ್ಲಿದ್ದು ಹರಿ ವಿತರಿಸಿದ. ವಾಸುದೇವನಾಗಿ ಮೋಕ್ಷ ಸುಖವನ್ನು ಹತ್ತು ಸಮಸ್ತರಿಗೆ ನೀಡಲು, ಹತ್ತು ದಿಕ್ಕಿನ ಒಡೆಯರಲ್ಲಿದ್ದು ಎಲ್ಲ ಬಗೆಯ ಸಾಧನೆಗಳನ್ನು ಮೂಡಿಸಿ ಸಲಹುವನು.

**ಕಂಜಪಾವಕಧರ್ಮನಿರ್ಋತಿವಾರಿವಾಯುಪ ಪಾಹಿ ಮಾಮ್ ।**
**ತತ್ವಪತ್ರಸಹಸ್ರಯೋಗಿಸಮಸ್ತಪೂರ್ಣ್ಣದ ರಕ್ಷ ಮಾಮ್ ॥೪॥**

ದಿಕ್‌ದಿಗಂತದಲ್ಲಿ ವ್ಯಾಪ್ತವಾದ ಹರಿಯ ಅನಂತ ತೋಳುಗಳು ಅನಂತ ಜೀವರಾಶಿಗಳ ರಕ್ಷಣೆಯಲ್ಲಿ ಎಡೆಬಿಡದೆ ಕಂಗೊಳಿಸಿವೆ. ಒಂದೊಂದು ಅಂಗೈಯೂ ಕೆಂಪೇರಿದ ಕಮಲ ದಂಡೆಯೆ. ಮೇಲೆದ್ದು ಬರುವ ಚಂದ್ರಸೂರ್ಯರೊಡನೆ ಎಲ್ಲ ದಿಗೀಶರನ್ನು ದೇವರು ಕಾಪಾಡುವುದರೊಡನೆ ಸಕಲ ತತ್ವಾಭಿಮಾನಿಗಳನ್ನೂ ಚೆನ್ನಾಗಿ ನಿಯಮಿಸುವನು. ಭಾರದ ಬಿಡುಗಡೆಗೆ ತತ್ವದೇವತೆಗಳೂ ಮುಖ್ಯಸಹಾಯಕರು. ಒಬ್ಬೊಬ್ಬರೂ ಪ್ರಧಾನ ದೇವತೆಯಂತೆ ಮಿನುಗುವ ಮುಗುಳು ಕಮಲದಂತೆಯೆ ಕಡಿಮೆ ಕೆಂಪುಬಣ್ಣದವರು. ನಮ್ಮೊಳಗಿನ ಇವರಿಗೆ ಸಾಧನೆ ನಡೆಸುವಲ್ಲಿ ವರವೀವ ಹರಿ ದಿಕ್ಪಾಲರಿಗೆ ಅಭಯ ನೀಡಿ ಆಶೀರ್ವದಿಸಿ ಎಲ್ಲಬಗೆಯ ಆನಂದವನ್ನು ಕರುಣಿಸುವನು. ನಮ್ಮ ಹಿರಿಯರ ಮಹತ್ತರ ಹಾರೈಕೆಯೂ ನಮ್ಮ ಸಾಧನೆಯ ಹಿಂಗಡೆ ಮಡುಗಟ್ಟಿದೆ. ಇವರೆಲ್ಲರೂ ಹರಿಯನ್ನು ಹಿಂದೆಯೇ ಸಂಧಿಸಿದ ಯೋಗಿವರ್ಯರು. ಅವರೆಲ್ಲರ ಶುಭಹಾರೈಕೆ ನಮ್ಮೆಡೆಗೆ ಸಾಗಿಬರುವಂತೆ ನಮ್ಮನ್ನು ಸಂಧಿಸಿರುವವನೂ ಈ ಹರಿಯೆ. ಹೀಗೆ ಅನಂತ ಕರಗಳಿಂದ ಅಭಯ - ವರಗಳನ್ನಿತ್ತು ನಮ್ಮನ್ನು ಕೃಷ್ಣ ಸದಾಕಾಲ ನೋಡಿಕೊಳ್ಳಲಿ.

**ಮಧ್ವವಲ್ಲಭ ಮಧ್ವವಲ್ಲಭ ಮಧ್ವವಲ್ಲಭ ಪಾಹಿ ಮಾಮ್ ।**
**ಮಧ್ವವಲ್ಲಭ ಮಧ್ವವಲ್ಲಭ ಮಧ್ವವಲ್ಲಭ ರಕ್ಷಮಾಮ್ ॥೫॥**



# ವಿಶ್ವದಲ್ಲಿ ಕಲಿಯ ಪ್ರವೇಶ

**ಕೋಟೇಶ್ವರ ಸೂರ್ಯನಾರಾಯಣ ರಾವ್**

ದ್ವಾಪರ ಯುಗಾಂತ್ಯ. ಸಂದರ್ಭ ಕಲಿಯುಗ ಆರಂಭವಾಗುವ ಮುನ್ನ ಆಗ ತಾನೇ - ವಿಶ್ವದಾದ್ಯಂತದ ಹದಿನೆಂಟು ಅಕ್ಷೋಹಿಣಿ ಪುರುಷ ಸೈನಿಕರ ಮಾರಣ ಹೋಮ ನಡೆದು ಶ್ರೀಕೃಷ್ಣನ ಅವತಾರ ಸಮಾಪ್ತಿ ಮಾಡುವ ಕಾಲ ಸನ್ನಿಹಿತವಾಗಿದೆ. ದುಷ್ಟ ನಿರ್ಮೂಲನ ಶಿಷ್ಟ ರಕ್ಷಣೆಯ ಕಾರ್ಯ ನಡೆದು - ಕೇವಲ ಮಹಿಳೆಯರಿಂದಲೇ ತುಂಬಿದ ಜಗತ್ತಿನಲ್ಲಿ ಧರ್ಮರಾಯನ ರಾಜ್ಯಭಾರ ನಡೆದಿದೆ.

ಧರ್ಮರಾಯ ಹಾಗೂ ತಮ್ಮಂದಿರಿಗೆ ಆಶ್ರಯದಾತನಾದ ಶ್ರೀಕೃಷ್ಣ ಬೇಡನೊಬ್ಬನ ನೆಪಮಾತ್ರದ ಬಾಣಕ್ಕೆ ಆಹುತಿಯಾಗಿ ಇಹಲೋಕ ತ್ಯಜಿಸಿ ಮರಳಿ ವೈಕುಂಠಕ್ಕೆ ನಿರ್ಗಮಿಸಿದ. ಶ್ರೀಕೃಷ್ಣನಿಲ್ಲದ ಪ್ರಪಂಚದಲ್ಲಿ ಬದುಕಲು ಇಷ್ಟಪಡದ ಪಾಂಡು ಪುತ್ರರು - ಅಭಿಮನ್ಯುವಿನ ಪುತ್ರನಾದ ಪರೀಕ್ಷಿತರಾಜನಿಗೆ ಪಟ್ಟಕಟ್ಟಿ ಹಿಮಾಲಯದತ್ತ ನಿರ್ಗಮಿಸಿದ್ದಾರೆ.

ಪರೀಕ್ಷಿತನು ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದ. ವಿಧಿನಿಯಮದಂತೆ ಭೂಲೋಕಕ್ಕೆ ಕಲಿಯ ಪ್ರವೇಶವಾಗಿದೆ. ಒಮ್ಮೆ ಬೇಟೆಗಾಗಿ ವನಕ್ಕೆ ತೆರಳಿದ ಪರೀಕ್ಷಿತರಾಜನಿಗೆ ನೀರಡಿಕೆಯಾದಾಗ ಹತ್ತಿರದಲ್ಲಿರುವ ಶಮೀಕರ ಆಶ್ರಮಕ್ಕೆ ತೆರಳಿ ಧ್ಯಾನಾಸಕ್ತ ಶಮೀಕರನ್ನು ನೀರಿಗಾಗಿ ಕೇಳಿದ. ಪರೀಕ್ಷಿತನಲ್ಲಿ ಆಗ ತಾನೇ ಕಲಿಯ ಪ್ರವೇಶವಾಯಿತು. ಧರ್ಮದ ನಡೆಯಲ್ಲಿ ನಡೆಯುತ್ತಿದ್ದ ಪರೀಕ್ಷಿತ ಕಲಿಯ ಪ್ರೇರಣೆಯಿಂದ ಮಾತನಾಡದ ಋಷಿಯ ಕೊರಳಿಗೆ ಸತ್ತ ಹಾವೊಂದನ್ನು ಮಾಲಾಕಾರದಲ್ಲಿ ಹಾಕಿದ.

ಸ್ವಲ್ಪ ಹೊತ್ತಿನ ನಂತರ ಆಶ್ರಮಕ್ಕೆ ಹಿಂದಿರುಗಿದ ಶಮೀಕ ಪುತ್ರ ಶೃಂಗಿ ತಂದೆಯ ಕೊರಳಿನಲ್ಲಿ ಸತ್ತ ಹಾವೊಂದನ್ನು ಕಂಡಾಗ - ಅಲ್ಲಿ ಶೃಂಗಿ ಶರೀರದಲ್ಲಿಯೂ ಕಲಿಯ ಪ್ರವೇಶವಾಗಿ ಅವನ ಬಾಯಿಯಿಂದ ಪರೀಕ್ಷಿತನ ಸಾವಿಗೆ ಕಾರಣವಾಗುವ ಶಾಪ ಹೊರಹೊಮ್ಮಿತು. 'ಏಳು ದಿನಗಳಲ್ಲಿ ತಕ್ಷಕನೆಂಬ ಸರ್ಪರಾಜನಿಂದ ಪರೀಕ್ಷಿತನಿಗೆ ಮರಣವುಂಟಾಗಲಿ'.

ಅತ್ತ, ಕಲಿಯ ಆವೇಶದಿಂದ ಮುಕ್ತನಾದ ಪರೀಕ್ಷಿತನಲ್ಲಿ ಧರ್ಮಬುದ್ಧಿ ಜಾಗೃತವಾಗಿ ತಾನು ಮಾಡಿದ ಕೃತ್ಯಕ್ಕಾಗಿ ಪಶ್ಚಾತ್ತಾಪ ಪಟ್ಟ. ಆದರೇನು ಶಾಪ ಅವನನ್ನು ಸುತ್ತುವರಿದಿತ್ತು. ಧರ್ಮಾತ್ಮನಾದ ಪರೀಕ್ಷಿತನು ಶಾಪದಿಂದಾಗಿ ತನ್ನ ಮರಣವಾಗುವುದೆಂದು ತಿಳಿದು ಅಧೈರ್ಯ ಪಡಲಿಲ್ಲ. ಆದರೆ ಕಲಿಯಿಂದಾದ ಅನಾಹುತವನ್ನು ನೆನೆದು - ಮಾನವರ ಮನಸ್ಸಿನ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿರುವ ಕಲಿಯನ್ನು ಹದ್ದು ಬಸ್ತಿನಲ್ಲಿಡಲು ಆಲೋಚಿಸಿ ಸ್ವಯಂ ವಾಯುದೇವರ ಸನ್ನಿಧಾನ ಹೊಂದಿರುವ ಪರೀಕ್ಷಿತ ಧನುರ್ಧಾರಿಯಾಗಿ ಕಲಿಯನ್ನು ಬೆನ್ನಟ್ಟಿದ.

ತಪ್ಪಿಸಿಕೊಳ್ಳಲವಕಾಶವಿಲ್ಲದಂತೆ ಬೆನ್ನಟ್ಟಿದ ಪರೀಕ್ಷಿತನಿಗೆ ಶರಣು ಬಂದ. ವಿಧಿನಿಯಮದಂತೆ ತನಗೆ ಕರ್ಮದ ಅಧಿಕಾರ ನೀಡಲ್ಪಟ್ಟಿರುವುದರಿಂದ ತನಗೆ ಸೂಕ್ತ ವಾಸದ ವೇದಿಕೆಯನ್ನು ನೀಡಲು ಕೋರಿದ. ಧರ್ಮಸೂಕ್ಷ್ಮ ಅರಿತಿರುವ ಪರೀಕ್ಷಿತ, ಕಲಿಯು ಸ್ಥಿತಗೊಳ್ಳಲು ನಾಲ್ಕು

'ಮಹಾಲಕ್ಷ್ಮೀ ಕೃಪಾ', 25/1, ಡಿ. ವಿ. ಜಿ. ಅಡ್ಡ ರಸ್ತೆ, ಬಸವನಗುಡಿ, ಬೆಂಗಳೂರು – 560 004



ಸ್ಥಳಗಳನ್ನು ನಿರ್ದೇಶಿಸಿದ. ತಾನು ನಿರ್ದೇಶಿಸಿದ ಸ್ಥಳದ ಹೊರತಾಗಿ ಮಾನವ ಮಾತ್ರರಿಗೆ ತೊಂದರೆ ಕೊಡುವುದಾಗಲಿ, ವೇದನೆ ನೀಡುವುದಾಗಲಿ ಸಲ್ಲದು ಎಂಬ ಆಜ್ಞೆಯಿಂದಾಗಿ ಪ್ರಪಂಚವಿಂದು ನೆಮ್ಮದಿಯಿಂದ ಉಸಿರಾಡುವಂತಾದುದು ಪರೀಕ್ಷಿತರಾಜನ ಕೃಪೆ.

**ಪ್ರಥಮವಾಗಿ :** ಪರೀಕ್ಷಿತ ನಿರ್ದೇಶಿಸಿದ ನೆಲೆ-ವಿವಿಧ ರೀತಿಯ ಜೂಜುಗಳು, ಜೂಜು ಕೇಂದ್ರ, ಇಸ್ಪೀಟು - ಲಾಟರಿ, ಹಣವನ್ನು ಪಣರೂಪದಲ್ಲಿಟ್ಟು ಆಡಲ್ಪಡುವ ಎಲ್ಲಾ ವಿಧದ ಜೂಜುಗಳು, ಜೂಜಾಟದ ಅಡ್ಡೆಗಳು - ಕುದುರೆ ಜೂಜು. ಇತ್ಯಾದಿ ಬೃಹತ್ ಮೊತ್ತ ಪಣದಿಂದ ಆಡುವ ಜೂಜುಗಳಾಗಲಿ -ಸಣ್ಣ ಮೊತ್ತವೇ ಆಗಲಿ - ಅಲ್ಲಿ ಕಲಿಯು ಪ್ರವೇಶಿಸಿ ಅದರಲ್ಲಿ ಪಾಲ್ಗೊಳ್ಳುವವರ ಸರ್ವನಾಶ ಮಾಡುತ್ತಾನೆ. ಜೂಜುಗಳದ್ದೇ ಆರಂಭದ ಸಂದರ್ಭದಲ್ಲಿ ಲಾಭದ ನಶೆಯನ್ನು ಮಾನವನಿಗೆ ಏರಿಸಿ, ಕೊನೆಯಲ್ಲಿ ಪ್ರಪಾತಕ್ಕೆ ತಳ್ಳುವುದು ಕಲಿಯ ಕಾರ್ಯವಾಹಿನಿ.

**ದ್ವಿತೀಯ ನೆಲೆಯಾಗಿ :** ಪರೀಕ್ಷಿತನ ನಿರ್ದೇಶನವೆಂದರೆ - ಸುರಾಪಾನ ನಡೆಯುವ ಸ್ಥಳ - ಇಂದಿನ ದಿನಗಳಲ್ಲಿ ಚಲಾವಣೆಯಲ್ಲಿರುವಂತೆ - ಹೆಂಡ, ಸಾರಾಯಿ, ರಮ್, ಬೀರು ಮತ್ತು ಬರಿಸುವ ವಸ್ತುಗಳು, ಒಮ್ಮೆ ಕುಡಿತದಲ್ಲಿ ತೊಡಗಿಕೊಂಡ ಮಾನವ ಅದರ ಕದಂಬಬಾಹುವಿನಿಂದ ತಪ್ಪಿಸಿಕೊಳ್ಳಲಾರ. ಗಾಂಜಾ, ಹೆರಾಯಿನ್ ಇತ್ಯಾದಿ ಮತ್ತು ಬರಿಸುವ ವಸ್ತುಗಳು. ಕಲಿಯು ಕುಳಿತು ಆವೇಶಗೊಳ್ಳುವಂಥಾದ್ದು.

**ತೃತೀಯವಾಗಿ :** ಅನೀತಿವಂತ ವೇಶ್ಯೆಯರ ಸಹವಾಸ, ಕುಲಟೆ ಸ್ತ್ರೀಯರು ಇಂದಿನ ದಿನಗಳನ್ನು ಉದಾಹರಿಸುವುದಾದರೆ ಏಡ್ಸ್ ಅಂತಹ ಮಹಾಮಾರಿಯನ್ನು ಕರುಣಿಸುವ ಕೆಂಪುದೀಪದ ವಲಯಗಳು, ಪರಸ್ತ್ರೀ - ಪರಸತಿಯರ ಸಹವಾಸ ಇತ್ಯಾದಿಯಲ್ಲಿ ಕಲಿಯು ಸ್ಥಿತನಾಗಿ ತನ್ನ ಯುಗದಲ್ಲಿ ವಿಜೃಂಭಿಸುತ್ತಾನೆ. ಅವನ ಕೃಪೆಗೆ ಪಾತ್ರರಾದ ಮಾನವ ಮಾತ್ರರು ಅಧಪಾತಾಳ ತಲುಪುತ್ತಾರೆ.

**ನಾಲ್ಕನೆಯದಾಗಿ :** ಪರೀಕ್ಷಿತ ನಿರ್ದೇಶಿಸಿದ ಸ್ಥಾನವೆಂದರೆ - 'ಹಿಂಸೆ'. ಹಿಂಸಾ ಪ್ರಕೃತಿಯನ್ನು ಮೈಗೂಡಿಸಿಕೊಂಡ ದುಷ್ಕರ್ಮಿ, ರೌಡಿ, ಸಮಾಜ ಕಂಟಕರು, ಧನಕ್ಕಾಗಿ ಕೊಲೆ, ಪೈಶಾಚಿಕ ಹಿಂಸೆ, ಸಮೂಹ ಗಲಭೆ, ರಕ್ತಪಾತ ಇತ್ಯಾದಿ ನಡೆಯುವ ಸ್ಥಳದಲ್ಲಿ ಕಲಿಯು ಅಟ್ಟಹಾಸದಿಂದ ವಿಜೃಂಭಿಸುತ್ತಾನೆ. ಅವನ ಕೃಪೆಗೆ ಪಾತ್ರರಾದ ಮಾನವರು. ಹಿಂಸೆಯಲ್ಲಿಯೇ ಆನಂದವನ್ನು ಕಾಣುತ್ತಾರೆ. ಇವುಗಳ ಮೂಲಕ ಜಗತ್ತಿನಲ್ಲಿ ಪಾತಕಕರ್ಮಗಳು ಹೆಚ್ಚುತ್ತವೆ.

ನಾಲ್ಕು ಸೂಕ್ತವಾದ ಸ್ಥಾನವನ್ನು ಕಲಿಗೆ ಪ್ರವೇಶಿಸುವ ಅವಕಾಶ ನೀಡಿದರೂ ತೃಪ್ತನಾಗದ ಕಲಿಗಾಗಿ ಪರೀಕ್ಷಿತ ನೀಡಿದ **ಐದನೆಯ ವಸ್ತುವೇ ಬಂಗಾರ.**

ಬಂಗಾರದಲ್ಲಿ ಲಕ್ಷ್ಮಿ ಸಾನ್ನಿಧ್ಯವಿರುವುದಾದರೂ ಬಂಗಾರವನ್ನು ಪಡೆಯಲು ಮಾನವನು ಮನುಷ್ಯತ್ವವನ್ನು ಕಳೆದುಕೊಂಡು - ದುರಾಚಾರ, ಹಿಂಸಾಚಾರ, ಭ್ರಷ್ಟಾಚಾರ, ವ್ಯಭಿಚಾರದ ದಾಸನಾಗಿ ಬಂಗಾರಕ್ಕಾಗಿ ಮಾಡಬಾರದ ಅನಾಚಾರವನ್ನು ಮಾಡುತ್ತಾ ಸತ್ಯ, ದಯೆ, ಕಾರುಣ್ಯ ರಹಿತನಾಗಿ ತೃಪ್ತಿ ರಹಿತ ಜೀವನವನ್ನು ತನ್ನದಾಗಿಸಿಕೊಂಡು ತನ್ನ ದೇಹ, ಮನಸ್ಸು, ನಡೆ - ನುಡಿ ಎಲ್ಲವನ್ನೂ ಕಲಿಗೆ ಒಪ್ಪಿಸಿ, ದಾರುಣವಾದ ಜೀವನವನ್ನು ನಿರ್ವಹಿಸುತ್ತಾನೆ.

ಶ್ರೀ ಮದ್ಭಾಗವತ ಮಹಾಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟ - 'ಕಲಿ' ಆವಾಸ ಸ್ಥಾನಗಳ ಚಿಂತನೆಯನ್ನು ಮನಸ್ಸಿನಲ್ಲಿಟ್ಟು ಸಾತ್ವಿಕ ಜೀವನವನ್ನು ತನ್ನದಾಗಿಸಿಕೊಂಡವನಿಗೆ ಭಗವಂತನ ಕೃಪೆ ನಿಶ್ಚಿತ. ★



# ಈಶಾವಾಸ್ಯೋಪನಿಷತ್

( ಆಚಾರ್ಯ ಮಧ್ವರ ಭಾಷ್ಯಾನುಸಾರಿಯಾಗಿ)

ಲೇಖಾಂಕ ೬

ಬಿಂದು ಮಾಧವಾಚಾರ್ಯ ನಾಗಸಂಪಿಗೆ, ಬಾಗಲಕೋಟೆ

## ಪೂರ್ವಚಿಂತನೆ :

ಭಗವದ್‌ವಿಮುಖತೆಯ ಅಪಾಯವನ್ನು ಅರಿತಾಗ ಭಗವಂತನ ವಿಭೂತಿಯ ಬಗ್ಗೆ ಆದರ ಮೂಡುವುದು ಸಹಜ. ಅದರ ವಿವರಣೆಗಾಗಿ ಈ ಮಂತ್ರ.

## ಮಂತ್ರ – 4

**ಅನೇಜದೇಕಂ ಮನಸೋ ಜವೀಯೋ ನೈನದ್ ದೇವಾ ಆಪ್ನುವನ್ ಪೂರ್ವಮರ್ಷತ್ ।**

**ತದ್‌ಧಾವತೋಽನ್ಯಾನತ್ಯೇತಿ ತಿಷ್ಠತ್ ತಸ್ಮಿನ್ನಪೋ ಮಾತರಿಶ್ವಾದಧಾತಿ ॥ ೪ ॥**

## ಅನ್ವಯಾರ್ಥ

ತತ್ = ಆ ಪರತತ್ವವು ಅನೇಜತ್ = ಭಯರಹಿತವಾದುದು. ಏಕಮ್ = ಸರ್ವಪ್ರಧಾನವಾದುದು. ಮನಸಃ = ಮನಸ್ಸಿಗಿಂತಲೂ. ಜವೀಯಃ = ಹೆಚ್ಚು ವೇಗವುಳ್ಳದ್ದು. ಏನತ್ = ಈ ಪರತತ್ವವನ್ನು. ದೇವಾಃ = ದೇವತೆಗಳೂ ಕೂಡಾ. ನ ಆಪ್ನುವನ್ = ಪೂರ್ಣವಾಗಿ ತಿಳಿದಿಲ್ಲ. ಪೂರ್ವಮ್ = ಅದು ಎಲ್ಲಕ್ಕಿಂತಲೂ ಮೊದಲು ಇರುವಂಥದು. ಅರ್ಷತ್ = ಎಲ್ಲವನ್ನೂ ತಿಳಿದಿದೆ. ತತ್ = ಆ ಪರತತ್ವವು. ಧಾವತಃ = ಮುಂದೋಡುತ್ತಿರುವಂತಹ. ಅನ್ಯಾನ್= ಇತರರನ್ನು ತಿಷ್ಠತ್ = ಇದ್ದಲ್ಲಿಯೇ ಇದ್ದು ಅತ್ಯೇತಿ = ಅತಿಕ್ರಮಿಸುತ್ತದೆ. ತಸ್ಮಿನ್ = ಅಂತಹ ಪರತತ್ವದಲ್ಲಿ. ಮಾತರಿಶ್ವಾ = ಮುಖ್ಯಪ್ರಾಣನು. ಅಪಃ = ಜೀವರು ಎಸಗುವ ಕರ್ಮಗಳನ್ನು. ದಧಾತಿ = ಒಪ್ಪಿಸುತ್ತಾನೆ.

## ಅನುವಾದ :

ಪರಮಾತ್ಮನು ಭಯರಹಿತನು. ಪ್ರಧಾನನು. ಮನಸ್ಸಿಗಿಂತಲೂ ಬಹುವೇಗವುಳ್ಳವನು. ದೇವತೆಗಳೂ ಕೂಡ ಆತನನ್ನು ಪೂರ್ಣವಾಗಿ ತಿಳಿದುಕೊಳ್ಳಲು ಸಮರ್ಥರಲ್ಲ.

ಅವನು ಸ್ವಭಾವತಃ ಅನಾದಿಕಾಲದಿಂದಲೂ ಎಲ್ಲವನ್ನೂ ಬಲ್ಲವನು. ಇದ್ದಲ್ಲಿಯೇ ಇದ್ದುಕೊಂಡೇ ಓಡುತ್ತಿರುವ ಎಲ್ಲವನ್ನೂ ದಾಟಿ ಇರುವನು. ವಾಯುದೇವರು, ಭಗವಂತ ಹಾಗೂ ಜಗತ್ತು ಇವೆರಡರ ಮಾಧ್ಯಮವಾಗಿ ಜೀವರು ಮಾಡುವ ಕರ್ಮಗಳನ್ನು ಭಗವಂತನಿಗೆ

ಶ್ರೀರಾಘವೇಂದ್ರ ಸ್ವಾಮಿಗಳ ಮಠ, 50ನೇ ಸೆಕ್ಟರ್, ಪ್ಲಾಟ್ ನಂ.81, ನವನಗರ, ಬಾಗಲಕೋಟೆ. ✆: 08354-237234



ಪೂಜಾರೂಪವಾಗಿ ಸಮರ್ಪಿಸುತ್ತಾರೆ.

## ವಿವರಣೆ :

ಈ ಮಂತ್ರವು ಭಗವಂತನನ್ನು 'ಅನೇಜತ್' ಎಂದು ಕರೆದಿದೆ. ಅನೇಜತ್ ಎಂದರೆ ಭಯರಹಿತ, ಕಂಪನ ಇಲ್ಲದವ - "ಅನೇಜತ್ ಭಯಕಂಪರಹಿತಮ್" - ಎಂದು ಅರ್ಥ. ಭಗವಂತ ಎಲ್ಲಕ್ಕಿಂತ ಹಿರಿಯ ತತ್ವವಾದ್ದರಿಂದ ಇನ್ನೊಬ್ಬರಿಗೆ ಹೆದರುವ ಪ್ರಸಂಗವೇ ಇಲ್ಲ. ಏಕೆಂದರೆ ಅವನಿಗೆ ಸಾಟಿಯಾದ ತತ್ವ ಇನ್ನೊಂದಿಲ್ಲ. ಆ ಭಗವಂತನನ್ನು ನಂಬಿದವರೂ ಕೂಡ ಸಂಸಾರ ಭಯದಿಂದ ಪಾರಾಗುವಾಗ ಅವನು ಯಾರಿಗೆ ಭಯಪಡಬೇಕು? ಯಾರಿಗೆ ನಡುಗಬೇಕು? ಅದಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಅವನು ಅನೇಜತ್. ಇಂತಹ ಭಗವಂತನನ್ನು ಅರಿಯುವದಾದರೂ ಹೇಗೆ? ಎಂಬ ಪ್ರಶ್ನೆ ಬಂದರೆ ಅದಕ್ಕೆ ಸಮಾಧಾನ ಹೀಗಿದೆ.

ನಮ್ಮ ಮನಸ್ಸು ಆ ಪರತತ್ವವನ್ನು ಅರಿಯುವಷ್ಟು ಸಮರ್ಥವಾಗಿಲ್ಲ. ಎಲ್ಲಕ್ಕಿಂತಲೂ ವೇಗವಾದುದು ಮನಸ್ಸು. ಆದರೆ ಆ ಭಗವಂತನು ಮನಸ್ಸಿನ ವೇಗವನ್ನು ಮೀರಿ ಅದಕ್ಕಿಂತಲೂ ದೂರದಲ್ಲಿದ್ದಾನೆ. 'ಮನಸೋಽಪಿ ಜವೀಯಃ' - ಮನಸ್ಸು ಮೊದಲಾದ ಇಂದ್ರಾದಿದೇವತೆಗಳೂ ಅವನನ್ನು ಸಮೀಪಿಸಲು ಸಮರ್ಥರಲ್ಲ. ಅವನು ಅವರಿಗೂ ದೂರನಾಗಿದ್ದಾನೆ. ಏಕೆಂದರೆ ಅಗಮ್ಯನಾದ್ದರಿಂದ. ಸಮ್ಯಗ್‌ಜ್ಞಾತುಮಶಕ್ಯತ್ವಾತ್ ಅಗಮ್ಯಂ ತತ್ಸುರೈರಪಿ. ಈ ಪರತತ್ವವನ್ನು ಅಳೆಯುವುದು. ಯಾರ ಆಳವೂ ಅಲ್ಲ. ಏಕೆಂದರೆ ಎಲ್ಲೂ ಯಾರೂ ಇಲ್ಲದಿದ್ದಾಗಲೂ ಈ ಜಗವೆಲ್ಲ ಸೃಷ್ಟಿಯಾಗುವ ಮುನ್ನ ಅವನು ಇದ್ದಾನೆ. ಅವನು ಎಲ್ಲದರ ಆದಿಕಾರಣ. ಅವನನ್ನು ಯಾರೂ ಪೂರ್ಣವಾಗಿ ತಿಳಿದಿಲ್ಲ. ಆದರೆ ಅವನು ಎಲ್ಲವನ್ನೂ ಎಲ್ಲಾ ಕಾಲದಲ್ಲೂ ತಿಳಿದಿದ್ದಾನೆ. ಏಕೆಂದರೆ ಅವನು ಜ್ಞಾನಮೂರ್ತಿ. ಸತ್ಯಂ ಜ್ಞಾನಮನಂತಂ ಬ್ರಹ್ಮನಾದ್ದರಿಂದ ಬ್ರಹ್ಮಾಂಡದ ಒಳಗೂ ಹೊರಗೂ ತುಂಬಿರುವ ಅವನು ಇದ್ದಲ್ಲೇ ಇದ್ದು ನಿರಂತರವಾಗಿ ಓಡುತ್ತಿರುವ ಈ ಜಗತ್ತನ್ನು ದಾಟಿ ಮುಂದೆ ನಿಂತಿರುವುದರಿಂದ ವಿಶ್ವವ್ಯಾಪಿಯೆನಿಸಿದ್ದಾನೆ. "ಅತ್ಯತಿಷ್ಠತ್ ದಶಾಂಗುಲಮ್" ನಾವು ಎಷ್ಟು ದೂರ ಧಾವಿಸಿದರೂ ಅದರಾಚೆಗೆ ಅವನಿದ್ದಾನೆ. ಸರ್ವಗತನಾದ್ದರಿಂದ. ನಾವು ಎಷ್ಟು ಸಾಧನೆ ಮಾಡಿ ಎಷ್ಟೇ ಎತ್ತರಕ್ಕೆ ಏರಿದರೂ ಅವನು ಇದ್ದಲ್ಲೇ ಇದ್ದು ನಮಗಿಂತ ಎತ್ತರದಲ್ಲಿದ್ದಾನೆ. ಅವನ ಮಹಿಮೆ ಹಾಗೂ ಶಕ್ತಿ ಅಚಿಂತ್ಯವಾದುದು. ನಮ್ಮ ಬುದ್ಧಿ ಹಾಗೂ ಕಲ್ಪನೆಗೆ ಮೀರಿದುದು. ಹೀಗಿದ್ದೂ ಅವನು ಸಮೀಪದಲ್ಲೇ ಇದ್ದಾನೆ. ಏಕೆಂದರೆ ಸರ್ವಾಂತರ್ಯಾಮಿಯಾದ್ದರಿಂದ ಎಲ್ಲರ ಒಳಗೆ ಇದ್ದು ನಿಯಮಿಸುವವನೂ ಅವನೇ. 'ಅಚಿಂತ್ಯಶಕ್ತಿತಶ್ಚೈವ ಸರ್ವಗತತ್ವಾಚ್ಚ ತತ್ಪರಮ್'

ಅಂತೂ ಇಂತಹ ಭಗವಂತನನ್ನು ಅರಿಯುವುದು ಅಥವಾ ಸಮೀಪಿಸುವುದು ಹೇಗೆಂದರೆ ಜೀವನಿಗೆ ಮತ್ತು ಭಗವಂತನಿಗೆ ಸಂಯೋಜಕನಾಗಿ ನಡುವೆ ಪ್ರಾಣದೇವನಿದ್ದಾನೆ. ಈ ಮುಖ್ಯಪ್ರಾಣನ ಅನುಗ್ರಹದಿಂದಲೇ ನಾವು ಅವನನ್ನು ಯಥಾಶಕ್ತಿ ತಿಳಿಯುವುದು ಸಮೀಪಿಸುವುದು ಸಾಧ್ಯ. ಏಕೆಂದರೆ ಈ ಪ್ರಾಣತತ್ವ ಎಲ್ಲ ಕರ್ಮಗಳ ನಿಯಾಮಕ ತತ್ವ.

ನಮ್ಮಿಂದ ಎಲ್ಲ ಕರ್ಮಗಳನ್ನು ಆ ಪ್ರಾಣದೇವನೇ ನಡೆಸುತ್ತಾನೆ. ಮುಖ್ಯಪ್ರಾಣಃ ಸ್ವಪ್ರೇರಣಯಾ ಪ್ರಾಣಿಭಿಃ ಕ್ರಿಯಮಾಣಾನಿ ಪುಣ್ಯಕರ್ಮಾಣಿ ಪರಬ್ರಹ್ಮಣಿ ಹರೌ ಸಮರ್ಪಯತಿ (ಪ್ರಭಾವ್ಯಾಖ್ಯಾನ) ತಸ್ಮಿನ್ ಕರ್ಮಾಣ್ಯಧಾನ್ಮರುತ್ (ಭಾಷ್ಯ) ಎನ್ನುವಂತೆ ಆ ಮುಖ್ಯ ಪ್ರಾಣದೇವರ ಮೂಲಕವೇ ಈ ದೇಹ ನಡೆಯುವುದು.

ಬಾಯಿ ನುಡಿಯುವುದು. ಮನಮಿಡಿಯುವುದು. ಅವರು ನಮ್ಮ ಶರೀರದಿಂದ ಹೊರಟರೆ ಎಲ್ಲ ಚೇಷ್ಟೆಗಳೂ ಸ್ಥಗಿತ. ಹೀಗಾಗಿ ಜೀವರ ಆಯುಷ್ಯವಿರುವಷ್ಟುಕಾಲ ಅವರಲ್ಲಿ ನೆಲೆಸಿಕರ್ಮಗಳನ್ನು ಮಾಡಿಸಿ ಅವುಗಳನ್ನು ಭಗವಂತನಿಗೆ ಸಮರ್ಪಿಸುತ್ತಾರೆ. ಹೀಗೆ ನಮ್ಮ ಕರ್ಮಗಳೆಲ್ಲವೂ ಮುಖ್ಯ ಪ್ರಾಣನ ಮುಖಾಂತರವೇ ಭಗವಂತನಿಗೆ ಸಲ್ಲುತ್ತವೆ. ಭಗವಂತನೂ ಕೂಡ ಮುಖ್ಯಪ್ರಾಣನ ಮೂಲಕವೇ ನಮಗೆ ಅನುಗ್ರಹವನ್ನು ಮಾಡುತ್ತಾನೆ.

ಈ ರೀತಿ ಜೀವ ಮತ್ತು ದೇವ ಇಬ್ಬರನ್ನು ಹತ್ತಿರ ತಂದು ಜೋಡಿಸುವ ಸೂತ್ರವೇ ಪ್ರಾಣತತ್ವ. ಈ ಜ್ಞಾನವೇ ಎಲ್ಲ ಸಮಸ್ಯೆಗಳಿಗೆ ಪರಿಹಾರಸೂತ್ರ. (ಸಶೇಷ)


**ಸಾದರ ಸ್ವೀಕಾರ**

## ಋಷಿಚ್ಛಂದೋ ದೇವತಾ ನಿರ್ಣಯ

**ಬೆಲೆ ರೂ. 15-00**

**ಲೇಖಕರು : ಕೆ. ವಿ. ಗೋಪಾಲ ಭಟ್**, ಕಲ್ಯ, ಕಾಪು, ಉಡುಪಿ ಜಿಲ್ಲೆ.

**ಪ್ರಕಾಶಕರು : ರತ್ನಾವತೀ ಪ್ರಕಾಶನ,**
'ಜ್ಯೋತಿರ್ಮಂದಿರಂ' ಕಲ್ಯ - ಕಾಪು ಅಂಚೆ. 574 106, ಉಡುಪಿ ಜಿಲ್ಲೆ.

## ಈಶಾವಾಸ್ಯೋಪನಿಷತ್ ಪ್ರಕಾಶ

**ಬೆಲೆ ರೂ. 60-00**

**ಕರ್ತೃ : ಕೀರ್ತಿಶೇಷ ಶ್ರೀ ಬಿ. ನಾಗೇಶ ರಾವ್**
ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥರು (ನಿವೃತ್ತ), ಮೈಸೂರು ವಿಶ್ವವಿದ್ಯಾಲಯ

**ಸಂಪಾದಕ : ಬ. ನಾ. ರಘುರಾಮ,** ನಿವೃತ್ತ ಪ್ರಾಂಶುಪಾಲರು,
ಜನಸೇವಾ ವಿದ್ಯಾಕೇಂದ್ರ, ಚನ್ನೇಹಳ್ಳಿ

**ಪ್ರಕಾಶನ : ಸುಪಥ ಪ್ರಕಾಶನ**
ಬ. ನಾ. ರಘುರಾಮ, ಸಾಗರ (ಕರ್ನಾಟಕ) 577 401

## ಧರ್ಮಸಿಂಚನ

ಲೇಖಕರು : **ಕೋಟೇಶ್ವರ ಸೂರ್ಯನಾರಾಯಣ ರಾವ್**
ಪ್ರಕಾಶಕರು: **ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ (ರಿ.)**
ಮಹಾಲಕ್ಷ್ಮಿ ಕೃಪಾ, 25/1, ಡಿ.ವಿ.ಜಿ. ರಸ್ತೆ, ಬೆಂಗಳೂರು - 560 004




# ಮುಖಪುಟ ಲೇಖನ

**ಚಿಪ್ಪಗಿರಿ ನಾಗೇಂದ್ರಾಚಾರ್ಯ**

**ಹಿರಣ್ಮಯೇನ ಪಾತ್ರೇಣ ಸತ್ಯಸ್ಯ ಅಪಿಹಿತಂ ಮುಖಮ್ ।**
**ತತ್ ತ್ವಂ ಪೂಷನ್ ಅಪಾವೃಣು ಸತ್ಯ ಧರ್ಮಾಯ ದೃಷ್ಟಯೇ ॥**

ಇದು ಸ್ವಾಯಂಭುವ ಮನುವಿನ ಮೊಮ್ಮಗನಾಗಿ ಅವತರಿಸಿದ ಯಜ್ಞನಾಮಕ ಭಗವಂತನ ಕುರಿತಾದ ಸ್ತುತಿ. ವೇದಮಾತಾ ಗಾಯತ್ರೀ ಪ್ರತಿಪಾದ್ಯನಾಗಿ ಸೂರ್ಯಮಂಡಲದಲ್ಲಿ ನೆಲೆಸಿರುವ ಸೂರ್ಯನಾರಾಯಣನ ಪ್ರಾರ್ಥನಾ ಮಂತ್ರ, ಮನು ಭಗವಂತನ ಕಲ್ಯಾಣತಮ ರೂಪದ ದರ್ಶನಕ್ಕಾಗಿ ಹಾತೊರೆದು ಶರಣು ಬಂದು ಪ್ರಾರ್ಥಿಸುವ ಸ್ತೋತ್ರ.

[ಜಗನ್ನಿಯಾಮಕನಾದ ಭಗವಂತನೇ ನಿನ್ನ ಮುಖವು (ಸ್ವರೂಪವು) ಬಂಗಾರದ ಪಾತ್ರೆಯಿಂದ (ಸೂರ್ಯನಿಂದ) ಮುಚ್ಚಲ್ಪಟ್ಟಿದೆ. ಸೂರ್ಯನಲ್ಲಿ ನೆಲೆಸಿರುವ ಓ ಸುಖ ಪೂರ್ಣನೇ ಸತ್ಯ ಮೂರ್ತಿಯಾದ ನಿನ್ನನ್ನು ಹೃದಯದಲ್ಲಿ ಧರಿಸಿರುವ ಭಕ್ತನಿಗಾಗಿ, ದರ್ಶನಕ್ಕಾಗಿ ಆ ಮುಚ್ಚಳವನ್ನು ತೆಗೆದು ಬಿಡು.]

ಬಂಗಾರದ ಪಾತ್ರೆಯಿಂದ ಸತ್ಯದ ಮುಖ ಮುಚ್ಚಲ್ಪಟ್ಟಿದೆ. ನಮಗೆ ಆ ಹೊಳೆಯುವ ಮುಚ್ಚಳವೇ ಸತ್ಯಕ್ಕಿಂತ ಹೆಚ್ಚು ಆಕರ್ಷಕ. ಮುಚ್ಚಳವನ್ನು ತೆರೆದು ಸತ್ಯವನ್ನು ಅರಸುವ ವ್ಯಕ್ತಿಗಳು ಬಹಳ ವಿರಳ. ಹಾಗೇ ಜಗನ್ನಿಯಾಮಕನಾದ ಭಗವಂತನ ಬಗೆಗೂ ಅಷ್ಟೇ. ಸೂರ್ಯ ಮಂಡಲದಿಂದ ಭಗವಂತನ ಸ್ವರೂಪ ಮುಚ್ಚಲ್ಪಟ್ಟಿದೆ. ಕಣ್ಣು ಕುಕ್ಕುವ ಆ ಪ್ರಭೆಯ ಒಳಗೆ ಅವಿತಿರುವ ಕೋಟಿ ಸೂರ್ಯ ಸಮಪ್ರಭನಾದ ಆ ಭಗವಂತನನ್ನು ಅರಸುವುದು ಅಷ್ಟು ಸುಲಭವಲ್ಲ. ಅದಕ್ಕೆ ಅವನ ಅನುಗ್ರಹವೇ ಮುಖ್ಯ. ಭಗವಂತನ ಅನುಗ್ರಹೋನ್ಮುಖನಾದಾಗಲೇ ಅವನ ದರ್ಶನ ಲಭ್ಯ.

ಸೂರ್ಯ ಭಗವಂತನ ಉಪಾಸನೆಯ ಮುಖ್ಯ ಪ್ರತೀಕಗಳಲ್ಲೊಂದು. ಭಾಗವತ ಹೇಳಿತು "ಸೂರ್ಯೇತು ವಿದ್ಯಯಾತ್ರಯ್ಯಾ" ಎಂದು. ಸೂರ್ಯಮಂಡಲದಲ್ಲಿ ವೇದಮಾತೆಯಾದ ಗಾಯತ್ರೀ ಮಂತ್ರಗಳಿಂದ ಪ್ರತಿಪಾದ್ಯನಾದ ನಾರಾಯಣನ ಉಪಾಸನೆ ಭಗವಂತನಿಗೆ ಅತಿ ಪ್ರಿಯವೆಂದು.

ಜಗತ್ತಿಗೆ ಚೇತನಶಕ್ತಿಯಾದ, ಚೈತನ್ಯವನ್ನು ತುಂಬುವ, ಜಾಡ್ಯ ಆಲಸ್ಯಗಳನ್ನು ಹೋಗಲಾಡಿಸುವ ಸೂರ್ಯ ನಾರಾಯಣನನ್ನ ನಿರಂತರವೂ ಧ್ಯಾನಿಸೋಣ. ಭಾರತ ಅದನ್ನೇ ನೆನಪಿಸುತ್ತಿದೆ. 'ಕುರ್ಯಾತ್ ಅನ್ಯನ್ ನ ವಾಕುರ್ಯಾತ್ ಮೈತ್ರೋ ಬ್ರಾಹ್ಮಣ ಉಚ್ಯತೇ' ಮಿತ್ರನಾಮಕ ಭಗವಂತನ ಆರಾಧನೆ ಗಾಯತ್ರೀ ಮಂತ್ರಗಳಿಂದ ತಪ್ಪದಿರಲಿ. ಅನುದಿನವು.

ತೋಳುಬಂದಿ, ಕರ್ಣಕುಂಡಲ, ಕಿರೀಟ, ಹಾರಗಳನ್ನು ಧರಿಸಿ ಶಂಖ ಚಕ್ರಗಳನ್ನು ಧಾರಣೆ ಮಾಡಿರುವ ಕಮಲಾಸನದಲ್ಲಿ ಕುಳಿತು ಸೂರ್ಯಮಂಡಲದಲ್ಲಿ ನಾರಾಯಣನನ್ನು ಧ್ಯಾನಿಸೋಣ. ★



# ತೆಪ್ಪಗಿರುವುದು ತಪ್ಪು

ದುರ್ಜನರ ದೌರ್ಜನ್ಯ ಜಗತ್ತನ್ನು ಹಾಳುಮಾಡುವುಕ್ಕಿಂತ ಸಜ್ಜನರ ಜ್ಞಾನಿಗಳ ಸೌಜನ್ಯನಾಮಕವಾದ ಮೌನನಿಷ್ಕ್ರಿಯತೆಗಳೇ ಜಗತ್ತನ್ನು ಹೆಚ್ಚು ಹಾಳು ಮಾಡುವುದು.

ಬೆರಳೆಣಿಕೆಯ ಭಯೋತ್ಪಾದಕರು, ಹಿಡಿಸಿಂಸಾವಾದಿಗಳು, ಬೃಹಜ್ಜಗತ್ತನ್ನೇ ತಲ್ಲಣಗೊಳಿಸುವುದು ಅಗಾಧಸಂಖ್ಯೆಯಲ್ಲಿರುವ ಅವರ ಸಂಬಂಧಿಗಳು, ಸಜ್ಜನರು, ಭಯೋತ್ಪಾದಕರಲ್ಲದವರು ಅಹಿಂಸಾವಾದಿಗಳು ಧರಿಸಿಕೊಂಡಿರುವ ಸಭ್ಯನಾಮಕ ದಿವ್ಯಮೌನದಿಂದಲ್ಲವೇ?

ಭಯೋತ್ಪಾದಕರ ತಂದೆತಾಯಂದಿರು, ಅಣ್ಣತಮ್ಮಂದಿರು, ಅಕ್ಕತಂಗಿಯರು, ಬಂಧುಬಳಗದವರು, ಮಿತ್ರವೃಂದದವರು, ಉಣಬಡಿಸುವವರು, ಊರಿನವರು ಅವರೂ ಭಯೋತ್ಪಾದಕರೇ? ಹಿಂಸಕರೇ? ಎಂದು ಕೇಳಿದರೆ ಅಲ್ಲ ಹೇಳುತ್ತೀರಲ್ಲ?

ಆದರೆ ಭಯೋತ್ಪಾದಕರಾಗದ ಈ ಅಭಯೋತ್ಪಾದಕರ, ವಿಭೂತಿ ಪುರುಷರ ಮೌನ ಜೀವನವೇ ಮೂಕಜೀವನವೇ ನಿಜವಾದ ಭಯೋತ್ಪಾದನೆ ಗೊತ್ತಾ? ಇವರೆಲ್ಲರೂ ಒಟ್ಟಾಗಿ ಹೂಂಕರಿಸಿದರೆ ಭಯೋತ್ಪಾದನೆ ತಕ್ಷಣ ಮಾಯಾವಾಗಬಲ್ಲದು. ಕರಗಿ ಹೋಗಬಲ್ಲುದು. ಕರಟಿ ಹೋಗಬಲ್ಲುದು.

ಅದರಂತೆಯೇ ನಿಜ ಹೇಳುವುದಾದರೆ ಚುನಾವಣೆಯಲ್ಲಿ ದುಷ್ಟ ವ್ಯಕ್ತಿಗಳು, ಲೋಕಕಂಟಕರು ಬಹುಸಂಖ್ಯೆಯಲ್ಲಿ ಆರಿಸಿಬರುವುದು ತಮಗೆ ಬಿದ್ದ ಮುಗ್ಧ ಜನರ ಅಥವಾ ದುಷ್ಟ ಜನರ ಬಹುಮತಗಳಿಂದ ಅಲ್ಲ.

ಹೊರತು ಈ ದುರಳನಿಗೆ ನಾನೇಕೆ ಮತಹಾಕಬೇಕು ಎಂಬ ಮಹಾಜ್ಞಾನಿಗಳ ತಥಾಕಥಿತ ಸಜ್ಜನರ, ಸುಶಿಕ್ಷಿತರ ಬೀಳದ ಬಹುಮತಗಳಿಂದ ಗೊತ್ತಾ?

ದುರ್ಜನರು ಸದಾ ಸಶಕ್ತರು. ವೋಕಲ್‌ಗಳು. ಸಕ್ರಿಯರು. ಉತ್ಸಾಹಿಗಳು ಮತ್ತು ಬಹುಸಂಘಟನಾ ಚತುರರು.

ಒಬ್ಬ ದುರ್ಜನ ಏನಾದರೂ ಮಾಡಿ ಮತ್ತೊಂದು ದುರ್ಜನನನ್ನು ಹಡೆದೇ ಹಡೆಯುತ್ತಾನೆ.



ಸುವಾಣಿ

ಆದರೆ ಸಜ್ಜನರೆಂದುಕೊಂಡವರು ಸದಾ ಮೂಕರು, ಸೋಮಾರಿಗಳು, ಜಡಭರತರು, ಅಲಸರು, ಅಸಂಘಟಿತರು ಅಸೂಯಾಪರರು.

ಇನ್ನೊಬ್ಬ ಸಜ್ಜನನನ್ನು ಸಹಿಸರು. ಇನ್ನೊಬ್ಬ ಸಜ್ಜನನ ಮುಖನೋಡರು. ಹಮ್ಮುಹಮ್ಮಿಕೊಂಡಿರುವರು.

ಬೇಕಾದರೆ ದುಷ್ಟನಿಂದ ದೂರ ಇರುವರು ಹೊರತು ದುಷ್ಟತನವನ್ನು ದೂರುವುದಿಲ್ಲ. ದುಷ್ಟನನ್ನು ಪರಿವರ್ತಿಸಲು ಮಾತು ಉದುರಿಸುವುದಿಲ್ಲ. ತಿಳಿದರೂ ತಿಳಿಹೇಳುವುದಿಲ್ಲ. ದೌರ್ಜನ್ಯದ ಮುಂದೆ ತುಟಿ ಎರಡು ಮಾಡುವುದಿಲ್ಲ. ಕೆಲವೊಮ್ಮೆ ದೌರ್ಜನ್ಯಗಳನ್ನು ಆಸ್ವಾದಿಸುವುದೂ ಉಂಟು. ಅದಕ್ಕೆ ಇಂಬು ಕೊಡುವುದೂ ಉಂಟು.

ಇಂತಹ ಸಜ್ಜನರನ್ನು ಕುರಿತೇ ಈಶೋಪನಿಷತ್ತು ಹೇಳಿದ್ದು,

**ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ।**

**ತತೋ ಭೂಯ ಇವ ತಮೋ ಯ ಉ ವಿದ್ಯಾಯಾಂ ರತಾಃ ॥**

ಅವಿದ್ಯೋಪಾಸಕರು ಅಂಧಂತಮಸ್ಸಿಗೆ ಹೋಗುತ್ತಾರಾದರೆ ಅವಿದ್ಯೆಯ ಬಗ್ಗೆ ಗೊತ್ತಿದ್ದೂ ಚಕಾರವೆತ್ತದ ಬರೇ ವಿದ್ಯೋಪಾಸಕರು ಅದಕ್ಕಿಂತ ನಿಕೃಷ್ಟ ತಮಸ್ಸಿಗೆ ತಳ್ಳಲ್ಪಡುತ್ತಾರೆ.

ಹಾಳು ಮಾಡುವವನಿಗೆ ಇನ್ನಷ್ಟು ಜನರನ್ನು ಹಾಳುಮಾಡೋಣ ಎಂದನಿಸುವುದು ಒಳ್ಳೇದು ಮಾಡುವವನಿಗೆ ಅವನಿಗೆ ತಿಳಿಹೇಳೋಣ, ಅವನನ್ನು ಒಳ್ಳೇದು ಮಾಡೋಣ ಎಂದನಿಸದೇ ಇದ್ದದ್ದರಿಂದಾದ್ದರಿಂದ ಅಂತಹ ಒಳ್ಳೇ ಮನುಷ್ಯನಿಗೆ ಇನ್ನಷ್ಟು ಒಳ್ಳೇ ನರಕ ಆಗುತ್ತದೆ ಎಂದರ್ಥ.

ನೆಲದಲ್ಲಿ ಎಣ್ಣೆ ಬಿದ್ದಿದೆ ಎಂದು ತಿಳಿಯದ ಅಜ್ಞಾನಿಗೆ ಬಿದ್ದು ಪೆಟ್ಟಾಗುವ ಅನರ್ಥಕ್ಕಿಂತ ಹೆಚ್ಚು ಪಟ್ಟು ಅನರ್ಥ ನೆಲದಲ್ಲಿ ಎಣ್ಣೆ ಬಿದ್ದಿದೆ ಎಂದು ಗೊತ್ತಿದ್ದೂ ಯಾರಿಗೂ ತಿಳಿಸದ ತುಟಿಗೆ ಅಂಟು ಅಂಟಿಸಿಕೊಂಡ ಮಹಾಮೇಧಾವಿ ಸಜ್ಜನನಿಗೆ ಎಂದು.

ಮೇಲ್ನೋಟದಲ್ಲಿ ಗೊತ್ತಿಲ್ಲದವರಿಗೆ ಆಗುವ ತೊಂದರೆ ಜಾಸ್ತಿ ಎಂದನಿಸಿದರೂ ಕೆಳನೋಟದಲ್ಲಿ ಅಥವಾ ಒಳನೋಟದಲ್ಲಿ ನೋಡಿದಾಗ ಗೊತ್ತಿದ್ದು ಗೊತ್ತುಪಡಿಸದವರಿಗೆ ಆಗುವ ತೊಂದರೆಯೇ ಜಾಸ್ತಿ. ಅವರಕ್ಕಿಂತ ಇವರೇ ಜಾಸ್ತಿ ಅಪರಾಧಿಗಳು.

ದುಷ್ಟ ಮಕ್ಕಳಕ್ಕಿಂತ ದುಷ್ಟ ಮಕ್ಕಳನ್ನು ಸಮಾಜಕ್ಕೆ ಕೊಟ್ಟ ಶಿಶುಪಾಲರೇ ತಂದೆತಾಯಂದಿರೇ ವಿಶಿಷ್ಟ ಅಪರಾಧಿಗಳು.

ಪ್ರತಿಯೊಬ್ಬ ದುಷ್ಟನ ಹಿಂದೆ ಶಿಷ್ಟಪಾಲಕನೊಬ್ಬ ಮೂಕನಾಗಿರುತ್ತಾನೆ. ಆ ದುಷ್ಟ ಮೇಲ್ನೋಟದ ಅಪರಾಧಿಯಾದರೆ ಈ ಶಿಷ್ಟ ಒಳನೋಟದ ಅಪರಾಧಿ.

ಎಷ್ಟೋ ಸಲ ಮೇಲ್ನೋಟದಲ್ಲಿ ದುಷ್ಟರಾಗಿದ್ದವರು ಒಳನೋಟದಲ್ಲಿ ತದ್ವಿರುದ್ಧವಾಗಿರುವುದುಂಟು. ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ ಆಗಿರುವುದುಂಟು.

ಮೇಲ್ನೋಟದಲ್ಲಿ ಜಗತ್ತಿನಲ್ಲಿ ನಂದಿಸಲು ಆಹಾರಪದಾರ್ಥ ಲಭಿಸದ ಅಸಂಖ್ಯ ಹಸಿವುಗಳು ಇಂದು ದೊಡ್ಡ ಸಮಸ್ಯೆಯೆಂದೆನಿಸಿದರೆ ಒಳನೋಟದಲ್ಲಿ ನೋಡಿದಾಗ

ಅನಿಸುವುದು ಅದಕ್ಕಿಂತ ದೊಡ್ಡ ಸಮಸ್ಯೆ ಹಸಿವುಕ್ಕಿಂತ ಹೆಚ್ಚು ತಿನ್ನುವ ಹೊಟ್ಟೆಬಾಕರ ಹೆಚ್ಚಿನ ಸಂಖ್ಯೆ!

ಅದರಂತೆ ಮೇಲ್ನೋಟದಲ್ಲಿ ದುಷ್ಟರೇ ಭಯೋತ್ಪಾದಕರೇ ಹಿಂಸಾವಾದಿಗಳೇ ಈ ಲೋಕದ ದೊಡ್ಡ ಅಪರಾಧಿಗಳೆಂದೆನಿಸಿದರೂ ಒಳನೋಟದಲ್ಲಿ ಬುದ್ಧಿ ತಿಳಿದೂ ತಿಳಿಹೇಳದ ತಿದ್ದದ ತಿಳುವಳಿಕೆ ಉಳ್ಳ ನಿಃಶಬ್ದ ಸಜ್ಜನರೇ ದೊಡ್ಡ ಅಪರಾಧಿಗಳು. ತಿಳಿಹೇಳಲೊಲ್ಲದ ತಿಳುವಳಿಕೆಯವರು, ತಪ್ಪಿನ ಮುಂದೆ ತೆಪ್ಪಗಿರುವವರು, ದುಪ್ಪಟ್ಟು ಅಪರಾಧಿಗಳು.

ನಿಮ್ಮದ್ದನ್ನು ನೀವು ಹೇಳಿ ಬೇರೆಯವರದ್ದನ್ನು ತಪ್ಪು ಎಂದು ಏಕೆ ಹೇಳುತ್ತೀರಿ ಎಂಬ ಪ್ರಸಿದ್ಧ ಮತವೊಂದಿದ್ದು ಅದು ವಿಚಾರಗಳೆಲ್ಲಾ ಆಯಾ ವ್ಯಕ್ತಿಗತವಾದದ್ದು ಎಂಬುದಾಗಿ ವಸ್ತುಗಳ ತತ್ವಗಳನ್ನು ವ್ಯಕ್ತಿಗತವಾಗಿ ವ್ಯಕ್ತೀಕರಿಸಿದ, ಚಿತ್ರೀಕರಿಸಿದ, ಗುರುತಿಸಿದ್ದ ನಿರಂತರವಾದ ಮಹಾತಪ್ಪುವಿನಿಂದ ಅಭಿವ್ಯಕ್ತವಾದ ಅಣಿಮುತ್ತಾಗಿ ಸಾಮಾಜಿಕ ಸಾಮರಸ್ಯ ಹೊರತು ಜಿಜ್ಞಾಸುಪ್ರಪಂಚದಲ್ಲಿ ಧೋರಣೆ ಬೃಹತ್ತಪ್ಪಾಗುತ್ತದೆ.

ಇನ್ನು ಕೆಲವರು ಇರುವುದುಂಟು. ವಿಚಾರವನ್ನು ಸರಿಯಾಗಿ ತಿಳಿದುಕೊಂಡಿರುತ್ತಾರೆ. ತಪ್ಪು ತಿಳಿದವರನ್ನು ಹೌದು ನೀವು ತಿಳಿದುಕೊಂಡಿರುವುದು ಮಹಾತಪ್ಪು ಎಂದು ಘಂಟಾಘೋಷವಾಗಿ ಹೇಳುತ್ತಾರೆ. ಆದರೆ ಆ ವ್ಯಕ್ತಿಗೆ ಆ ತಪ್ಪನ್ನು ತಪ್ಪಾದರೀತಿಯಲ್ಲಿ ತಿರುಗಿ ತಿರುಗಿ ತಿವಿಯುತ್ತಾ ಹೇಳುತ್ತಾರೆ. ತಮ್ಮ ತೀಟೆ ತೀರಿಸಿಕೊಳ್ಳುತ್ತಾರೆ. ಆ ರೀತಿ ಆಗ್ರಹಪೂರ್ವಕ ಹೇಳುವುದರಿಂದ ತಪ್ಪು ತಿಳಿಕೊಂಡವನಿಗೆ ತಾನು ತಿಳಿಕೊಂಡದ್ದು ತಪ್ಪಲ್ಲ. ಇದೇ ರೈಟು ಎಂದು ಆಗ್ರಹ ಬರುವಂತೆ ಮಾಡಿ ಆತ ಎಂದೂ ತಪ್ಪನ್ನು ತಿದ್ದಿಕೊಳ್ಳದವನಂತೆ ಮತ್ತಷ್ಟು ತಪ್ಪು ಮಾಡುವವನಂತೆ ಮಾಡಿಬಿಡುತ್ತಾರೆ.

ತಪ್ಪು ತಿಳಿದವರನ್ನು ನಿಂದಿಸುವುದು, ಜರೆಯುವುದು, ಹಳಿಯುವುದು, ತಿವಿದು ಘರ್ಜಿಸುವುದು, ವ್ಯಕ್ತಿ ದೂಷಣ ಮಾಡುವುದು ಈಗೋ ಹರ್ಟ್ ಮಾಡುವುದು ಇವು ತನ್ನ ಅಂತಸ್ತನ್ನು ಏರಿಸುತ್ತದೆ. ಎಂದು ಭ್ರಮೆಗೆ ಒಳಗಾಗಿ ಅಂತತಃ ಅವರು ಅಂತವನನ್ನು ಶಾಶ್ವತ ತಪ್ಪಿತಸ್ಥನನ್ನಾಗಿಸುತ್ತಾರೆ.

ತಪ್ಪು ತಿಳಿಯುವುದು ತಪ್ಪು. ತಪ್ಪು ತಿಳಿಯದಿದ್ದರೂ ತಪ್ಪು ತಿಳಿದವರ ಮುಂದೆ ತೆಪ್ಪಗಿರುವುದು ಮಹಾತಪ್ಪು. ತೆಪ್ಪಗಿರುವುದಕ್ಕಿಂತ ತಪ್ಪಿತಸ್ಥನನ್ನು ಇನ್ನಿಲ್ಲದಂತೆ ದೃಢಮೂಲಗೊಳಿಸುವುದು ತಪ್ಪೋ ತಪ್ಪು.

**ಅಮೇರಿಕಾದಲ್ಲಿ ನ್ಯೂಜೆರ್ಸಿಯ ಶ್ರೀ ಕೃಷ್ಣಬೃಂದಾವನದಲ್ಲಿ ದೇಶಾದಾದ್ಯಂತವಿರುವ ಜಿಜ್ಞಾಸುಗಳಿಗಾಗಿ ಪ್ರತಿನಿತ್ಯ ದೂರವಾಣಿ ವೆಬ್‌ಕ್ಲಾಸಿನಲ್ಲಿ ನಡೆಸಿದ ಈಶಾವಾಸ್ಯೋಪನಿಷತ್ ಪಾಠದ ಮಂಗಳಾನುವಾದವನ್ನು ಮಹಾತ್ಮಾಗಾಂಧಿ ಸೆಂಟರ್‌ನಲ್ಲಿ ನಡೆದ ಶ್ರೀ ರಾಘವೇಂದ್ರಗುರುಗಳ ಸಮಾರಾಧನಾ ಸಮಾರಂಭದಲ್ಲಿ ನಡೆಸುತ್ತಾ**

## ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ನೀಡಿದ ಸಂದೇಶದ ಸಾರ.



# ಸುಗುಣಾಂತರಂಗ

**ಸಂಪುಟ : 20 ಸಿಂಹಮಾಸ ಸಂಚಿಕೆ : 9 ಸೆಪ್ಟಂಬರ್ 2005**

## ಸುಗುಣ ಬಳಗ

**ಸಂಸ್ಥಾಪಕರು :**
ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು
**ನಿರ್ದೇಶಕ** : ಬನ್ನಂಜೆ ಗೋವಿಂದಾಚಾರ್ಯ
**ಸಂಪಾದಕ** : ಎಂ. ರಾಧಾಕೃಷ್ಣರಾವ್
**ಪ್ರಕಾಶಕ** : ಪ್ರಸನ್ನಾಚಾರ್ಯ
**ಮುದ್ರಕ** : ಬಿ.ಜಿ. ಸುಬ್ಬರಾವ್
**ಸಲಹಾ ಮಂಡಳಿ**
ಬನ್ನಂಜೆ ರಾಮಾಚಾರ್ಯ
ಮಳಗಿ ಜಯತೀರ್ಥಾಚಾರ್ಯ
ಡಾ। ಯು. ಪಿ. ಉಪಾಧ್ಯಾಯ
ಬಿಂದು ಮಾಧವಾಚಾರ್ಯ ನಾಗಸಂಪಿಗೆ
ಸಗ್ರಿ ರಾಘವೇಂದ್ರ ಉಪಾಧ್ಯಾಯ
ಡಾ। ಎನ್. ವೆಂಕಟೇಶ ರಾವ್
ಚಿಪ್ಪಗಿರಿ ನಾಗೇಂದ್ರಾಚಾರ್ಯ
ಗಂಜೀಫಾ ರಘುಪತಿ ಭಟ್
ಕಡೆಕಾರು ಶ್ರೀಶ ಭಟ್
ಉಡುಪಿ ರಾಮನಾಥಾಚಾರ್ಯ
ಬಿ. ಜಿ. ರವಿಕುಮಾರ್

**ಸಂಪರ್ಕವಿಳಾಸ :**
ಸಂಚಾಲಕ, ಸುಗುಣಮಾಲಾ ಮಾಸಪತ್ರಿಕೆ
ರಥಬೀದಿ, ಉಡುಪಿ - 576 101, ಉಡುಪಿ ಜಿಲ್ಲೆ, ಕರ್ನಾಟಕ
ದೂರವಾಣಿ : **(0820) 2522222, 2531047**
Tel Fax : 0820-2521272
E-Mail:mprasannaacharya@yahoo.com
Website:http://WWW.shreeputhige.org

**ಚಂದಾವಿವರ**
**ವಾರ್ಷಿಕ: ರೂ. 80/- 15 ವರ್ಷ ರೂ. 1000/-**
**ಜಾಹೀರಾತು ವಿವರ :**
ಅರ್ಧಪುಟಕ್ಕೆ ರೂ. **750;** ಒಂದು ಪುಟಕ್ಕೆ ರೂ. **1500**

**ಮರ್ಮಮೀಮಾಂಸೆ** - ಸುಶ್ರೀ 4
**ಶ್ರೀ ಸುಧಾ ಸುವಚನ** ಲೇಖಾಂಕ - 42 41
ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು.
**ಮುಖಪುಟ ಲೇಖನ** 43
ಚಿಪ್ಪಗಿರಿ ನಾಗೇಂದ್ರಾಚಾರ್ಯ
**ಮಧ್ವವಲ್ಲಭ ಪಾಹಿ ಮಾಮ್** 9
ಶತಾವಧಾನೀ - ಉಡುಪಿ ರಾಮನಾಥ ಆಚಾರ್ಯ
**ಭಗವನ್ನಾಮಸ್ಮರಣೆಯ ಒಂದು ವೈಶಿಷ್ಟ್ಯ** 13
ಎಸ್. ಪಿ. ಶ್ರೀನಿವಾಸ ಭಟ್ಟಜಿ
**ಪ್ರಕರಣ ಗ್ರಂಥಗಳು** 17
ಪ್ರೊ। ಎಸ್. ವೆಂಕಟೇಶ ಮೂರ್ತಿ
**ಒಂದು ಶ್ರೇಷ್ಠ ತತ್ವ** 21
ಮ. ಗೋ. ಹೆಗಡೆ
**ಸಂವತ್ಸರನಾಮಸ್ತೋತ್ರ, ಹಾಗೂ ಕೃತಿಗಳು** 26
ಸಗ್ರಿ ರಾಘವೇಂದ್ರ ಉಪಾಧ್ಯಾಯ
**ಪ್ರೇಯಸ್ಸು - ಶ್ರೇಯಸ್ಸು** 29
ಎ. ಬಿ. ಕುಂಜಾರ್, ಬೆಂಗಳೂರು
**ದಾಸ ಮತ್ತು ಸಂತ ಸಾಹಿತ್ಯ** 33
ಡಾ। ಎಚ್. ವಿ. ನರಸಿಂಹ ಮೂರ್ತಿ, ಕುಂದಾಪುರ
**ಈಶಾವಾಸ್ಯೋಪನಿಷತ್** 44
ಬಿಂದುಮಾಧವಾಚಾರ್ಯ, ನಾಗಸಂಪಿಗೆ

## 2005 ಅಕ್ಟೋಬರ್ ತಿಂಗಳ ವಿಶೇಷಗಳು

3 ಮಹಾಲಯ ಅಮಾವಾಸ್ಯ ಸೋಮವತೀ - ಗ್ರಸ್ತಾಸ್ತ ಸೂರ್ಯಗ್ರಹಣ
4 ನವರಾತ್ರ್ಯಾರಂಭ
8 ಲಲಿತಾ ಪಂಚಮಿ
9 ಶಾರದಾ ಪ್ರತಿಷ್ಠಾ ಪೂಜಾ
11 ಗುರು ಅಸ್ತ - ದುರ್ಗಾಷ್ಟಮೀ
12 ಶಾರದಾ ವಿಸರ್ಜನಂ, ಮಹಾನವಮಿ, ವಿಜಯದಶಮಿ, ಶಮೀಪೂಜಾ, ಮಧ್ವಜಯಂತಿ
14 ವೈಷ್ಣವೈಕಾದಶೀ
15 ದ್ವಿದಳ ವ್ರತಾರಂಭ
17 ಪೂರ್ಣಿಮಾ
20 ಸಂಕಷ್ಟ ಚತುರ್ಥಿ ಚ. ಉ. ಘಂ. 8-36
28 ಸರ್ವೈಕಾದಶೀ
29 ಹರಿವಾಸರ ಘಟಿ 8 ದ್ವಾದಶಿ
30 ಜಲಪೂರಣಂ
31 ನರಕಚತುರ್ದಶೀ, ತೈಲಾಭ್ಯಂಗ ರಾತ್ರಿ ಚ. ಉ. 5-26

# ಓಂ ಅಂ ಅಹಿಂದಾಯ ನಮಃ

**ಅಸ್ಯ ಶ್ರೀ ಅಹಿಂದ ಮಹಾಮಂತ್ರಸ್ಯ ಅಮುಕ ಋಷಿಃ ।**

**ನೆಕ್ಸ್ಟ್ ಸ್ಟೆಪ್ ಛಂದಃ ಸೋ ಆ್ಯಂಡ್ ಸೋ ದೇವತಾ ಮತಾಕರ್ಷಣೇ ವಿನಿಯೋಗಃ**

**ಓಂ ಅಂ ಅಹಿಂದಾಯ ನಮಃ। ಓಂ ಅಂ ಅಹಿಂದಾಯ ನಮಃ । ಓಂ ಅಂ ಅಹಿಂದಾಯ ನಮಃ।**

ಪ್ರತಿಯೊಬ್ಬರೂ ನೂರು ಬಾರಿ ಹೇಳಿ ಎಂದು ಶ್ವೇತವಸ್ತ್ರಧಾರಿಗಳಾದ ಗುರುಗಳು ಜಪಮಾಲಾ ಹಿಡಿದುಕೊಂಡು ಉಪದೇಶ ನೀಡುತ್ತಾ ಕೊನೆಗೆ ಹತ್ತು ಬಾರಿ ಅಹಿಂದು ತರ್ಪಯಾಮಿ ಎಂದು ತರ್ಪಣ ಬಿಡಬೇಕು ಎಂದು ಅಪ್ಪಣೆ ಕೊಡುತ್ತಿರಲು,

ಪತ್ರಕರ್ತನ ರೂಪ ಪಡೆದು ಹೋದ ನಾನು ಈ ಮಂತ್ರದ ರಹಸ್ಯ ಭೇಧಿಸಲು ಮನಸಾಗಿ ಸಮಾವೇಶದ ನಂತರ ಈ ಮಂತ್ರತಜ್ಞರೊಬ್ಬರನ್ನು ಅಪ್ರೋಚ್ ಮಾಡಿದ್ದಾಯ್ತು.

ಮಂತ್ರತಜ್ಞರು, ಇನ್ನು ಮುಂದೆ ಒಂದನೇ ಪಾರ್ಟಿ ಎಂದು ಈ ಲೇಖದಲ್ಲಿ ಉಲ್ಲೇಖಿಸಲ್ಪಡುವವರು. ಬನ್ನಿ ಮಾನ್ಯ ಲೇಖಕರೇ ಒಟ್ಟು ಕುಳಿತುಕೊಳ್ಳಿ ಎಂದರು.

ಲೇಖಕರು, ಇನ್ನು ಮುಂದೆ ಎರಡನೇ ಪಾರ್ಟಿ ಎಂದು ಈ ಲೇಖದಲ್ಲಿ ಕಾಣಿಸಿಕೊಳ್ಳುವವರು - ಮಾನ್ಯ ತಜ್ಞರೇ ತಾವೇನೋ ಪ್ರಸಾರ ಮಾಡುತ್ತಿರುವ ಈ ಅಹಿಂದ ನೂತನ ಮಹಾಮಂತ್ರ ಅದು ಕಾಳ್ಗಿಚ್ಚಿನಂತೆ ಎಲ್ಲೆಡೆ ಹಬ್ಬುತ್ತಿದೆಯಂತೆ. ಆ ಬಗ್ಗೆ ಒಂದು ಐಟಂ ಮಾಡೋಣ ಎಂದೆನಿಸಿದೆ. ತ್ಸುನಾಮಿಯಂತೆ ಬಂದ ಇದು ರಾಜಕೀಯ ತ್ಸುನಾಮಿ ಮಾಡುತ್ತದೆ ಎಂದು ಕೇಳುತ್ತಿದ್ದೇನೆ ಹೌದಾ ?

ಒಂದನೇ ಪಾರ್ಟಿ - ಎರಡನೇ ಪಾರ್ಟಿಯವರೇ, ಇದು ಬಹಳ ಜೋರಾಗಿ ಹಬ್ಬುತ್ತಿದ್ದು ಇದು ಒಳ್ಳೇ ಬೀಜ ಮಂತ್ರ ಆಗಿ ಬಿಟ್ಟಿದೆ. ಇದು ಇದೀಗ ದೊಡ್ಡ ಸಿದ್ದಮಂತ್ರಾರೀ. ಪ್ರಸಿದ್ಧಮಂತ್ರಾರೀ. ಸದ್ಯದಲ್ಲೇ ಇದು ಫಲ ಬಿಡುವುದನ್ನು ನೀವು ಕಾಣುವಿರಂತೆ. ಇದು ಈ ರಾಜ್ಯವನ್ನೇ ಅಡಿಮೇಲು ಮಾಡಿ ಹಾಕುತ್ತೆ. ತ್ಸುನಾಮಿಯಂತೆ ಬಂದದ್ದು ಮಾತ್ರವಲ್ಲ ಇದು ಇಳಿದು ಹೋಗುವುದಿಲ್ಲ. ಆಮೇಲೆ ನೋಡಿ ರಾಜಕೀಯದಲ್ಲಿ ಸಾಂಕ್ರಾಮಿಕ ರೋಗ ಶುರುವಾಗಿ ಬಿಡುತ್ತೆ.

ಎರಡನೇ ಪಾರ್ಟಿ - ಅಂದ ಹಾಗೆ ಈ ಮಂತ್ರದ ಅರ್ಥ ಸ್ವಲ್ಪ ವಿವರಿಸುತ್ತೀರಾ?

ಒಂದನೇ ಪಾರ್ಟಿ - ನೋಡಿ ನಿಮಗೆ ಸಂಸ್ಕೃತ ಸ್ವಲ್ಪ ಸ್ವಲ್ಪ ಅಲ್ಲಲ್ಲಿ ಗೊತ್ತಿದ್ದರೆ ಇದು ಚೆನ್ನಾಗಿ ಅರ್ಥವಾಗುತ್ತೆ. ಇದರ ಅರ್ಥ ಅಹಿಂದಹತೀತಿ ಅಹಿಂದಃ. ಅಹಿ ಅಂದರೆ ಸರ್ಪ. ದಹತಿ ಎಂದರೆ ಸುಡುತ್ತದೆ. ಅಂದರೆ ರಾಜಕೀಯದಲ್ಲಿ ದುಷ್ಟ ಸರ್ಪಗಳಿರುತ್ತವಲ್ಲಾ? ಅವುಗಳನ್ನೆಲ್ಲಾ ಇದು ಸುತ್ತು ಹಾಕುತ್ತದೆ ಮತ್ತು ಸುಟ್ಟು ಹಾಕುತ್ತದೆ. ಇದು ಜನಮೇಜಯ ಮಂತ್ರ ರೀ. ಜನಮೇಜಯ ಸಿಟ್ಟಿನಿಂದ ಸರ್ಪಗಳನ್ನೆಲ್ಲಾ ಸುಟ್ಟುಬಿಟ್ಟಂತೆ. ಈ ಮಂತ್ರವನ್ನು ಸಿಟ್ಟಿನಿಂದ ಜಪ ಮಾಡಿದರೆ ವಿರೋಧಿಗಳನ್ನೆಲ್ಲಾ ಸುಟ್ಟು ಬೂದಿ ಮಾಡುತ್ತೆ. ಮತ್ತು ಜನಾಕರ್ಷಣ ಮಂತ್ರ ರೀ ಇದು. ಜನರಿಂದಮೇ ನನಗೆ ಜಯ ಆಗುವ ಮಂತ್ರ ರೀ. ಜನಮೇಜಯ ಮಂತ್ರ ಇದು. ಇನ್ನೂ ಅನೇಕ ಅರ್ಥ ಇದೆ. ಅಹಿಂ ದಶತೀತಿ ಎಂದು ಅರ್ಥ





ಮಾಡಬಹುದು. ಅಂದರೆ ಸರ್ಪವನ್ನೇ ಕಚ್ಚುವಂತದ್ದು ಅಥವಾ ಅಹಿಂ ದದಾತೀತಿ ಅಂದರೆ ಸರ್ಪವನ್ನು ಸೃಷ್ಟಿಸುವಂತದ್ದು, ಮುಂತಾದ್ದು ಮುಂತಾದ್ದು . ಅದೇ ರೀತಿ ಅಹಿಂದ ಅಂದರೆ ಆ್ಯಂಟೀ ಹಿಂದೂ ಮಂತ್ರ ಎಂಬಿತ್ಯಾದಿ ನಿಗೂಢ ಅರ್ಥನೂ ಒಳಗಡಗಿದೆ ಕೂಡಾ ರೀ.

ಎರಡನೇ ಪಾರ್ಟಿ - ಅಂದ ಹಾಗೆ ಇದನ್ನು ನೆಲದಲ್ಲಿ ಕೂತು ಜಪಿಸಬೇಕಾ? ಅಥವಾ ಕುರ್ಚಿಯಲ್ಲಿ ಕೂತು ಅನ್ನಬಹುದಾ? ಸ್ವಲ್ಪ ವಿವರಿಸುತ್ತೀರಾ?

ಒಂದನೇ ಪಾರ್ಟಿ - ಸರಿಯಾದ ಪ್ರಶ್ನೆ ಕೇಳಿದಿರಿ. ನೋಡಿ ಇದನ್ನು ಕುರ್ಚಿಯಲ್ಲಿ ಕೂತು ಜಪಿಸಿದರೆ ಕುರ್ಚಿ ಮುರಿದು ಬೀಳುತ್ತೆ. ನೆಲದಲ್ಲಿ ಕೂತು ಜಪಿಸಿದರೆ ನಿಮ್ಮನ್ನು ಕುರ್ಚಿಯಲ್ಲಿ ಕೂರಿಸುತ್ತೆ. ತೂಕಾಡಿಸುತ್ತೆ. ನೆಲದಲ್ಲಿ ಕೂತು ಜಪಿಸಿ ಕುರ್ಚಿಯಲ್ಲಿ ಕೂತಾಗ ಮರೆತು ಬಿಡಬೇಕು ರೀ. ಅಂತಹ ಕಠಿಣ ನಿಯಮ ಬೇಕು ರೀ ಈ ಮಂತ್ರಕ್ಕೆ.

ಎರಡನೇ ಪಾರ್ಟಿ - ಅಂದ ಹಾಗೆ ಇದನ್ನು ಎಲ್ಲರೂ ಜಪ ಮಾಡಬಹುದಾ?

ಒಂದನೇ ಪಾರ್ಟಿ - ನೀವೀಗ ತುಂಬ ಸೀಕ್ರೇಟ್ ಪ್ರಶ್ನೆ ಕೇಳಿದಿರಿ. ಇದನ್ನು ಎಲ್ಲರೂ ಜಪಮಾಡಬಾರದು. ಎಲ್ಲರೂ ಅಂದರೆ ರಾಜಕೀಯದಲ್ಲಿರುವವರು. ಎಲ್ಲರೂ ಇದನ್ನು ಜಪಮಾಡಿದರೆ ಇದರ ಪವರ್ ಹೋಗಿಬಿಡುತ್ತದೆ. ಇದನ್ನು ಸೃಷ್ಟಿ ಮಾಡಿದವರು ಮತ್ತು ಉಪದೇಶಿಸಲ್ಪಟ್ಟವರು ಮಾತ್ರ ಜಪಮಾಡಿದರೆ ಪವರ್ ಬಂದು ಬಿಡುತ್ತೆ. ಆದರೆ ಎಲ್ಲರೂ ಇದನ್ನು ಪ್ರಚಾರ ಮಾಡಬಹುದು. ಮತ್ತೆ ಪ್ರಚಾರ ಮಾಡಲೇಬೇಕು ಕೂಡಾ. ಇದನ್ನು ವಿಶೇಷವಾಗಿ ರಾಜಕೀಯ ಕಾಲ್ತುಳಿತಕ್ಕೆ, ರಾಜಕೀಯ ಶೋಷಣೆಗೆ, ರಾಜಕೀಯ ಅನ್ಯಾಯಕ್ಕೆ ಒಳಗಾದವರು ಜಪಮಾಡಿದರೆ ಭಾರೀ ವಿಶೇಷ. ಆದ್ದರಿಂದ ಇದನ್ನು ನಾವು ಹೊರತು ಬೇರೆ ರಾಜಕೀಯದವರ್ಯಾರೂ ಜಪಮಾಡಬಾರದೆಂದು ಬರೆಯಿರಿ. ಈ ಮಂತ್ರ ಪೇಟೆಂಟ್‌ಗಳೂ ಪೇರೆಂಟುಗಳೂ ಆದ ನಮಗೆ ರೆಂಟ್ ಪೇ ಮಾಡದೆ ಅದು ಹೇಗೆ ಬೇರೆಯವರು ಜಪಿಸಬಹುದು ರೀ?

ಒಂದನೇ ಪಾರ್ಟಿ. ಈ ಮಂತ್ರ ಸೃಷ್ಟಿಸಿದ್ದು ಯಾರ್ರೀ?

ಒಂದನೇ ಪಾರ್ಟಿ - ಒಂದು ಲೆಕ್ಕದಲ್ಲಿ ಸೃಷ್ಟಿಸಿದ್ದು ನಾವೇ ಕೆಲವು ಜನಸೇರಿ ಎಂದು ಹೇಳಬೇಕು. ಈ ಹಿಂದೆ ಭಡ್ತಿ ಚಳವಳಿ ನಡೆಯಿತು ನೋಡಿ. ಆವಾಗ ಯಾವುದೋ ಸ್ವಾಮಿಗಳು ಇದನ್ನು ಸೃಷ್ಟಿಸಿದ್ದು. ಆಮೇಲೆ ನಾವು ಇದನ್ನು ಕಂಡುಕೊಂಡದ್ದು. ನಿಜಹೇಳುದಿದ್ದರೆ ಮೆಲ್ಲನೆ ಕದ್ದುಕೊಂಡದ್ದು ಮಾರಾಯರೇ. ನೀವು ಬರೆಯುವಾಗ ನಾವೇ ಈ ಮಂತ್ರದ ದ್ರಷ್ಟಾರರು ಎಂದು ಬರೆದು ಬಿಡಿ. ಅದುವೇ ಸರಿಯಾಗುತ್ತೆ. ಸೃಷ್ಟಿಸಿದವರಿಗೆ ಮಾತ್ರ ಇದರ ಉಪದೇಶ ಕೊಡುವ ಅಧಿಕಾರ ಎಂದು ಬರೆದು ಬಿಡಿ.

ಎರಡನೇ ಪಾರ್ಟಿ - ಇದನ್ನು ಎಷ್ಟು ಬಾರಿ ಜಪಮಾಡಬೇಕು?

ಒಂದನೇ ಪಾರ್ಟಿ - ಅದೇ ನಾನು ಹೇಳಿದೆನಲ್ಲಾ ಫಲ ಬರುವ ತನಕ ಮಾಡಬೇಕು. ಬಂದ ಮೇಲೆ ಬಿಡಬೇಕು ಅಷ್ಟೆ.

ಎರಡನೇ ಪಾರ್ಟಿ - ಹಾಗಿದ್ದರೆ ಇದರ ಫಲವಿಸ್ತಾರಗಳೇನು ?

ಒಂದನೇ ಪಾರ್ಟಿ - ಮುಖ್ಯವಾಗಿ ನಿರುದ್ಯೋಗಿಗಳಿಗೆ ಈ ಮಂತ್ರದಿಂದ ಉದ್ಯೋಗ ಸಿಕ್ಕಿಬಿಡುತ್ತೆ , ಧನಕನಕ ವಾಹನ ವಸ್ತು ವಗೈರೆ ಬಂಗ್ಲೆ ಗಿಂಗ್ಲೆ ಎಲ್ಲಾ ಸಿಕ್ಕಿ ಬಿಡುತ್ತೆ. ಮುಖ್ಯವಾಗಿ

ರಾಜಕೀಯ ವ್ಯಕ್ತಿಗಳಿಗೆ ಇದು ಸಂಬಂಧಿಸಿದ್ದಾಗಿದ್ದರಿಂದ ರಾಜಕೀಯ ದೌರ್ಜನ್ಯಕ್ಕೊಳಗಾದವರು ಈ ಮಂತ್ರ ಜಪಮಾಡಿದರೆ ಅವರಿಗೆ ಮನಃ ಶಾಂತಿ ಸಿಗುತ್ತದೆ ಯಾಕೆಂದರೆ ದೌರ್ಜನ್ಯ ಮಾಡಿದವರ ಮನಸ್ಸಿಗೆ ಇದು ಅಶಾಂತಿ ನೀಡುತ್ತದ್ದಾದ್ದರಿಂದ. ಆದರೆ ಇದು ಡೇಂಜರ್ ಏನೆಂದರೆ ಅವರೂ ಇದನ್ನು ಜಪಮಾಡಿದರೆ ನಮಗೆ ಪುನಃ ಮನಃ ಶಾಂತಿ ತಪ್ಪಿ ಹೋಗುತ್ತದೆ. ಇದರ ಫಲಶ್ರುತಿ ತಪ್ಪುತ್ತದೆ. ಆದ್ದರಿಂದ ಇದು ಮಂತ್ರ ಅಂದರೆ ಮಂತ್ರಾಲೋಚನೆಯಂತೆ ನಮ್ಮ ಹತ್ತಿರ ಮಾತ್ರ ಇಟ್ಟುಕೊಳ್ಳುವಂತಾದ್ದು. ಇದು ಬಹಳ ಮುಖ್ಯ ಮತ್ತು ಕಷ್ಟದ ಕೆಲಸ ರೀ.

ಎರಡನೇ ಪಾರ್ಟಿ - ಈ ಮಂತ್ರ ಜಪಿಸಲಿಕ್ಕೆ ಮಡಿಗಿಡಿ ಏನಾದರೂ ಬೇಕಾ?

ಒಂದನೇ ಪಾರ್ಟಿ - ಮಡಿಗಿಡಿ ಇರಬಾರದು. ಇದಕ್ಕೆ ರಾಜಕೀಯ ಗಡಿಬಿಡಿಯೇ ಸರಿಯಾದ ಮಡಿ. ಚುನಾವಣೆ ಸಮಯ ಉಂಟು ನೋಡಿ ಇದು ಇದಕ್ಕೆ ಗ್ರಹಣ ಸಮಯದಂತೆ ಪರ್ವಸಮಯ. ಈ ಸಮಯದಲ್ಲಿ ಚೆನ್ನಾಗಿ ಮತ್ತು ಜೋರಾಗಿ ಜಪಿಸಿದರೆ ಖಂಡಿತಾ ಅಧಿಕಾರ ಗ್ರಹಣವಾಗುತ್ತದೆ.

ಎರಡನೇ ಪಾರ್ಟಿ ಇದಕ್ಕೆ ಹೋಮಗೀಮ ಏನಾದರೂ ಮಾಡಿಸಬೇಕಾ?

ಒಂದನೇ ಪಾರ್ಟಿ - ಹೋಮಗೀಮಾ ಮಾಡಿಸಿದ್ದಕ್ಕೇನೇ ಈ ಮಂತ್ರವನ್ನು ನಾವು ಕಂಡುಕೊಂಡದ್ದು ರೀ. ಮತ್ತೆ ಪುನಃ ಬೇರೆ ಹೋಮಗೀಮ ಯಾಕೆ? ಇದನ್ನೇ ಸರಿಯಾಗಿ ಜಪಮಾಡಿದರೆ ಸಾಕು. ಇದು ಶತ್ರುಗಳನ್ನೇ ಹೋಮ ಮಾಡಿಬಿಡುತ್ತೆ.

ಎರಡನೇ ಪಾರ್ಟಿ - ಮಧ್ಯದಲ್ಲಿ ಒಂದು ಚಿಕ್ಕ ಪ್ರಶ್ನೆ - ಅಲ್ಲಾ ಅಹಿಂದಃ ಪತಿತೋ ಭವೇತ್ ಎಂದು ಯಾರೋ ಸ್ವಾಮಿಗಳು ಇದಕ್ಕೆ ಶಾಪ ಕೊಟ್ಟಿದ್ದಾರಂತೆ ಹೌದಾ?

ಒಂದನೇ ಪಾರ್ಟಿ - ಆ ಶಾಪ ತೆಗಿಸಲಿಕ್ಕೇನೇ ನಾವೂ ಅನೇಕ ಸ್ವಾಮಿಗಳನ್ನು ಕರೆಸಿದ್ದು . ವೇದಿಕೆಯಲ್ಲಿ ಎಷ್ಟು ಸ್ವಾಮಿಗಳಿದ್ದರು ನೋಡಿದಿರಾ? ಮತ್ತೆ ಶಾಪ ಎಲ್ಲಿ? ಶಾಪನೂ ಇಲ್ಲ ಪಾಶನೂ ಇಲ್ಲ.

ಎರಡನೇ ಪಾರ್ಟಿ- ಅಲ್ಲರೀ ಈ ಮಂತ್ರದಲ್ಲಿ ಹಿಂ ಎಂದು ಮಾತ್ರ ಬೀಜವನ್ನು ಚಿಕ್ಕದು ಮಾಡಿ ಹೇಳಿದರೆ ಸಾಕಲ್ವಾ? ಉಳಿದದ್ದೆಲ್ಲಾ ಅದರಲ್ಲೇ ಸೇರುವುದಿಲ್ಲವಾ? ಪೂರ್ಣ ಜಪಮಾಡಬೇಕಾ?

ಒಂದನೇ ಪಾರ್ಟಿ - ದೊಡ್ಡದ್ದಿದ್ದನ್ನೇ ನಾವು ಚಿಕ್ಕದು ಮಾಡಿಕೊಟ್ಟದ್ದು. ಪುನಃ ಚಿಕ್ಕದು ಮಾಡುವುದೆಲ್ಲಿಗೆ? ಹಾಗೆಲ್ಲಾ ಮಂತ್ರವನ್ನು ಚೇಂಜ್ ಮಾಡಲು ಹೋಗಬೇಡಿ. ಫಲಹೋಗಿಬಿಡುತ್ತೆ.

ಎರಡನೇ ಪಾರ್ಟಿ - ಅದೇನೋ ಅಮುಂದಾಯ ನಮಃ. ಒಬ್ಬಾವಿನೇ ನಮಃ ಎಂದು ಇನ್ನೊಂದು ಮಂತ್ರ ಇದೆಯಂತೆ ಹೌದಾ?

ಒಂದನೇ ಪಾರ್ಟಿ (ಸ್ವಲ್ಪ ಕಸಿವಿಸಿ) ಯಾರು ಹೇಳಿದ್ದು? ಈ ಪ್ರಶ್ನೆಯನ್ನೆಲ್ಲಾ ಬರೆಯಬೇಡಿ. ಇರುವುದು ಅಹಿಂದ ಮಂತ್ರ ಒಂದೇ. ಈ ಮಂತ್ರವೇ ಎಲ್ಲಾ ಮಂತ್ರವನ್ನು ಹೊಡೆದು ಹಾಕುತ್ತೆ. ತಾರಕ ಮಂತ್ರರೀ ಇದು. ಇದು ಒಂದೇ ಇರಬೇಕು. ಉತ್ತರದಲ್ಲಿ ಈ ಮಂತ್ರ ಜಪಿಸಿ ಎಷ್ಟು ಜನ ಮೇಲೆ ಬಂದಿದ್ದಾರೆ ಗೊತ್ತಾ?





ಎರಡನೇ ಪಾರ್ಟಿ - ಬೇರೆ ಏನಾದರೂ ಹೇಳುವುದುಂಟಾ?

ಒಂದನೇ ಪಾರ್ಟಿ - ಈ ಮಂತ್ರವನ್ನು ಓದಿದವರು ಕನಿಷ್ಠ ನೂರು ಜನರಿಗಾದರೂ ಈ ಪೇಪರ್‌ಕಟ್ಟನ್ನು ಪೋಸ್ಟ್ ಮಾಡಬೇಕು. ಇಲ್ಲದಿದ್ದರೆ ಅವರ ತಲೆ ಹೋಳಾಗಿ ಬಿಡುತ್ತದೆ ಎಂದು ಬರೆಯಿರಿ. ನಿಮ್ಮ ಪೇಪರ್ ಸರ್ಕ್ಯುಲೇಷನ್ ಕೂಡಾ ತ್ಸುನಾಮಿಯಂತೆ ಈ ಮಂತ್ರದಿಂದ ಏರುತ್ತದೆ ನೋಡಿ. ನೋಡಿ ಮತ್ತೆ ಈ ಅಹಿಂದ ಮಂತ್ರದ ಪ್ರಭಾವ ಎನ್ನುತ್ತಿರಲು.

ಆ ಕಡೆಯಿಂದ ಒಂದನೇ ಪಾರ್ಟಿಯವರಿಗೆ ಏನೋ ಸೆಲ್ ಫೋನ್ ಬಂದು ಒಂದನೇ ಪಾರ್ಟಿಯವರು ತಲ್ಲೀನರಾಗುತ್ತಿರಲು ಎರಡನೇ ಪಾರ್ಟಿಯವರು ಗುಡ್ಲಕ್ ಎನ್ನುತ್ತಾ ಅಲ್ಲಿಗೆ ಜಾಗ ಖಾಲಿ ಮಾಡಿ ಅಹಿಂದ ಮಂತ್ರವನ್ನು ಜಪಿಸಿಕೊಂಡು ಹಿಂದೆ ಬಂದದ್ದಾಯ್ತು.

ಅಷ್ಟರಲ್ಲಿ ಅಲ್ಲೇ ಹಿಂದಿನಿಂದ ವಾಚ್ ಮಾಡುತ್ತಿದ್ದ ಗೂಢಾಚಾರ ಮಾಡುತ್ತಿದ್ದ ಅಮುಂದ ಮಂತ್ರದ ಪ್ರತ್ಯಂಗಿಕ ಮಂತ್ರದ ಕಾರ್ಯಕರ್ತರು ಎದುರಾದಾಗ ಇವರದ್ದೂ ಒಂದು ಬಾಕ್ಸ ಐಟಂ ಮಾಡೋಣ ಎಂದು ತಡೆದು ನಿಲ್ಲಿಸಿ ಪ್ರಶ್ನೆ ಕೇಳಿದೆ.

ಎರಡನೇ ಪಾರ್ಟಿ - ರೀ ಅಮುಂದ ಚಳುವಳಿಯ ಮುಖ್ಯ ಉದ್ದೇಶ ಏನ್ರೀ?

ಮೂರನೇ ಪಾರ್ಟಿ - ರಾಜ್ಯಕ್ಕೆ ಮೂರು ಮುಖ್ಯಮಂತ್ರಿಗಳು ಬೇಕು ಎಂದು. ಒಬ್ಬನೇ ಮುಖ್ಯಮಂತ್ರಿಯಾದರೆ ಆ ಜಾತಿ ಬಿಟ್ಟು ಉಳಿದ ಎರಡು ಎರಡು ಮುಖ್ಯ ಜಾತಿಯವರಿಗೆ ಬೇಜಾರಾಗುವುದಿಲ್ಲವಾ? ಅದಕ್ಕೆ.

ಎರಡನೇ ಪಾರ್ಟಿ - ಅದು ಹೇಗೇರೀ ಒಂದು ರಾಜ್ಯಕ್ಕೆ ಮೂರು ಮುಖ್ಯಮಂತ್ರಿ? ಇದರಲ್ಲೇನೂ ಸೆನ್ಸ್ ಸೌಂಡಾಗುವುದಿಲ್ಲವಲ್ಲಾ?

ಮೂರನೇ ಪಾರ್ಟಿ - ಅದು ಯಾಕಾಗಬಾರದು? ಒಂದು ಜಗತ್ತಿಗೆ ಅನೇಕ ಜಗದ್ಗುರುಳಿರುವುದಿಲ್ಲವಾ? ಹಾಗೇನೇ ಒಂದೇ ರಾಜ್ಯಕ್ಕೆ ಅನೇಕ ಮುಖ್ಯಮಂತ್ರಿಗಳಿದ್ದರೆ ಏನು ಹೋಗುತ್ತೆ? ಮೂರು ಮುಖ್ಯಮಂತ್ರಿಗಳು ಬೇಕೇಬೇಕು. ಇಲ್ಲದಿದ್ದರೆ ಜಾತಿ ಸಾಮರಸ್ಯ ಕದಡಿ ಹೋಗುತ್ತೆ. ನಾವು ಬಿಡುವುದಿಲ್ಲ ಎಷ್ಟು ಮಾತ್ರಕ್ಕೂ.

ಎರಡನೇ ಪಾರ್ಟಿ - ನಾನು ಸ್ವಲ್ಪ ಬೆನ್ನು ನೆಟ್ಟಗೆ ಮಾಡಿ ಒಂದು ಸರ್ತ ಪ್ರಶ್ನೆ ಕೇಳಬಹುದಾ ಸಾರ್? ಬೇಜಾರಿಲ್ಲವಲ್ಲವಾ?

ಮೂರನೇ ಪಾರ್ಟಿ - ಕೇಳಿ ಸಾರ್. ಅದಕ್ಕೇನಂತೆ, ನಮಗೆ ಸರಿಹೊಂದಿಲ್ಲವೆಂದರೆ ಮರುದಿನ ನಾವು ಹಾಗೆ ಹೇಳಿಯೇ ಇಲ್ಲ ಎಂದು ಹೇಳಿದರೆ ನಿಮಗೂ ಬೇಜಾರಿಲ್ಲವಲ್ಲ ಸಾರ್?

ಎರಡನೇ ಪಾರ್ಟಿ - ಸಾರ್ ಈ ರೀತಿ ನೀವು ಅಮುಂದ ಮಂತ್ರ ಜಪ ಮಾಡಿದರೆ ಜಾತಿ ದ್ವೇಷ ಹೊತ್ತಿಕೊಂಡು ಜನಗಳು ಉರಿದುಹೋಗುವುದಿಲ್ಲವಾ? ಹುರಿದುಹೋಗುವುದಿಲ್ಲವಾ? ಸಮಾಜ ಸುಟ್ಟು ಹೋಗುವುದಿಲ್ಲವಾ?

ಮೂರನೇ ಪಾರ್ಟಿ - ಏನು ಹೇಳುತ್ತೀರಿ ಸಾರ್? ಈ ಸರಕಾರ ಬಂದ ಮೇಲೆ ಸೀಮೆ ಎಣ್ಣೆ ಸಿಗುವುದಿಲ್ಲ. ಕರೆಂಟು ಹತ್ತುವುದಿಲ್ಲ. ಬ್ಯಾಟ್ರಿ ಚಾರ್ಜ್ ಆಗುವುದಿಲ್ಲ. ಕಲ್ಲಿದ್ದಲು ಎಲ್ಲೂ ಇಲ್ಲ. ನಾವು ಅಡುಗೆ ಮಾಡುವುದು ಬೇಡವಾ? ಬೇಳೆ ಬೇಯಿಸುವುದು ಬೇಡವಾ? ನಾವೇನು ನಿಮ್ಮ ಹಾಗೆ ಅಂಗಡಿಗೆ ಹೋಗಿ ಸಾಮಾನು ತರಲಿಕ್ಕಾಗುತ್ತಾ? ಕಟ್ಟಿಗೆತರಲಿಕ್ಕಾಗುತ್ತಾ? ಕೊನೆಗೇನು ಮಾಡುವುದು? ಹತ್ತಿರದಲ್ಲಿದ್ದ ನಮ್ಮ ಜನಗಳನ್ನೇ

ಒಲೆಗೆ ತಳ್ಳಿ ಬೇಳೆ ಬೇಯಿಸುವುದು. ಅಲ್ಲರೀ, ಅವರು ಬೇಯಿಸಬಹುದಂತೆ! ನಾವು ಬೇಯಿಸಬಾರದಾ? ನಮ್ಮ ಕೊಲಿಗೆಲ್ಲಾ ಅದನ್ನೇ ಮಾಡುವುದಲ್ಲವಾ? ಅದೇ ಸುಲಭವಲ್ಲವಾ? ವ್ಯವಸ್ಥೆನೇ ಹಾಗಿದೆ ರೀ. ಯಾರೇನು ಮಾಡೋಕ್ಕಾಗುತ್ತೆ?

ಓ ಇದೂ ಬಹಳ ಜೋರಿದೆ. ಇದನ್ನು ಪುರುಸೋತ್ತಿನಲ್ಲಿ ಸಂದರ್ಶಿಸಬೇಕು ಎಂದು ನಾನು ಮುಂದರಿದರೆ ಅವರ ಹಿಂದೆ ಮತ್ತೊಬ್ಬ ಕಾರ್ಯಕರ್ತ ಕೈಕಟ್ಟಿ ನಿಂತಿದ್ದ. ಅವನ ಟೀ ಶರ್ಟಿನ ಹಿಂದೆ ಓಂ ಒಬ್ರಾವಿನೇ ನಮಃ ಎಂದು ಬರೆದಿತ್ತು. ನಾನು ಬರಕೊಳ್ಳೂವುದನ್ನು ನೋಡಿ ಅವ ಬಂದು ಅವರು ಏನೇನು ಹೇಳಿದರು ಸ್ವಲ್ಪ ಹೇಳಿ ಮಾರಾಯರೇ ಎಂದು ನನ್ನನ್ನು ಪುಸಲಾಯಿಸಿದಾಗ ಓ ಈತ ನನ್ನನ್ನೇ ಸಂದರ್ಶನ ಮಾಡುತ್ತಾನೆ ಎಂದು ಗೊತ್ತಾಗಿ ಸದ್ಯಕ್ಕೆ ಮೂರು ಮಂದಿ ಮೂರು ಮಂತ್ರಗಳನ್ನು ಮೆಲುಕಾಡುತ್ತಾ ಮೆಲ್ಲನೆ ಅಲ್ಲಿಂದ ಕಾಲು ಕಿತ್ತದ್ದಾಯ್ತು.

**ಓಂ ಅಂ ಅಹಿಂದಾಯ ನಮಃ। ಓಂ ಮುಂ ಅಮುಂದಾಯ ನಮಃ।**

**ಓಂ ಓಂ ಒಬ್ರಾವಿನೇ ನಮಃ॥**

**-ಸುಶ್ರೀ ತುಂಕೂರು**

## ಸಹಸ್ಪಂದನ

ಧಾರ್ಮಿಕ ಸಾಂಸ್ಕೃತಿಕ ಮಾಸ ಪತ್ರಿಕೆ ಸುಗುಣಮಾಲ ಓದಲು ಬಹಳ ಇಷ್ಟ. ಪುತ್ತಿಗೆ ಮಠದ ಶ್ರೀಗಳವರ ಸುಧಾಸುವಚನ ತುಂಬಾ ಚೆನ್ನಾಗಿದೆ.

**ಜಯಲಕ್ಷ್ಮೀ ಮಯ್ಯ** **ಮುಳುಂದ, ಮುಂಬೈ**

ಸುಗುಣಮಾಲಾ ಮಾಸಿಕ, ಆಧ್ಯಾತ್ಮಿಕ - ರಾಷ್ಟ್ರೀಯ - ಜನಪ್ರಿಯ - ವೈಚಾರಿಕ ಪತ್ರಿಕೆ ಇದ್ದು, ಪ್ರತಿಯೋರ್ವ ಕನ್ನಡಿಗರು, ಅನ್ಯ ಭಾಷಿಗರು ಓದಿ ಜ್ಞಾನ ಸಂಪಾದಿಸಿಕೊಳ್ಳತಕ್ಕ ವಿಶೇಷ ಪತ್ರಿಕೆ. ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ಸಂದೇಶಗಳು, ಶ್ರೀಮತಿ ಸುಶ್ರೀಯವರ ಮರ್ಮಮೀಮಾಂಸೆ ಉತ್ಕೃಷ್ಟ ಶ್ರೇಣಿಯಾಗಿದ್ದು, ನಮ್ಮೆಲ್ಲರ ಒಳಗಣ್ಣು ತೆರೆಸಿದೆ. ಜಾಹ್ನವಿ ಆಚಾರ್ಯರ ನೀತಿ ವಾಕ್ಯಗಳು ಚೆನ್ನಾಗಿವೆ. ಭಗವಾನ್ ವೇದವ್ಯಾಸರು ನಿರ್ದೇಶಿಸಿದ ಗಾಯತ್ರಿ ಜಪ ಚೆನ್ನಾಗಿ ತಿಳಿಸಿದ್ದಾರೆ. ಈ ಪತ್ರಿಕೆಯ ಒಳಪುಟಗಳೂ ಜ್ಞಾನ ತುಂಬಿವೆ.

**ಹನುಮಂತ ಶೆಟ್ಟಿ** **ನಾಣ್ಯಾಪುರ**

ಆಗಸ್ಟ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ 'ಮರ್ಮಮೀಮಾಂಸೆ' ಎಂಬ ಶೀರ್ಷಿಕೆಯಲ್ಲಿ ಪ್ರಟವಾದ ಇಂಗ್ಲೀಷ್ ಭಾಷೆಯ ವ್ಯಾಮೋಹ - ಪ್ರಯೋಗ - ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಿದ ಅತ್ಯುತ್ತಮ ಲೇಖನ. ಪ್ರಕಟಿಸಿದ ಸುಗುಣಮಾಲಾ ಹಾಗೂ ಲೇಖಕರಿಗೆ ಧನ್ಯವಾದಗಳು.

**ವೇದವ್ಯಾಸ ಭಟ್** **ಶಿವಮೊಗ್ಗ**





ನ್ಯೂಜರ್ಸಿಯ ಶ್ರೀಕೃಷ್ಣವೃಂದಾವನದಲ್ಲಿ ಚಾತುರ್ಮಾಸ್ಯ ಪರ್ವಸಮಯದಲ್ಲಿ ಭಕ್ತರಿಗೆ ಮುದ್ರಾಧಾರಣೆ ಮಾಡುತ್ತಿರುವ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು.



ನ್ಯೂಜರ್ಸಿಯ ಶ್ರೀಕೃಷ್ಣ ಬೃಂದಾವನದಲ್ಲಿ ಜಿಜ್ಞಾಸುಗಳಿಗೆ ಉಪನಿಷತ್ ಪಾಠಮಾಡುತ್ತಿರುವ ಶ್ರೀ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು.



ಚಾತುರ್ಮಾಸ್ಯ ಸಮಯದಲ್ಲಿ ನಡೆದ ಮಕ್ಕಳ ಸಾಂಸ್ಕೃತಿಕ ಶಿಬಿರವನ್ನು ಉದ್ದೇಶಿಸಿ ಹಿತವಚನ ನೀಡುತ್ತಿರುವ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು.

ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಶ್ರೀ ಸುಧಾಸುವಚನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -42 ಮೊಕ್ಕಾಂ: ನ್ಯೂಜರ್ಸಿ

ಅಶೇಷಾತ್ ಎಂದು ವ್ಯಸ್ತವಾಗಿ ಹೇಳಿದ್ಯಾಕೆ ಎಂಬುದನ್ನು ಕಂಡದ್ದಾಯ್ತು. ಅಂದಂತೆ ಅಶೇಷಾತ್ ವಿಶೇಷೇಣ ವಂದ್ಯಂ ಎಂಬ ವಿಶೇಷಣದ ಬಗ್ಗೆನೂ ಸಾಕಷ್ಟು ವಿಶ್ಲೇಷಣವನ್ನೂ ಮಾಡಿದ್ದಾಯ್ತು.

ಇದೀಗ ಸದಾ ಮಮ ಪ್ರಿಯತಮಂ ಎಂಬ ವಿಶೇಷಣದ ಬಗ್ಗೆ.

ಟೀಕಾರ್ಯರು ಈ ವಿಶೇಷಣಕ್ಕೆ ವ್ಯಾಖ್ಯಾನಿಸುತ್ತಾ ಸದಾ ಇತ್ಯನೇನ ಪರಮಪ್ರೇಮಯೋಗ್ಯತ್ವಮುಕ್ತಮ್ ಎಂದು ವ್ಯಾಖ್ಯಾನಿಸಿ ಪುನಃ ಅವರೇ ತತ್‌ಕ್ಷಣ ತಸ್ಯ ಅನಾನುಭವಿಕತ್ವಾದಸಂಭವಮಾಶಂಕ್ಯ ಸದಾ ಮಮ ಎಂದು - ಅಲ್ಲಾ ಅದು ನಿಮಗಲ್ಲಾ. ನಿಮಗೆ ಅದರ ಅನುಭವವಿಲ್ಲ. ಅದು ನನಗೆ ಅಂದರೆ ಆಚಾರ್ಯರಿಗೆ ಹೇಳಿದ್ದು ಎಂದು ಪಕ್ಕನೇ ವಿವರಣೆಯನ್ನು ಕೊಟ್ಟುಬಿಟ್ಟು ಪುನಃ ನಿಮಗೂ ಜ್ಞಾನ ಬಂದ ಮೇಲೆ ಅದು ಅನುಭವಕ್ಕೆ ಬಂದೇ ಬರುತ್ತೆ. ಅನ್ಯೇಷಾಮಪಿ ಜ್ಞಾನೋತ್ತರಕಾಲ ಮಿದಮಾನುಭಾವಿಕಂ ಮಮ ತು ಸದೇತಿ ಎಂದು ಅಂದು ಬಿಟ್ಟರು.

ಈ ವ್ಯಾಖ್ಯಾನವನ್ನು ಗಮನಿಸಿದಾಗ ಟೀಕಾರ್ಯರು ಇಲ್ಲಿ ಪ್ರಶ್ನೆಗಳ ಜೇನುಗೂಡನ್ನೇ ಜಾಡಿಸಿಬಿಟ್ಟರೋ? ಸಂಶಯ.

ನೋಡಿ. ಒಂದನೆಯದಾಗಿ ಇಲ್ಲಿ ಪ್ರೇಮದಲ್ಲಿ ಪರಮತ್ವ ಎಂದರೇನು? ಉತ್ತಮ ಎಂದರ್ಥವೋ? ಅಥವಾ ಉತ್ಕಟ ಎಂದರ್ಥವೋ? ಅಥವಾ ಅಂತಿಮ ಎಂದರ್ಥವೋ? ಯಾವುದೇ ಅರ್ಥವಾದರೂ ಅದು ಅನ್ಯಅಗತವಾಗಿ ಆಚಾರ್ಯೈಕ ಗತವಾಗುವುದು ಹೇಗೆ? ಎಂಬ ಒಂದು ಪ್ರಶ್ನೆ.

ಮತ್ತೆ ಪುನಃ ಟೀಕಾರ್ಯರು ಪರಮಪ್ರೀತಿವಿಷಯ ಎಂಬರ್ಥವುಳ್ಳ ಪ್ರಿಯತಮ ಶಬ್ದಕ್ಕೆ ಪರಮಪ್ರೇಮಯೋಗ್ಯ ಎಂದರ್ಥ ಎಂದು ವ್ಯಾಖ್ಯಾನಿಸಿದ್ದು ಇದು ಯಾಕೆ? ಎಂಬ ಮಗದೊಂದು ಪ್ರಶ್ನೆ.

ಪರಮಪ್ರೇಮಯೋಗ್ಯತ್ವ ಎಂದೇ ಅರ್ಥ ಇಟ್ಟುಕೊಂಡಿದ್ದರೆ ಆವಾಗ ಅಲ್ಲಿ ಅದು ಆನುಭವಿಕ ಅನಾನುಭಾವಿಕ ಎಂಬ ಚರ್ಚೆ ಏನು ಬಂತು? ಎಂಬುದು ಮತ್ತೊಂದು ಪ್ರಶ್ನೆ.

ಇನ್ನೂ ಸ್ವಾರಸ್ಯವೆಂದರೆ ನಿಮಗೆಲ್ಲಾ ಅದರ ಅನುಭವವಿಲ್ಲ ಅದು ನಮಗೆ ಮಾತ್ರ ಎಂದು ಹೇಳಿ ತತ್‌ಕ್ಷಣ ಅಲ್ಲಾ ನಿಮಗೂ ಮುಂದಕ್ಕೆ ಅನುಭವಕ್ಕೆ ಬರುತ್ತದೆ ಎಂದು ಹೇಳಿದ್ದರ ಔಚಿತ್ಯವೇನು? ಅಂದರೆ ಬೇರೆಯವರಿಗೆ ಉತ್ಕಟಪ್ರೇಮ ಅಂದರೆ ಏನು ಎಂದೇ ಗೊತ್ತಿಲ್ಲವೆಂದರ್ಥವೋ? ಅಥವಾ ನನ್ನಷ್ಟು ಉತ್ಕಟಪ್ರೇಮ ಬೇರೆಯವರಿಗೆ ಇಲ್ಲ ಎಂದರ್ಥವೋ?

ಅಥವಾ ದೇವರಲ್ಲಿ ಮಾತ್ರ ನನ್ನಷ್ಟು ಉತ್ಕಟಪ್ರೀತಿ ಬೇರೆ ಯಾರಿಗೂ ಇಲ್ಲವೆಂದರ್ಥವೋ? ಅಲ್ಲಾ ಎಲ್ಲೂ ಉತ್ಕಟಪ್ರೇಮ ಎಂಬುದು ಯಾರಿಗೂ ಇಲ್ಲ ಎಂದರ್ಥವೇ? ಹಾಗಿದ್ದರೆ ರಾಗವೇ ಇಲ್ಲವೆಂದಾಗಿ ಜೀವಿಗಳಿಗೆ ಸಂಸಾರ ಹೇಗೆ ಬಂತು? ಮುಂದಾದರೂ ಆಚಾರ್ಯರ ಮಟ್ಟದ ಉತ್ಕಟತೆ ಉಳಿದವರಿಗೆ ಹೇಗೆ ಅನುಭವಿತವಾಗಲು ಸಾಧ್ಯ? ಪ್ರೇಮಯೋಗ್ಯ ಎಂದು ಅರ್ಥಹಚ್ಚಿದ ಮೇಲೆ ಆ ಪ್ರೇಮಯೋಗ್ಯತ್ವ ಒಬ್ಬರಿಗೆ ಆನುಭವಾವಿಕ ಇನ್ನೊಬ್ಬರಿಗೆ ಅಲ್ಲ ಎಂಬುದು ಹೇಗೆ ಪ್ರೀತಿ ವಿಷಯತ್ವ ಬೇಕಾದರೆ ಆನುಭಾವಿಕ ಅನಾನುಭಾವಿಕವಾಗಲಿ ಪ್ರೀತಿಯೋಗ್ಯತ್ವ ಅದು ಆನುಭಾವಿಕ ಅನಾನುಭಾವಿಕವಾಗುವುದಾದರೂ ಹೇಗೆ?

ಮತ್ತೂ ಕೂಡ ಯೋಗ್ಯತ್ವನೂ ಸದಾ ಇರುವುದೋ ತಾತ್ಕಾಲಿಕವಾಗಿ ಬಂದದ್ದೋ? ಎಂಬ ಪ್ರಶ್ನೆನೂ ಬಂದು ಬಿಡುತ್ತೆ. ಆಚಾರ್ಯರು ತನ್ನ ಪ್ರೀತಿಗೆ ಭಗವಂತ ವಿಷಯನಾಗಿದ್ದಾನೆ ಎಂದು ಸದಾ ಪ್ರಿಯತಮಮ್ ಎಂದು ಹೇಳಿದ ಮೇಲೆ ಅದಕ್ಕೆ ಅಲ್ಲ ಪ್ರೀತಿಯೋಗ್ಯ ಎಂದಷ್ಟೇ ಅರ್ಥ ಎಂದು ವ್ಯಾಖ್ಯಾನಿಸಿದರೆ ಹಾಗಿದ್ದರೆ ಆಚಾರ್ಯರಿಗೆ ನಾರಾಯಣನಲ್ಲಿ ಸದಾ ಪ್ರೀತಿ ಇಲ್ಲ ಅಂದು ಅರ್ಥವಾಗುವ ಸಂಭವ ಇಲ್ಲವಾ? ಎಂಬುದು ಮಗದೊಂದು ಪ್ರಶ್ನೆ.

ಇನ್ನೂ ಕೂಡಾ ಜ್ಞಾನೋತ್ತರಕಾಲದಲ್ಲಿ ಉಳಿದವರಿಗೂ ಪರಮಯೋಗ್ಯತ್ವ ಅನುಭವಕ್ಕೆ ಬರುವುದೋ ಅಥವಾ ಸದಾ ಪರಮಪ್ರೇಮಯೋಗ್ಯತ್ವದ ಅನುಭವ ಬರುವುದೋ ಎಂಬುದೊಂದು ಪ್ರಶ್ನೆನೂ ಇಲ್ಲಿ ಬಾರದಿರುವುದಿಲ್ಲವೆಂದೇನಿಲ್ಲವಲ್ಲ?

ಮತ್ತು ಕೂಡಾ ಬೇರೆಯವರಿಗೆಲ್ಲಾ ಮುಂದೆ ಅನುಭವಕ್ಕೆ ಬರುತ್ತೆ ಎಂದರೆ ಬೇರೆ ಯಾರ್ಯಾರು? ಬ್ರಹ್ಮದರ್ಶನವಾಗದವರು ಎಂದರ್ಥವೋ ಅಥವಾ ನನ್ನಕ್ಕಿಂತ ಬೇರೆಯವರು ಎಂದು ಅರ್ಥೈಸುದಾದರೆ ಲಕ್ಷ್ಮೀದೇವಿ ಇತ್ಯಾದಿಯವರಿಗೆ ಸದಾಪ್ರೀತಿ ವಿಷಯತ್ವ ವಿಲ್ಲವೇ? ನೈವ ದೇವಪದಂ ಪ್ರಾಪ್ತಾಃ ಬ್ರಹ್ಮದರ್ಶನವರ್ಜಿತಾಃ ಎಂಬಂತೆ ದೇವತೆಗಳಿಗೆಲ್ಲಾ ಬ್ರಹ್ಮದರ್ಶನವಿದ್ದದ್ದರಿಂದ ನನಗೆ ಮಾತ್ರ ಪರಮಪ್ರೇಮಯೋಗ್ಯತವೆಂಬುದು ಹೇಗೆ ಕೂಡುತ್ತದೆ? ಅಲ್ಲಾ ಬೇರೆಯವರು ಅಂದರೆ ಲಕ್ಷ್ಮೀದೇವತೆಗಳಿಂದ ಬೇರೆಯವರು ಎಂದು ಹೇಳಿದರೆ ಹಾಗಿದ್ದರೆ ಮಮ ಎಂಬುದಕ್ಕೆ ಅಸ್ಮಾಕಂ ಎಂದು ಅರ್ಥ ಮಾಡಬೇಕೇ?

ಇನ್ನೂ ಒಂದು ಪ್ರಶ್ನೆಯೇನೆಂದರೆ ಲಕ್ಷ್ಮೀದೇವತೆಗಳಿಂದ ಬೇರೆಯವರು ಅನುಭವ ಇಲ್ಲದವರು ಎಂದು ಎನ್ನುವಾಗ ನಾರಾಯಣನಕ್ಕಿಂತಲೂ ಬೇರೆಯವರು ಎಂದು ಸೇರಿಸಿಬಿಡುವುದು ಒಳ್ಳೆಯದಲ್ವಾ? ಎಂದು. ಯಾಕೆಂದರೆ ನಾರಾಯಣನಿಗೆ ತಾನು ತನಗೆ ಪರಮಪ್ರೇಮವಿಷಯವಲ್ಲವಾ? ಪರಮಪ್ರೇಮಯೋಗ್ಯವಲ್ಲವಾ? ಎಂಬ ಪ್ರಶ್ನೆಯನ್ನೂ ಯಾರಾದರೂ ಎಬ್ಬಿಸಬಹುದಲ್ಲಾ?

ಇನ್ನೂ ಕೆಲವರ ತುಂಟ ಪ್ರಶ್ನೆಯೇನೆಂದರೆ ಪ್ರೀತಿ ಇದ್ದಮೇಲೆ ಅಲ್ಲಿ ಕಲಹ ಇರಲೇ ಬೇಕು. ಪ್ರೀತಿ ಇದ್ದರೆನೇ ಕಲಹವಾಗುವುದು. ಉತ್ಕಟಪ್ರೀತಿ ಇದ್ದರೆ ಕಲಹ ಅಂತೂ ಆಗಲೇಬೇಕು. ಪ್ರೇಮಕಲಹ ಎನ್ನುವುದಿಲ್ಲವೇ? ಉತ್ಕಟಪ್ರೀತಿ ಇದ್ದರೆ ಉತ್ಕಟಕಲಹವೇ ಆಗಬೇಕು. ಹಾಗಿದ್ದರೆ ಭಗವಂತ ಪ್ರೀತಿ ವಿಷಯ ಅಥವಾ ಪ್ರೀತಿಯೋಗ್ಯನಾದಂತೆ ಕಲಹವಿಷಯನೂ ಕಲಹಯೋಗ್ಯನೂ ಹೌದೇ? ಇವೆ ಹೀಗೆ ಅನೇಕ ಪ್ರಶ್ನೆಗಳೆಂಬ ಮತ್ತ ಜೇನುನೊಣಗಳು ಪರಮಪ್ರೇಮಯೋಗ್ಯ ಎಂಬ ಮಾತನ್ನು ಇಲ್ಲಿ ಮುತ್ತುವುದಿಲ್ಲವೇ?

ಅದಕ್ಕೇನೇ ಹೇಳುವುದು ಪ್ರೀತಿ ಪ್ರೇಮಗಳ ವಿಚಾರದಲ್ಲಿ ವಿಮರ್ಶೆ ಮಾಡಲು ಹೋಗಬಾರದು. ಪ್ರಶ್ನೋತ್ತರಗಳನ್ನೂ ನಡೆಸಬಾರದು. ತಾಪತ್ರಯ ಆಗಿಬಿಡುತ್ತದೆಂದು.

ಆದರೆ ಇದೀಗ ಇಲ್ಲಿ ಪ್ರಿಯತಮತ್ವದ ವಿಚಾರದಲ್ಲಿ ವಿಮರ್ಶೆ ಶುರುಮಾಡಿಯಾಗಿದೆ ತಾನೇ? ಪ್ರಶ್ನೆಗಳು ಮೂಡಿಯಾಗಿವೆ ತಾನೇ? ಆದ್ದರಿಂದ ಏನಾದರೂ ಮಾಡಿ ಈ ಪ್ರಶ್ನೆಗಳಿಗೆಲ್ಲಾ ಉತ್ತರ ಕಂಡುಕೊಳ್ಳಲೇ ಬೇಕಾದರೆ ಬೇರೆ ದಾರಿಯಿಲ್ಲ.

ದಾರಿ ಅದು ಒಂದೇ ಮುಂದಿನ ಸಂಚಿಕೆ ಒಂದೇ. ★